Strike at the Dendeli Paper Mills

ಶ್ರೀ ವಿ. ಎಂ. ಘಾಡಿ.—ದಾಂಡೇಲಿಯಲ್ಲಿರುವ ಕಾಗದದ ಕಾರ್ಖಾನೆಯಲ್ಲಿ ಮುಷ್ಕರ ನಡೆಯುತ್ತಿದೆ. ಕಾರ್ಮಿಕರಲ್ಲದೆ, ಜನರಲ್ ಅಡ್ಮಿನಿಸ್ಟ್ರೇಷನ್ ಸ್ಟಾಫ್ ಸಹಿತ ಅದರಲ್ಲಿ ಸೇರಿ ಒಬ್ಬರೂ ಕೆಲಸಕ್ಕೆ ಹೋಗುತ್ತಿಲ್ಲ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಶಾಂತಿ ಭಂಗವಾಗುವ ಪರಿಸ್ಥಿತಿ ಇದ್ದರೂ ಸಂಬಂಧಪಟ್ಟ ಮಂತ್ರಿಗಳು ಲಕ್ಷ್ಯ ಕೊಟ್ಟಿಲ್ಲ. ಸರ್ಕಾರ ಅತ್ತಕಡೆ ಗಮನ ಹರಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಂದಿದೆ, ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೂ ಇದೇ ವಿಚಾರದಲ್ಲಿ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಇದೆ. ಅದನ್ನು ಬೇಗ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಬೇಗ ಎಂದರೆ ಹೇಗೆ? ಒಂದು ದಿವಸಕ್ಕೆ ನಾಲ್ಕು ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗಳನ್ನು ತೆಗೆದುಕೊಳ್ಳಲಾಗುತ್ತಿದೆ.

Wasting money for Decorating the City Roads during Prime Minister's Visit.

ಶ್ರೀ ಕೋಣಂದೂರು ಲಿಂಗಪ್ಪ.—ಸುಂದರವಾದ ಬೆಂಗಳೂರು ರಾಜಧಾನಿಯನ್ನು ವಿರೂಪಗೊಳಿಸಿರುವುದಕ್ಕೆ ಒಂದು ಪ್ರಕರಣ ನಡೆದಿದೆ. ಪ್ರಧಾನಿಯವರು ಬೆಂಗಳೂರು ನಗರಕ್ಕೆ ಬಂದಾಗ ಬೆಂಗಳೂರಿನ ಸುಂದರವಾದ ರಸ್ತೆಗಳಲ್ಲಿ ಗುಂಡಿ ತೋಡಿಸಿ ಅವುಗಳಲ್ಲಿ ಯಾರೂ ಕೂಡ ಸಂಚಾರ ಮಾಡುವುದಕ್ಕೆ ಆಗದೆ ಇದ್ದ ಹಾಗೆ ರಾಜಧಾನಿಯನ್ನು ಕುರೂಪಗೊಳಿಸಿರುವುದು ಮಾತ್ರವಲ್ಲ ಅದನ್ನು ತುಂಬುವುದಕ್ಕೆ ಲಕ್ಷಾಂತರ ರೂಪಾಯಿ ಸಾರ್ವಜನಿಕ ಹಣ ಖರ್ಚಾಗುತ್ತದೆ. ಪ್ರಧಾನಿಯವರ ಹೆಸರಿನಲ್ಲಿ ಸಾರ್ವಜನಿಕರ ಹಣವನ್ನು ಪೋಲು ಮಾಡುತ್ತಿರುವುದನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್. —ಮಾನ್ಯ ಸದಸ್ಯರು ಹೇಳತಕ್ಕದ್ದು ಸರಿಯಾದುದಲ್ಲ. ಅವರು ಬೇರೆ ಪ್ರಶ್ನೆ ಕಳಿಸಿದರೆ ಉತ್ತರ ತರಿಸಿ ಹೇಳಬಹುದು. ಸಾರ್ವಜನಿಕ ಹಣವನ್ನು ಸರ್ಕಾರ ಖರ್ಚು ಮಾಡಿಲ್ಲ. Let him not give a wrong impression on these matters.

Mysore Land Reforms (Amendment) Bill, 1973, as reported by the J.S.C. Governor's Recommendation—Announcement.

MADAM SPEAKER.—Now we will go to the next item. Motion to be moved for consideration of the Mysore Land Reforms (Amendment) Bill, 1973 as reported by the Joint Select Committee. I have to inform to the House that I have received a message from the Governor recommending for the consideration of the Mysore Land Reforms (Amendment) Bill, 1973 as reported by the Joint Select Committee. Hon. Minister for Revenue may move the motion for consideration.

Sri T. R. SHAMANNA (Fort).—Before that I have a point of order. I am raising the point of order with reference to rule 81 read with rule 235 of the rules of procedure and conduct of Business. Sub-rules (a) and (b) of rule 81 reads thus.

> "81. (a) An amendment shall be within the scope of the Bill and relevant to the subject matter of the clause to which it relates.
>
> (b) Amendment shall not be inconsistent with any previous decision of the Assembly on the same question."

The rule 235 (2) says :

> "235 (2) In other respects, the procedure in a Select Committee shall as far as practicable, be the same as is allowed in the Assembly during the consideration stage of a Bill, with such adaptations, whether by way of modification, addition or omission, as the Speaker may consider necessary or convenient."

My point is that the Joint Select Committee has deviated while suggesting amendments to the Bill which was moved, and discussed in this House as also the original Act of 1961. For instance, section 14 of the original Act permitted resumption of land in case of small holders. But the Joint Select Committee has now deprived them of this provision, further the Joint Select Committee has recommended that 15,000 and odd cases to be dismissed outright. But already thousands of cases have been settled and possessson of land has already been taken away. Therefore this provision will create discrimination and it will also be contrary to the provisions of the Constitution. Further more, the Joint Select Committee has omitted section 16 which is outside the scope of the Committee.

Therefore I submit that the amendments to be proposed by the Joint Select Committee should have been within the framework of the decisions already taken in this House. But the Joint Select Committee has practically deviated to a considerable extent which is not proper. I request the Chair to give a ruling on this point.

Sri D. DEVARAJ URS.—Madam Speaker, I straightaway characterise the objection raised by hon. Member Sri Shamanna as wholly irrelevant. Rule 81 of the rules of procedure speaks of conditions of admissibility of amendments. There is no rule laying down conditions and procedures for Joint Select Committee. The only point the hon. Member wants to make out is that the Joint Select Committee has gone out of bounds in the sense that the amendments originally proposed in the Amending Bill have been further amended by the committee and also that it has suggested some amendments to other clauses which were not in the amending Bill that was referred to the Committee. If this is all the objection, I say with my experience Madam that, that can never be

(SRI D. DEVARAJ URS)

an objection because there are instances where not only these amendments have been modified or suitably amended, but such of the amendments which were not contemplated in the amending Bill have also been suggested by Joint Select Committees. Therefore, to say that the Joint Select Committee has gone out of bounds is not correct and it is perfectly within its bound to suggest amendments apart from the amendments that were already there in the amending Bill.

Secondly, Rule 235 is about Notice of amendments and procedure generally in Select Committees. The Rule quoted by the hon. member was 235 (2). It is only a procedural matter ; it says :

> " (2) In other respcts, the procedure in a Select Committee shall, as far as practicable, be the same as in a Bill, with such adaptations, whether by way of modification, addition or omission, as the Speaker may consider necessary or convenient"

What was the Point of Order to do with this rule I am unable to understand. Therefore, the Point of Order raised by the hon. member Sri Shamanna is not worthy of being considered.

MADAM SPEAKER.—I agree with the Hon'ble Chief Minister. I do not think there is any Point of Order involved in it.

The Hon'ble Minister for Revenue may now move the Bill.

Motion to consider

Sri N. HUTCHAMASTHY GOWDA (Minister for Revenue).— I beg to move :

> " That the Mysore Land Reforms (Amendment) Bill, 1973 as reported by the Joint Select Committee be taken into consideration."

MADAM SPEAKER.—Motion moved :

> " That the Mysore Land Reforms (Amendment) Bill, 1973 as reported by the Joint Select Committee be taken into considertion."

Sri M. S. KRISHNAN.—Ma am Speaker, I rise to a Point of Order. I submit that the amendment to be moved by my friend Sri. T. R. Shamanna does not come under the purview of the rules of procedure and conduct of business.

MADAM SPEAKER.—He has given notice under Rule 76.

Sri M. S. KRISHNAN.—Rule 76 says that the member in charge of the Bill may move an amendment. Here the member in charge is the Hon'ble Minister for Revenue. The question is whether any other member has a right to move that this Bill be referred to another

Joint Select Committee. My submission is that any another member has no right. Proviso to Rule 76 (1) (a) reads as follows :

> " Provided that any member of the Assembly may object to its being so taken into consideration if a copy of the report has not been made available for the use of members for three days, and such objection shall prevail unless the Speaker allows the Bill to be taken into consideration."

The proviso says that any other member of the Assembly can take objection only if the copy of the report has not been given three days earlier. As such the objection in regard to the time cannot be taken at all.

MADAM SPEAKER.—The member in charge has just now moved the Bill. Any member may move an amendment under sub-rule (2) of Rule 76. It says :—

" (2) If the member in charge moves that the Bill as reported by the Select or Joint Select Committee be taken into consideration, any member may move as an amendment that the Bill be re-committed or be circulated or re-circulated for the purpose of eliciting opinion or further opinion thereon."

Sri M. S. KRISHNAN.—Of course, any member may move an amenment to the Bill. But even that sub-rule is governed by the proviso.

As such unless the member in charge agrees to it, no other member can say that it must be recommitted to another Joint Select Committee. So, I do not think permission should be given to move the amendment.

Sri T. R. SHAMANNA.—Madam Speaker, if the contention of my freind Sri Krishnan were to be accepted, there was no need to include that rule at all.

MADAM SPEAKER.—The hon. member may please move his amendment.

Sri T. R. SHAMANNA.—I beg to move :

" That the Mysore Land Reforms (Amendment) Bill, 1973, as reported by the Joint Select Committee be re-committed to a new Joint Select Committee with the following members*to consider the following matters : (*Names of members to be indicated at the time of making the motion)

** 1 Hon'ble Chief Minister,
2 Hon'ble Minister for Law,
3 Hon'ble Minister for Revenue,
4 Hon'ble Minister for Public Works,
5 Hon'ble Minister for Agriculture,
6 Sri H. D. Deve Gowda,
7 Sri S. Kariappa,
8 Sri G. Rame Gowda,
9 Sri K. F. Patil,
10 Sri K. M. Naganna, and five members to be elected by the Legislative Council.

(SRI T. R. SHAMANNA)

1. That it is necessary to give exemption to the following classes of people who deserve exemption from the provisions of the Act.

(*a*) small holders who have no other alternative means of living other than the income that they were getting from the land ;

(*b*) widows, minors and disabled persons who are incapacitated to cultivate the land ; without assistance ;

(*c*) ex-servicemen who have rendered active service in the field ;

(*d*) charitable, educational and religious institutions which are rendering service to the society.

2. That the compensation payable being too inadequate to the following persons shall be increased to provide atleast for bare subsistence.

3. That it is necessary to consider the following other matters —

(*a*) income ceiling to be not provided to agriculture till all-round ceiling of income is brought into force ;

(*b*) removal of appeals over decisions of tribunals ;

(*c*) removal of legal assistance to the tenant and the landlord to argue their case before the tribunal ;

(*d*) not fixing reasonable ceiling on plantations ;

(*e*) not taking up land reform along with simultaneous distribution of all available Government land that could be used for cultivation ;

(*f*) not having regular statutory provisions for proper distribution of surplus lands ;

(*g*) inclusion of the provision for outright dismissl of fifteen thousand land dispute cases ;

(*h*) not giving economic and useful units of cultivable land to the proposed landless cultivators to whom surplus lands are contemplated to be distributed ;

(*i*) not providing measures to provide initial capital that is needed by the landless cultivator to whom surplus lands are given ;

(*j*) making it practically uneconomical to use scientific mode of cultivation by use of modern machinery etc. ;

(*k*) not taking into considration full legal implications and difficulties that will be challenged in a court of law by hasty decisions taken at the time of preparing the draft Bill and drafting the Joint Select Committee Report ;

(1) ceiling fixed being more unrealistic and more drastic than other States ; and contrary to the Model Bill circulated by the Centre ;

4. That it is necessary to consider the importance of food production in the present day circumstances while implementing land reforms.

5. That the Select Committee has deviated in several respects from the provisions of Bill referred to the Committee and the principal Act."

MADAM SPEAKER.—Amendment moved :—

" That the Mysore Land Reforms (Amendment) Bill, 1973 as reported by the Joint Select Committee be re-committed to a new Joint Select Committee with the following members** to consider the following matters : (*Names of members to be indicated at the time of making the motion)

1. That it is necessary to give exemption to the following classes of people who deserve exemption from the provisions of the Act.

(*a*) small holders who have no other alternative means of living other than the income that they were getting from the land ;

(*b*) widows, minors and disabled persons who are incapacitated to cultivate the land ; without assistance ;

(*c*) ex-servicemen who have rendered active service in the field ;

(*d*) charitable, educational and religious institutions which are rendering service to the society.

2. That the compensation payable being too inadequate to the following persons shall be increased to provide atleast for bare subsistence.

3. That it is necessary to consider the following other matters.

(*a*) income ceiling to be not provided to agriculture till all-round cailing of income is brought into force ;

(*b*) removal of appeals over decisions of tribunals ;

** 1 Hon'ble Chief Minister,
2 Hon'ble Minister for Law,
3 Hon'ble Minister for Revenue,
4 Hon'ble Minister for Public Works,
5 Hon'ble Minister for Agriculture,
6 Sri H. D. Deve Gowda,
7 Sri S. Kariappa,
8 Sri G. Rame Gowda,
9 Sri K. F. Patil,
10 Sri K. M. Naganna, and five members to be elected by the Legislative Council.

(MADAM SPEAKER)

(*c*) removal of legal assistance to the tenant and the landlord to argue their case before the tribunal ;

(*d*) not fixing reasonable ceiling on plantations ;

(*e*) not taking up land reform along with simultaneous distribution of all available Government land that could be used for cultivation.

(*f*) not having regular statutory provisions for proper distribution of surplus lands ;

(*g*) inclusion of the provision for outright dismissal of fifteen thousand land dispute cases ;

(*h*) not giving economic and useful units of cultivable land to the proposed landless cultivators to whom surplus lands are contemplated to be distributed ;

(*i*) not providing measures to provide initial capital that is needed by the landless cultivator to whom surplus lands are given ;

(*j*) making it practically uneconomical to use scientific mode of cultivation by use of modern machinery etc.

(*k*) not taking into consideration full legal implications and difficulties that will be challenged in a court of law by hasty decisions taken at the time of preparing the draft Bill and drafting the Joint Solect Committee Report ;

(*l*) ceiling fixed being more unrealistic and more drastic than other States ; and contrary to the Model Bill circulated by the Centre.

4. That it is necessary to consider the importance of food production in the present day circumstances while implementing land reforms.

5. That the Select Committee has deviated in several respects from the provisions of Bill referred to the Committee and the principal Act.''

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಭೂ ಸುಧಾರಣೆ ಕಾಯಿದೆಗೆ ತಿದ್ದುಪಡಿ ತಂದ ಸಂದರ್ಭದಲ್ಲಿ ಈ ಮಾನ್ಯ ಸಭೆ ಬಹಳ ದೀರ್ಘವಾಗಿ ಚರ್ಚೆ ಮಾಡಿ ಅನೇಕ ವಿಷಯಗಳ ಬಗ್ಗೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಆ ಅಭಿಪ್ರಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಜಂಟಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಿ ಅವರಿಗೆ ಇದನ್ನು ಒಪ್ಪಿಸಿತ್ತು. ಆ ಪ್ರಕಾರ ಈ ಜಂಟಿ ಪರಿಶೀಲನಾ ಸಮಿತಿಯವರು 43 ದಿವಸಗಳ ಕಾಲ ಕುಳಿತು ಇದನ್ನೆಲ್ಲಾ ಬಹಳ ವಿವರವಾಗಿ ಹಾಗೂ ಸೂಕ್ಷ್ಮವಾಗಿ ಚರ್ಚೆ ನಡೆಸಿದೆ. ಇದರ ಜೊತೆಗೆ ಅನೇಕ ಸಂಸ್ಥೆಗಳನ್ನು ಮತ್ತು ಕೆಲವು ಸಂಘದ ಪ್ರತಿನಿಧಿಗಳನ್ನೂ ಕೂಡ ಕೇಳಿ ಅವರಿಂದ ವಿಷಯಗಳನ್ನೂ ಸಂಗ್ರಹಿಸುವುದಕ್ಕೆ ಏರ್ಪಾಡು ಮಾಡರಾಗಿತ್ತು. ಇತರ ವಿಷಯುಗಳನ್ನೂ ಸಂಗ್ರಹಿಸಿ ಬಹಳ ಸೂಕ್ಷ್ಮವಾಗಿ ಚರ್ಚೆ ನಡೆಸಿ ಅದಂತಹ ತೀರ್ಮಾನಗಳನ್ನೂ ಅವರ ವರದಿಯಲ್ಲಿ ಸೇರಿಸಿದ್ದಾರೆ. ಒಂದನೆಯದು ಸ್ವಂತ ವ್ಯವಸಾಯ ಮಾಡುವವರಿಗೆ ಕೆಲವು ಪ್ರತಿಬಂಧಕಗಳಿತ್ತು. ಅಂದರೆ 16 ಕಿಲೋಮೀಟರ್‌ನೊಳಗೇ ವಾಸ ಮಾಡಬೇಕೆಂದು ನಿಯಮ ಮಾಡರಾಗಿತ್ತು. ಆದರೆ ಈಗಿನ ಸ್ಥಿತಿಯಲ್ಲಿ ವಾಹನಗಳ ಸೌಕರ್ಯ, ರಸ್ತೆಗಳ ಸೌಕರ್ಯ ಇವುಗಳೆಲ್ಲಾ ಚೆನ್ನಾಗಿರುವಾಗ

ಇಷ್ಟು ಮಿತಿಯೊಳಗೇ ವಾಸ ಮಾಡಬೇಕೆಂದು ಪ್ರತಿಬಂಧಕ ಹಾಕುವುದು ಬೇಡ ಎಂದು ಅಭಿಪ್ರಾಯ ಪಟ್ಟು ಅದನ್ನು ತೆಗೆದುಹಾಕಲಾಗಿದೆ. ಸ್ವಂತ ವ್ಯವಸಾಯ ಎಂದರೆ ಅದಕ್ಕೆ ವಿವರಣೆ ಇದೆ. ಸ್ವಂತ ವ್ಯವಸಾಯ ಮಾಡುವಾಗ ಅವಿಭಕ್ತ ಕುಟುಂಬದ ಸದಸ್ಯರು ಅದರ ಮೇಲ್ವಿಚಾರಣೆ ನೋಡಿ ಕೊಳ್ಳುವುದಕ್ಕೆ ಅವಕಾಶವಿರಬೇಕೆಂಬುವನ್ನು ಸಮಿತಿಯವರು ಒಪ್ಪಿಕೊಂಡಿದ್ದಾರೆ. ಅದು ವರದಿಯಲ್ಲಿ ನಮೂದಾಗಿದೆ.

3-00 P.M.

ಇನ್ನು ಸ್ವಂತ ವ್ಯವಸಾಯ ಯಾರು ಮಾಡಬೇಕು ಎನ್ನುವಾಗ, ಸ್ವಂತ ವ್ಯವಸಾಯ ಮಾಡುವ ಕಾಲದಲ್ಲಿ ಅವನ ಮನೆಯಾಳುಗಳಾಗಲೀ ಅಥವಾ ಅವನ ಕುಟುಂಬದವರಿಗೆ ಸೇರಿದವರಾಗಲೀ ವ್ಯವಸಾಯ ಮಾಡುವಾಗ ಮುಖ್ಯವಾದ ವಿಷಯವೆಂದರೆ, ಜಮೀನನ್ನು ಸ್ವಂತ ವ್ಯವಸಾಯ ಮಾಡುವವರಾಗಲೀ ಅಥವಾ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳುವವರಾಗಲೀ ಜೀವಂತ ವ್ಯಕ್ತಿಯಾಗಿರಬೇಕು, ಇಲ್ಲದಿದ್ದರೆ ಭೂಮಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ತೀರ್ಮಾನವನ್ನು ಜಂಟೀ ಪರಿಶೀಲನಾ ಸಮಿತಿ ಕೈಕೊಂಡಿದೆ.

ಕುಟುಂಬದ ಬಗ್ಗೆ ವಿವರಣೆ ಕೊಡುವಾಗ ಹಿಂದೆ ಇದ್ದ ಅರ್ಥಕ್ಕೆ ಈಗ ಬದಲಾವಣೆಯಾಗಿದ್ದರೂ ಸಹ ಆ ಬಗ್ಗೆ ಶಂಕೆಗೆ ಅವಕಾಶವಿಲ್ಲದಂತೆ ಹೆಚ್ಚಿನ ವಿವರಗಳನ್ನು ಕೊಡಲಾಗಿದೆ. ಈ ಸಮಿತಿಯ ವರದಿಯನ್ನು ಸಭೆಯು ಮುಂದೆ ಇಡುವಾಗ ಎರಡು ಭಾಗ ಮಾಡಬಹುದು. ಒಂದನೆಯದೆಂದರೆ, ಯಾರು ಗೇಣಿದಾರರಿದ್ದಾರೆ, ಅವರ ಹಿತವನ್ನು ರಕ್ಷಣೆ ಮಾಡುವುದಕ್ಕೆ, ಗೇಣಿದಾರ ಮತ್ತು ಭೂ ಮಾಲೀಕನಿಗೆ ಇರುವ ಸಂಬಂಧವನ್ನು ತಪ್ಪಿಸುವುದಕ್ಕೆ, ಗೇಣಿದಾರ ಭೂ ಮಾಲೀಕನಿಗೆ ಕೊಡಬೇಕಾದಂಥ ಗೇಣಿ ಯಾವ ರೀತಿ ಇರಬೇಕು ಮತ್ತು ಮುಂಚೆ ಗೇಣಿಯನ್ನು ಪಡೆಯುವುದಕ್ಕೆ ಯಾರಿಗೆ ಅವಕಾಶವಿರಬೇಕು, ಯಾರಿಗೆ ಇರಬಾರದು ಇವುಗಳಿಗೆ ಸಂಬಂಧಪಟ್ಟ ವಿಷಯಗಳು ಒಂದು ಭಾಗ. ಎರಡನೆಯದೆಂದರೆ, ಪ್ರತಿಯೊಂದು ಕುಟುಂಬವೂ ಗರಿಷ್ಠ ಭೂಮಿ ಎಷ್ಟು ಇಟ್ಟುಕೊಳ್ಳಬಹುದು, ಎಷ್ಟು ಬೇಕಾಗುತ್ತದೆ ಎಂಬುದು. ಇದನ್ನು ಪರಿಶೀಲನೆ ಮಾಡಬೇಕಾಗಿದೆ. ಗೇಣಿದಾರರಿಗೂ ಭೂ ಮಾಲೀಕರಿಗೂ ಇರುವ ಸಂಬಂಧವನ್ನು ತಪ್ಪಿಸಬೇಕಾದರೆ, ಈ ಕಾನೂನು ಜಾರಿಗೆ ಬಂದ ದಿವಸವೇ ಗೇಣಿದಾರರ ವಶದಲ್ಲಿರುವ ಭೂಮಿಯೆಲ್ಲವೂ ಸರ್ಕಾರದ ವಶಕ್ಕೆ ಬರಬೇಕು, ಆ ದಿವಸದಿಂದ ಗೇಣಿದಾರನಿಗೂ ಭೂ ಮಾಲೀಕನಿಗೂ ಯಾವ ವಿಧವಾದಂಥ ಸಂಬಂಧವೂ ಇರಬಾರದು ಎಂಬುದು ಬಹಳ ಮುಖ್ಯವಾದಂಥ ವಿಷಯ.

ಶ್ರೀ ಕೋಣಂದೂರು ಲಿಂಗಪ್ಪ.—ನಿಮಗೆ ಶುಭಾಶಯಗಳು.

ಶ್ರೀ ಎನ್. ಹುಚ್ಚಮಾಸ್ತಿಗೌಡ.---ಗೇಣಿದಾರರಿಂದ ಭೂಮಿ ಸರ್ಕಾರದ ವಶಕ್ಕೆ ಬಂದ ದಿವಸದಿಂದ ಗೇಣಿದಾರರು ಸರ್ಕಾರದ ಗೇಣಿದಾರರಾಗಿರುತ್ತಾರೆ. ಅವನು ಆ ಭೂಮಿಯ ಒಡೆತನ ಪಡೆಯಬೇಕಾದರೆ ಗೇಣಿಯ 15ರಷ್ಟು ಸರ್ಕಾರಕ್ಕೆ ಪ್ರೀಮಿಯಮ್ ಎಂದು ಕೊಟ್ಟಮೇಲೆ ಅವನು ಭೂಮಾಲೀಕನಾಗುತ್ತಾನೆ. ಅವನು ಪ್ರೀಮಿಯಮ್ಮನ್ನು ಏಕಕಾಲದಲ್ಲಿ ಕೊಡಬಹುದು ಅಥವಾ ಕಂತಿನ ಮೇಲೆ ಕೊಡಬಹುದು. 20 ವರ್ಷದ ಸುಲಭ ಕಂತುಗಳಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಗೇಣಿದಾರ ಶಕ್ತಿವಂತನಾಗಿದ್ದರೆ ಒಂದೇ ವರ್ಷದಲ್ಲಿ ಪ್ರೀಮಿಯಮ್ ಕೊಟ್ಟು ಭೂಮಾಲೀಕನಾಗಬಹುದು. ಅವನು ಮಾಲೀಕನಾದ ಮೇಲೂ ಸಹ ಆರು ವರ್ಷಗಳ ಕಾಲ ಆ ಭೂಮಿಯನ್ನು ಪರಭಾರೆ ಮಾಡಬಾರದೆಂದು ಗೊತ್ತು ಮಾಡಲಾಗಿದೆ.

ಇನ್ನು ಭೂಮಾಲೀಕನಿಂದ ಜಮೀನನ್ನು ತೆಗೆದುಕೊಂಡ ಮೇಲೆ ಅವನಿಗೆ ಗೇಣಿಯ 15 ರಷ್ಟನ್ನು ಪರಿಹಾರದ ರೂಪದಲ್ಲಿ ಕೊಡಬೇಕೆಂದು ವೇದಲು ಹೇಳಲಾಗಿತ್ತು. ಈಗ ಪರಿಹಾರ ಎಂಬುದನ್ನು ತೆಗೆದು ಪೊತ್ತ ಎಂದು ಸೇರಿಸಲಾಗಿದೆ. ಈ ಪೊತ್ತವನ್ನು ಕೊಡುವ ಬಗ್ಗೆ ಕೂಡ ಕೆಲವು ನಿಯಮಗಳಿವೆ. ಮೊದಲನೆಯ 5 ಸಾವಿರ ರೂಪಾಯಿಗಳನ್ನು ಕೊಡುವಾಗ ಗೇಣಿಯ 15 ರಷ್ಟನ್ನು, ಎರಡನೆಯ 5 ಸಾವಿರ ರೂಪಾಯಿಗಳನ್ನು ಕೊಡುವಾಗ ಗೇಣಿಯ 12ರಷ್ಟನ್ನು, ಮುಂದಿನ 5 ಸಾವಿರ ರೂಪಾಯಿಗಳನ್ನು ಕೊಡುವಾಗ ಗೇಣಿಯ 10ರಷ್ಟನ್ನು ಮಾತ್ರ ಕೊಡಬೇಕೆಂದು ಒಟ್ಟಿನಲ್ಲಿ ಈ ಪೊತ್ತ 2 ಲಕ್ಷ ರೂಪಾಯಿಗಳಿಗೆ ಮೀರಿರಬಾರದೆಂದು ಕಮಿಟಿಯವರು ಪರಿಶೀಲನೆ ಮಾಡಿ ಅವರ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಇನ್ನು ಗೇಣಿದಾರರೇ ಆಗಲೀ, ಭೂಮಾಲೀಕರೇ ಆಗಲೀ, ಅಥವಾ ಭೋಗ್ಯದಾರರೇ ಆಗಲೀ, ಅವರಲ್ಲಿ ಗರಿಷ್ಠ ಮಿತಿಗಿಂತ ಹೆಚ್ಚು ಭೂಮಿ ಇದ್ದರೆ, ಆ ಭೂಮಿಯನ್ನು ಸರ್ಕಾರ ಯಾವ ರೀತಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ವಿತರಣೆ ಮಾಡಬೇಕು ಎಂಬುದನ್ನು ನಿರ್ಧಾರ ಮಾಡಲಾಗಿದೆ. ಭೂಮಿಯನ್ನು ಗೇಣಿಗೆ ಕೊಡುವುದಕ್ಕೆ ಈ ಮೊದಲು ಕೆಲವರಿಗೆ ವಿನಾಯಿತಿ ಕೊಡಲಾಗಿತ್ತು. ವಿಧವೆಯರಿಗೆ, ಅಪ್ರಾಪ್ತ ವಯಸ್ಕರಿಗೆ, ಸಣ್ಣ ಹಿಡುವಳಿದಾರರಿಗೆ, ಅಂಗವಿಕಲರಿಗೆ, ಸೈನ್ಯದಲ್ಲಿ ಕೆಲಸ ಮಾಡುವವರಿಗೆ ವಿನಾಯಿತಿ ಕೊಡಲಾಗಿತ್ತು. ವಿಧವೆಯರು, ಅಪ್ರಾಪ್ತವಯಸ್ಸಿನ ಮಕ್ಕಳ ಹೆಸರಿನಲ್ಲಿ ಗೇಣಿ ಕೊಡುವ ವಿಚಾರದಲ್ಲಿ ಅನೇಕ ರೀತಿಯಿಂದ ದುರುಪಯೋಗವಾಗುತ್ತಿರುವುದರಿಂದ ಅದನ್ನೆಲ್ಲಾ ಪೂರಾ ತೆಗೆದು ಇನ್ನು ಮುಂದೆ ಗೇಣಿಗೆ ಕೊಡುವ ಅಧಿಕಾರವನ್ನು ಸೈನ್ಯದಲ್ಲಿ ಕೆಲಸ ಮಾಡುವವರಿಗೆ ವಾಪಸ್ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ಶಾಸನ ಜಾರಿಗೆ ಬಂದ ದಿವಸ ಅವರೇನಾದರು ಗೇಣಿಗೆ ಕೊಟ್ಟಿದ್ದರೆ ಆ ಜಮೀನನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶವಿದೆ ಮತ್ತು ಅವರು ಸೈನ್ಯದಿಂದ ವಾಪಸ್ ಬಂದ ಒಂದು ವರ್ಷದೊಳಗೆ ಅದನ್ನು ವಾಪಸ್ ತೆಗೆದು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಅಷ್ಟೇ ಅಲ್ಲ, ಇನ್ನು ಮುಂದೆ ಸೈನ್ಯಕ್ಕೆ ಹೊಸದಾಗಿ ಸೇರುವುದಕ್ಕೆ ಮುಂಚೆ 3 ತಿಂಗಳೊಳಗೆ ಗೇಣಿಗೆ ಕೊಟ್ಟು ಸೈನಕ್ಕೆ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟು, ಅಲ್ಲಿಂದ ವಾಪಸ್ ಬಂದಮೇಲೆ ಒಂದು ವರ್ಷದೊಳಗೆ ಪೂರಾ ಜಮೀನನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಈಗಿನ ನಿಯಮದ ಪ್ರಕಾರ ಇಷ್ಟೇ ತೆಗೆದುಕೊಳ್ಳಬೇಕೆಂಬ ಇತ್ತು. ಅದರ ಬದಲು ಪೂರಾ ಜಮೀನನ್ನು ಸ್ವಂತ ವ್ಯವಸಾಯಕ್ಕೆ ತೆಗೆದುಕೊಳ್ಳಬಹುದೆಂದು ಇವರಲ್ಲಿ ಸೇರಿಸಲಾಗಿದೆ. ಸೆಕ್ಷನ್ 14,15,16,17,18ನ್ನು ಪೂರಾ ಕೈಬಿಟ್ಟಿದೆ 14ನೇ ಸೆಕ್ಷನ್ ಪ್ರಕಾರ ಭೂಮಿಯನ್ನು ಸ್ವಂತ ವ್ಯವಸಾಯಕ್ಕೋಸ್ಕರ ವಾಪಸ್ ತೆಗೆದುಕೊಳ್ಳುವುದಕ್ಕೆ ಭೂಮಾಲೀಕರಿಗೆ ಅವಕಾಶವಿತ್ತು. ತಾರೀಖು 2-10-1965ರಲ್ಲಿ ಈ ಸೆಕ್ಷನ್ ಪ್ರಕಾರ ಭೂಮಿಯನ್ನು ಸ್ವಂತ ವ್ಯವಸಾಯಕ್ಕೆ ತೆಗೆದುಕೊಳ್ಳುವವರಿಗೆ 15 ತಿಂಗಳ ವಾಯಿದೆ ಕೊಡಲಾಗಿತ್ತು. ಕೆಲವು ಜಿಲ್ಲೆಗಳಲ್ಲಿ 19 ತಿಂಗಳ ವಾಯಿದೆ ಕೊಡಲಾಗಿತ್ತು. ಈ ವಾಯಿದೆ ಮುಗಿದುಹೋಗಿದ್ದರೂ ಕೂಡ ವಾಪಸ್ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ 95 ಸಾವಿರ ವ್ಯಾಜ್ಯಗಳು ನಾನಾ ಹಂತಗಳಲ್ಲಿ ನಡೆಯುತ್ತಿದ್ದವು. ಅವುಗಳ ಪೈಕಿ ಬಹುತೇಕ ವ್ಯಾಜ್ಯಗಳು ಬಗೆಹರಿದು ಇನ್ನೂ 15 ಸಾವಿರ ವ್ಯಾಜ್ಯಗಳು ತೀರ್ಮಾನವಾಗಬೇಕಾಗಿದೆ. ಇನ್ನು ಮುಂದೆ ಸ್ವಂತ ಸಾಗುವಳಿಗೆ ಜಮೀನನ್ನು ವಾಪಸ್ ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಪೂರ್ಣ ರದ್ದು ಮಾಡಿ, ಈಗಾಗಲೇ ಇರುವ ವ್ಯಾಜ್ಯಗಳನ್ನು ಪರಿಶೀಲನೆಗೆ ತೆಗೆದುಕೊಳ್ಳದೆ, ಆ ಜಮೀನುಗಳ ಹಕ್ಕು ಗೇಣಿದಾರರಿಗೇ ಇರಬೇಕೆಂದು ಈ ಸಮಿತಿಯವರು ಅಭಿಪ್ರಾಯಪಟ್ಟು ಆ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಉಳುವವನೇ ಭೂಮಿಯ ಒಡೆಯನಾಗಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ತತ್ವಕ್ಕೆ ಸಂಪೂರ್ಣವಾಗಿ ಮನ್ನಣೆ ಕೊಟ್ಟಿದ್ದೇವೆ. ಭೂಮಾಲೀಕ ತನ್ನ ಸ್ವಂತ ವ್ಯವಸಾಯಕ್ಕೆ ಜಮೀನನ್ನು ತೆಗೆದುಕೊಂಡಿದ್ದರೆ ಅವನು ಆ ಜಮೀನನ್ನು ಸ್ವಂತಸಾಗುವಳಿಗೆ ವಾಪಸ್ಸು ತೆಗೆದುಕೊಂಡ ಒಂದು ವರ್ಷದಲ್ಲಿ ಅವನು ಸ್ವಂತ ಸಾಗುವಳಿ ಮಾಡಬೇಕು. ಇಲ್ಲದಿದ್ದರೆ ಅದು ದುರುದ್ದೇಶದಿಂದ ಕೂಡಿದೆ ಎಂದು ಅರ್ಥವಾಗುತ್ತದೆ. ಈ ನಿಯಮ ಇರುವುದರಿಂದ ಅವನು ಸಾರೋಧ್ಧಾರವಾಗಿ ಎಂದೆಂದಿಗೂ ಪರಭಾರೆ ಮಾಡಬಾರದು ಎಂದು ಈ ವಿಧೇಯಕದಲ್ಲಿ ಇಟ್ಟುಕೊಳ್ಳುವುದಕ್ಕೆ ಬದಲಾಗಿ 15 ವರ್ಷಗಳ ಕಾಲ ಪರಭಾರೆ ಮಾಡಬಾರದು ಎಂದು ಬದಲಾವಣೆ ಮಾಡಿದೆ.

[MR. DEPUTY SPEAKER in the Chair]

ಭೂಮಿಯನ್ನು ಮೊದಲು ಯಾವ ಯಾವ ತರಹ ವಿಂಗಡಿಸಿತ್ತು ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ ಈಗ ಅದನ್ನು 5 ವಿಧವಾಗಿ ವಿಂಗಡಿಸಿದ್ದೇವೆ. ಆ 5 ವಿಧ ಯಾವುದು ಎಂದರೆ ಅದರಲ್ಲಿ 3 ತರಹ ಭೂಮಿ, ನೀರಾವರಿ ಆಗತಕ್ಕದ್ದು. 2 ತರಹ ಖುಷ್ಕಿ ಭೂಮಿ. ನೀರಾವರಿಯಾಗತಕ್ಕದ್ದು ಯಾವ ರೀತಿಯಾಗಿದೆ ಎಂದರೆ ಎರಡು ಬೆಳೆಗಳು ವರ್ಷದ ಎಲ್ಲಾ ಕಾಲದಲ್ಲೂ ನೀರಿನ ಸೌಲಭ್ಯ ಮಾಡತಕ್ಕಂಥಾ ನದಿ ನೀರು ಆಗಬಹುದು, ನದಿಕಾಲುವೆಗಳ ಮುಖಾಂತರ ಆಗಬಹುದು ; ದೊಡ್ಡ ದೊಡ್ಡ ಜಲಾಶಯಗಳ ಮುಖಾಂತರ ಆಗಬಹುದು ; ಅಥವಾ ಸರ್ಕಾರದವರು ಲಿಫ್ಟ್ ಇರಿಗೇಷನ್ ಸೌಲಭ್ಯವನ್ನು ಒದಗಿಸಿ ನದಿ ಅಥವಾ ದೊಡ್ಡ ದೊಡ್ಡ ಜಲಾಶಯಗಳಿಂದ, ನೀರನ್ನು ಎತ್ತುವುದಕ್ಕೆ ಅವಕಾಶ ಇರಬೇಕು ; ಅಂಥವುಗಳಿಗೆ ಮೊದಲನೇ

(Oriental Research Library)
ಕರ್ನಾಟಕ ರಾಜ್ಯ ಸರ್ಕಾರ (6)
(ಅಲಭ್ಯ ಗ್ರಂಥಾಲಯ)
ಪತ್ರಿಕೆ ಕ್ರ..., Accession No. 6010
ದಿನಾಂಕ Date.....

ತರಗತಿ ಎಂದೂ, ವರ್ಷದಲ್ಲಿ ಒಂದು ಋತುವಿನಲ್ಲಿ ಮಾತ್ರ ನೀರಾವರಿ ಸೌಲಭ್ಯ ಇದ್ದು ಒಂದು ಬತ್ತದ ಬೆಳೆ ಬೆಳೆಯುವುದಕ್ಕೆ ಅವಕಾಶ ಇರತಕ್ಕ ಭೂಮಿಗೆ ಎರಡನೇ ತರಗತಿಯ ಭೂಮಿ ಎಂತಲೂ, ಮಳೆಯ ನೀರಿನ ಆಧಾರದ ಮೇಲೆ ಬೆಳೆಯನ್ನು ಬೆಳೆಯತಕ್ಕ ಪ್ರದೇಶಕ್ಕೆ ಮೂರನೆಯ ತರಗತಿಯ ಭೂಮಿ ಎಂತಲೂ ಮಾಡಿದೆ. ಮೊದಲನೆಯ ಹಾಗೂ ಎರಡನೆಯ ತರಗತಿಯ ಭೂಮಿಯಲ್ಲಿ ಕೂಡ ಇಂತಿಂಥಾ ಪ್ರದೇಶಗಳಲ್ಲಿ ಎರಡು ಬತ್ತದ ಬೆಳೆ ಬೆಳೆಯತಕ್ಕ ಪ್ರದೇಶ, ಒಂದು ಕಬ್ಬಿನ ಬೆಳೆ ಬೆಳೆಯುತಕ್ಕ ಪ್ರದೇಶ, ಒಂದು ಬತ್ತದ ಬೆಳೆ ಬೆಳೆಯತಕ್ಕ ಪ್ರದೇಶ ಎಂದು ನೋಟಿಫೈ ಮಾಡಬೇಕು. ಅದನ್ನು ಬಿಟ್ಟು ಉಳಿದ ಎಲ್ಲಾ ನೀರಾವರಿ ಒದಗಿಸಿ ಕೊಟ್ಟಿರತಕ್ಕ ಪ್ರದೇಶ ಮೂರನೆಯ ತರಗತಿಯ ಭೂಮಿ ದೊಡ್ಡ ದೊಡ್ಡ ಜಲಾಶಯಗಳ ಹಿಂದೆ ಡ್ರೈ ಕಂ ವೆಟ್ ಆಗತಕ್ಕಂಥಾ ಅಭ್ಯಾಸ ಇದೆ. ಅದನ್ನು ನಾಲ್ಕನೆಯ ತರಗತಿಯ ಭೂಮಿ ಎಂದು ವಿಂಗಡಿಸಲಾಗಿದೆ. ನೀರಾವರಿ ಭೂಮಿಯನ್ನು ವಿಂಗಡಣೆ ಮಾಡುವಾಗ ಎರಡು ಭಾಗ ಭೂಮಿಯಾಗಿ ವಿಂಗಡಿಸಿ ಕ್ಲಾಸಿಫೈ ಮಾಡಿದೆ. 1965 ನೇ ಇಸವಿಯಲ್ಲಿ ಈ ನೀರಾವರಿ ಭೂಮಿಯನ್ನು ಆಣ್ವಾರಿಮೇಲೆ ವಿಂಗಡಿಸಿದೆ. ಆ ಪ್ರಕಾರ 8 ಆಣೆಗಿಂತ ಮೇಲ್ಪಟ್ಟು ಬೆಳೆಯಾಗತಕ್ಕಂಥಾ ಭೂಮಿ, 8 ಆಣೆಗಿಂತ ಕಡಿಮೆ ಬೆಳೆಯಾಗತಕ್ಕಂಥಾ ಭೂಮಿ ಎಂದು ವಿಂಗಡಿಸಿದೆ. ಖುಷ್ಕಿ ಭೂಮಿಯನ್ನು ಎರಡು ವಿಧವಾಗಿ ವಿಂಗಡಿಸಿ ಒಂದು ರೂಪಾಯಿ ಮತ್ತು ಒಂದು ರೂಪಾಯಿಗಿಂತ ಮೇಲ್ಪಟ್ಟು ಕಂದಾಯ ಇರತಕ್ಕದ್ದು ಒಂದು ತರಹ ಭೂಮಿ, ಒಂದು ರೂಪಾಯಿಗಿಂತ ಒಳಗಡೆ ಕಂದಾಯ ಇರತಕ್ಕದ್ದು ಇನ್ನೊಂದು ತರಗತಿಯ ಭೂಮಿ ಎಂದು ವಿಂಗಡಿಸಿದೆ.

ಪರಮಾವಧಿ ಭೂಮಿಯನ್ನು ಎಷ್ಟು ಎಕರೆ ಇಟ್ಟುಕೊಳ್ಳಬಹುದು ಎನ್ನುವುದರ ಬಗ್ಗೆ ಮೊದಲು ಇದ್ದಂತಹ ಕಾನೂನು ಪ್ರಕಾರ ಹಿಡುವಳಿ ಮಿತಿ 27 ಎಕರೆ, 36 ಎಕರೆ, 45 ಎಕರೆ, 54 ಎಕರೆ ಈ ರೀತಿ 4 ಭಾಗದ ತರಿ ಭೂಮಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿತ್ತು. ಈ ಕಾನೂನು ಆದಮೇಲೆ ಹೊಸದಾಗಿ ಭೂಮಿಯನ್ನು ಹೊಂದತಕ್ಕವನಿಗೆ 18 ಎಕರೆ, 24 ಎಕರೆ, 30 ಎಕರೆ, 36 ಎಕರೆ, ಈ ರೀತಿ ನಾಲ್ಕು ವಿಧವಾದ ತರಿ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇದೆ. ಅವನು 72 ಎಕರೆ, 108 ಎಕರೆ, 144 ಎಕರೆ ಖುಷ್ಕಿ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇದೆ. ಈಗ ನಮ್ಮ ಈಗಿನ ತಿರ್ಮಾನದ ಪ್ರಕಾರ 'ಎ' ತರಗತಿಯ ಭೂಮಿಯನ್ನು 8 ಆಣೆಗಿಂತ ಮೇಲ್ಪಟ್ಟು ಇದ್ದರೆ 10 ಎಕರೆ ಭೂಮಿಯನ್ನು ಇಟ್ಟುಕೊಳ್ಳಬಹುದು. 8 ಆಣೆಗಿಂತ ಕಡಿಮೆ ಬೆಳೆಯಾಗತಕ್ಕಂಥಾದ್ದನ್ನು 12 ಎಕರೆ ಇಟ್ಟುಕೊಳ್ಳಬಹುದು. 'ಬಿ' ತರಗತಿಯ ಭೂಮಿಯನ್ನು 8 ಆಣೆಗಿಂತ ಮೇಲೆ ಇದ್ದರೆ 15 ಎಕರೆ ಭೂಮಿಯನ್ನು ಇಟ್ಟುಕೊಳ್ಳಬಹುದು. 8 ಆಣೆಗಿಂತ ಕೆಳಗಡೆ ಇದ್ದರೆ 18 ಎಕರೆಯನ್ನು ಇಟ್ಟುಕೊಳ್ಳಬಹುದು. 'ಸಿ' ತರಗತಿಯ ಭೂಮಿಯಲ್ಲಿ 8 ಆಣೆ ಮೇಲ್ಪಟ್ಟು ಇದ್ದರೆ 25 ಎಕರ ಇಟ್ಟುಕೊಳ್ಳಬಹುದು. 8 ಆಣೆಗಿಂತ ಕೆಳಗಡೆ ಇದ್ದರೆ 28 ಎಕರೆ ಇಟ್ಟುಕೊಳ್ಳಬಹುದು. ಖುಷ್ಕಿ ಜಮೀನಿನಲ್ಲಿ ನೀರಾವರಿಯಲ್ಲದೇ ಇರತಕ್ಕ ಜಮೀನು ಇದ್ದರೆ ಭೂಕಂದಾಯ ಒಂದು ರೂಪಾಯಿಗೆ ಮೇಲ್ಪಟ್ಟು ಇದ್ದರೆ 50 ಎಕರೆಯನ್ನು ಇಟ್ಟುಕೊಳ್ಳಬಹುದು. ಭೂಕಂದಾಯ ಒಂದು ರೂಪಾಯಿಗಿಂತ ಕೆಳಗಡೆ ಇರತಕ್ಕ ಭೂಮಿಯನ್ನು 54 ಎಕರೆ ಇಟ್ಟುಕೊಳ್ಳಬಹುದು ಎಂದು ಗೊತ್ತು ಮಾಡಿದೆ. ಈ ಭೂಮಿಯನ್ನು ಇಟ್ಟುಕೊಳ್ಳತಕ್ಕದ್ದು ಒಟ್ಟು ಸಾಮಾನ್ಯವಾಗಿ ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯವಾಗುತ್ತದೆ. ಆದರೆ ಅಭಾವ ಪ್ರದೇಶಗಳಿಗೆ ಎಷ್ಟೆಷ್ಟು ಮಳೆ ಬರುತ್ತದೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು 97 ತಾಲ್ಲೂಕುಗಳಲ್ಲಿ ಅದಕ್ಕಿಂತ ಹೆಚ್ಚು ಶೇಕಡಾ 20 ರಷ್ಟು ಹೆಚ್ಚು ಭೂಮಿಯನ್ನು ಇಟ್ಟುಕೊಳ್ಳಬಹುದು ಎಂದು ತೀರ್ಮಾನವನ್ನು ಕೈಗೊಂಡಿದ್ದೇವೆ. ಇರಿಗೇಷನ್ ಕಮಿಷನ್ ವರದಿಯಲ್ಲಿ 88 ತಾಲ್ಲೂಕುಗಳು ಅಭಾವ ಪ್ರದೇಶಗಳು ಎಂದು ಗೊತಾಗಿತ್ತು. ಆ ತಾಲ್ಲೂಕುಗಳನ್ನು ಆಧಾರವಾಗಿಟ್ಟುಕೊಂಡು 9 ತಾಲ್ಲೂಕುಗಳಲ್ಲಿ ಆಗಿಂದಾಗ್ಗೆ ಅಭಾವ ಉಂಟಾಗುತ್ತದೆ ಎಂದು ಹೇಳಿ ಒಟ್ಟು 97 ತಾಲ್ಲೂಕುಗಳಲ್ಲಿ ಶೇಕಡಾ 20 ರಷ್ಟು ಹೆಚ್ಚು ಭೂಮಿಯನ್ನು ಇಟ್ಟುಕೊಳ್ಳಬಹುದು ಎಂದು ಒಂದು ತೀರ್ಮಾನಕ್ಕೆ ಬಂದಿದ್ದೇವೆ.

ಇದರಲ್ಲಿ ಭೂಮಿ ಒಂದಕ್ಕೊಂದಕ್ಕೆ ಕನ್‌ವರ್ಷನ್ ರೇಷಿಯೋ ಯಾವರೀತಿ ಇರಬೇಕು ಎನ್ನುವುದನ್ನು ಷೆಡ್ಯೂರ್‌ನಲ್ಲಿ ಕೊಟ್ಟಿದೆ. ಒಂದು ಎಕರೆ 1 ಮತ್ತು 2 ನೇ ತರಗತಿಯ ಭೂಮಿಗೆ 1.5 ಬರುತ್ತದೆ. 3 ನೇ ತರಗತಿಯ ಭೂಮಿಗೆ 2.5 ಬರುತ್ತದೆ. ನಾಲ್ಕನೆಯ ತರಗತಿಯ ಭೂಮಿ ಒಂದಕ್ಕೆ 5 ರಷ್ಟು ಆಗುತ್ತದೆ. ಈ ರೀತಿ ಕನ್‌ವರ್ಷನ್ ರೇಶಿಯೋವನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ.

ಇನ್ನು 12 ಸಾವಿರ ರೂಪಾಯಿ ವಾರ್ಷಿಕ ವರಮಾನ ನಿರ್ದಿಷ್ಟವಾಗಿ 5 ವರ್ಷಗಳ ಸರಾಸರಿ ವ್ಯವಸಾಯವಲ್ಲದೆ ಬೇರೆ ವಿಧದಿಂದ ಬರತಕ್ಕ ವರಮಾನ 12 ಸಾವಿರ ರೂಪಾಯಿಗಳಿಗೆ ಜಾಸ್ತಿ ಇದ್ದರೆ ಅವನು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲ ಎಂದು ಈಗ ಇದ್ದಂತಹ

Karnataka State Archives,
(Departmental Library)
ಕರ್ನಾಟಕ ರಾಜ್ಯ ಸರ್ಕಾರ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಮಸೂದಾ ಕೂನೂನಿನಲ್ಲಿ ಇತ್ತು. ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಿ ಅದನ್ನು ಕೈಬಿಟ್ಟು ಮುಂದೆ ಈ ಕಾನೂನು ಜಾರಿಗೆ ಬಂದಮೇಲೆ ಹೊಸದಾಗಿ ಭೂಮಿಯನ್ನು ಕೊಂಡುಬೇಕು ಎಂದು ಇಷ್ಟಪಡುವವರಿಗೆ ಈ ಮಿತಿಯನ್ನು ಹಾಕಿ ವ್ಯವಸಾಯವಲ್ಲದೇ ಬೇರೆ ವಿಧದಲ್ಲಿ 12 ಸಾವಿರ ರೂಪಾಯಿ ಮೌಲ್ಯದ ಬರತಕ್ಕವನ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇರಬಾರದು ಎಂದು ಒಂದು ನಿಯಮವನ್ನು ಸೇರಿಸಿದೆ. ಜೀವಂತ ವ್ಯಕ್ತಿಗಳು ಮಾತ್ರ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯ. ಧಾರ್ಮಿಕ ಸಂಸ್ಥೆಗಳು, ವಿದ್ಯಾ ಸಂಸ್ಥೆಗಳು ಯಾವುದೇ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲ. ಈ ಧಾರ್ಮಿಕ ಸಂಸ್ಥೆಗಳನ್ನು ಅಥವಾ ವಿದ್ಯಾ ಸಂಸ್ಥೆಗಳನ್ನು ನಡೆಸುವುದಕ್ಕೋಸ್ಕರ ಅವುಗಳಿಗೆ ಒಂದು ತಾನದೇಶನ್ನು ಕೊಡಬೇಕೆಂದು ಸಮಿತಿಯವರು ಪರಿಶೀಲನೆ ಮಾಡಿ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಇನ್ನು ಕಾನೂನಿಗೆ ಒಳಪಡದೆ ಇರತಕ್ಕಂತಹ ಸಂಸ್ಥೆಗಳನ್ನು ಸಹ ಸಮಿತಿಯವರು ದೃಷ್ಟಿಯಲ್ಲಿಟ್ಟುಕೊಂಡು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್ ಕಮಿಟಿ ಕೊಟ್ಟಿರುವ ಸಾಲಕ್ಕಾಗಿ ವಹಿಸಿಕೊಳ್ಳುವಂತಹ ಭೂಮಿ, ಭೂದಾನ ಯಜ್ಞ ಬೋರ್ಡಿನವರು ಇಟ್ಟುಕೊಳ್ಳುವಂತಹ ಭೂಮಿ ಮತ್ತು ಕಾಫಿ ಬೋರ್ಡಿನವರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯೋಗಕ್ಕೋಸ್ಕರ ಇಟ್ಟಿರುವಂತಹ ಭೂಮಿ—ಇತ್ಯಾದಿಗಳಿಗೆ ಭೂಮಿ ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ.

ಇನ್ನು ಪ್ಲಾಂಟೇಷನ್ ಬಗ್ಗೆ ಹೇಳುವುದಾದರೆ, ಈಗ ಇರತಕ್ಕಂತಹ ಪ್ಲಾಂಟೇಷನ್ಸ್ ಎಷ್ಟು ವಿಸ್ತೀರ್ಣವುಳ್ಳದ್ದಾಗಿದ್ದರೂ ಸಹ ಅವುಗಳಿಗೆ ಗರಿಷ್ಠ ಮಿತಿಯನ್ನು ಹೇರುವುದಕ್ಕೆ ಸಮಿತಿಯು ಇಷ್ಟಪಡಲಿಲ್ಲ. ಆದರೆ ಮುಂದೆ ಪ್ಲಾಂಟೇಶನ್ ಹೊಂದತಕ್ಕವರಿಗೆ 104 ಎಕರೆಯ ಒಂದು ಮಿತಿಯನ್ನು ಹಾಕಲು ನಿರ್ಧಾರ ಮಾಡಿದೆ. ಅದಕ್ಕಿಂತ ಜಾಸ್ತಿ ಅವರು ಹೊಂದುವ ಹಾಗೆಯೂ ಇಲ್ಲ. ಹಾಗೆ ಇಟ್ಟುಕೊಳ್ಳುವವರು ಪ್ಲಾಂಟೇಶನ್ ಜೊತೆಗೆ ಬೇರೆ ವ್ಯವಸಾಯ ಭೂಮಿಯನ್ನು ಸಹ ಇಟ್ಟುಕೊಳ್ಳುವ ಅವಕಾಶ ಇಲ್ಲ. ಹಿಂದೆ ಇದ್ದಂತಹ ಮಸೂದೆಯಲ್ಲಿ ಅದಕ್ಕೆ ಅವಕಾಶ ಇತ್ತು. ಅದನ್ನು ಈಗ ಸಮಿತಿಯವರು ತೆಗೆದುಹಾಕಿದ್ದಾರೆ. ಖುಷ್ಕಿ ಭೂಮಿಯ ಪರಮಾವಧಿ ಮಿತಿಯನ್ನು 54 ಎಕರೆ ಎಂದು ನಿಗದಿ ಮಾಡಲಾಗಿದೆ. ಅದೇ ರೀತಿ ಪ್ಲಾಂಟೇಶನ್ ಇಟ್ಟುಕೊಳ್ಳತಕ್ಕವರು 54 ಎಕರೆ ಒಳಗೆ ಪ್ಲಾಂಟೇಶನ್ ಮತ್ತು ಬೇರೆ ವ್ಯವಸಾಯವನ್ನು ಮಾಡುವುದಕ್ಕೋಸ್ಕರ ಅಷ್ಟು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಇನ್ನು ಪ್ಲಾಂಟೇಶನ್ ಜೊತೆಗೆ ಅನೋಲಿಯಂಟ್ ಕಲ್ಟಿವೇಶನ್‌ಗೋಸ್ಕರ ವಿನಾಯಿತಿಯನ್ನು ಕೊಡಲಾಗಿದೆ. ಇದರಿಂದ ಸೆಂಟ್ ಮತ್ತು ಒಂದು ಎಣ್ಣೆಯನ್ನು ತಯಾರು ಮಾಡುತ್ತಾರೆ. ಪಶ್ಚಿಮ ಖಂಡದಲ್ಲಿಯೇ ಇಂಥ ಒಂದು ಫಾರಂ ಇಲ್ಲ ಇರುವುದರಿಂದ ಅದಕ್ಕೆ ವಿನಾಯಿತಿ ಕೊಡಲಾಗಿದೆ. ಅದರಲ್ಲಿ ಮೊದಲನೆಯ ಬೆಳೆ ಬಂದು ರಾಫ ಬರಬೇಕಾದರೆ 21 ವರ್ಷ ಕಾದು ಇರಬೇಕಾಗುತ್ತದೆ. ಆದ್ದರಿಂದ ಅದಕ್ಕೆ ವಿನಾಯಿತಿಯನ್ನು ಕೊಡುವುದಕ್ಕೆ ಸಮಿತಿ ತೀರ್ಮಾನ ಮಾಡಿದೆ. ಇದರ ಜೊತೆಗೆ ತಹಸೀಲ್ದಾರರವರಿಗೆ ಹೆಚ್ಚಿನ ಅಧಿಕಾರ ಗಳನ್ನು ಕೊಡಬೇಕೆಂದು ಸಮಿತಿಯವರು ಚರ್ಚೆ ಮಾಡಿ ಹೆಚ್ಚು ಅಧಿಕಾರವನ್ನು ಅವರಿಗೆ ಕೊಡ ಲಾಗಿದೆ. ಕೋರ್ಟಿಗೆ ಹೆಚ್ಚು ಅಧಿಕಾರವನ್ನು ಕೊಡದೆ ತಹಸೀಲ್ದಾರರಿಗೆ ಹೆಚ್ಚು ಅಧಿಕಾರ ಕೊಡು ವಂತೆ ನಿರ್ಣಯ ಮಾಡಿದೆ. ಇದರ ಜೊತೆಗೆ ಗೇಣಿದಾರರಿಗೆ ಮತ್ತು ಗೇಣಿದಾರರಿಗೆ ಹಾಗೂ ಭೂಮಾಲಕರಿಗೆ ಮತ್ತು ಗೇಣಿದಾರರಿಗೆ ಭಿನ್ನಾಭಿಪ್ರಾಯ ಬಂದಾಗ ಅವುಗಳನ್ನು ತೀರ್ಮಾನ ಮಾಡ ತಕ್ಕ ಅಧಿಕಾರವನ್ನು ಸ್ಥಳೀಯ ಅಧಿಕಾರಿಗಳಿಗೆ ಕೊಡುವುದರ ಬದಲು ಅದಕ್ಕೆ ಒಂದು ಟ್ರಿಬ್ಯೂನಲ್ ಮಾಡಬೇಕೆಂದು ಸಮಿತಿಯು ನಿರ್ಣಯ ಕೈಗೊಂಡಿದೆ. ಆದರಲ್ಲಿ ಅಸಿಸ್ಟೆಂಟ್ ಕಮೀಶನರ್ ಅಧ್ಯಕ್ಷರಾಗಿರಬೇಕು ಮತ್ತು ಸರ್ಕಾರದಿಂದ ನೇಮಿಸಲ್ಪಟ್ಟ ಇಬ್ಬರು ಜನ ಸದಸ್ಯರಿರಬೇಕೆಂದು ನಿರ್ಣಯ ಮಾಡಿದೆ. ಅವರ ಪೈಕಿ ಶಾಸನ ಸಭಾ ಸದಸ್ಯರು ಒಬ್ಬರು ಮತ್ತು ನಿಮ್ನ ವರ್ಗದ ಸದಸ್ಯರೊಬ್ಬರು ಇರುವರು. ಟ್ರಿಬ್ಯೂನಲ್ ಅಧಿಕಾರವನ್ನು ಸಹ ಪರದಿಯಲ್ಲಿ ತಿಳಿಸ ರಾಗಿದೆ. ನಾನು ಇದರ ಬಗ್ಗೆ ಹೆಚ್ಚು ಕಾಲವನ್ನು ಈಗ ತೆಗೆದುಕೊಳ್ಳದೆ, ಮಾನ್ಯ ಸಭೆಯ ಸದ ಸ್ಯರು ಇದರ ಮೇಲೆ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ ಮೇಲೆ ಅದರ ಮೇಲೆ ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಇರುವುದರಿಂದ, ಆಗ ಹೆಚ್ಚು ಇದರ ಬಗ್ಗೆ ಹೇಳಬಹುದೆಂದು ತಿಳಿಯುತ್ತೇನೆ. ಆದ್ದರಿಂದ ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಬಹಳ ಸೂಕ್ಷ್ಮವಾಗಿ ಅನೇಕ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ಅಭಿ ಪ್ರಾಯದ ಜೊತೆಗೆ ತಾವು ಸಹ ಹೆಚ್ಚಿನ ಬೆಳಕನ್ನು ಚೆಲ್ಲಿ ಗೇಣಿದಾರರ ಹಿತ ರಕ್ಷಣೆಯನ್ನು ಮಾಡು ವುದಕ್ಕೆ ಮತ್ತು ಗರಿಷ್ಠ ಮಿತಿಯನ್ನು ಇಡುವುದರ ಬಗ್ಗೆ ಇನ್ನೂ ಹೆಚ್ಚಿನ ಸಲಹೆಯನ್ನು ಕೊಟ್ಟು

ಇದರ ಮೂಲ ಉದ್ದೇಶವನ್ನು ಸಾಧನೆ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಂಡು ಈ ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ಟಿ. ಅರ್. ಶಾಮಣ್ಣ. —ಮಾನ್ಯ ಸಭಾಪತಿಗಳೆ, ಪ್ರಾರಂಭದಲ್ಲಿ ನಾನು ಗೇಣಿದಾರರ ಬಗ್ಗೆ ಇರತಕ್ಕಂತಹ ಸೌಭಾಗ್ಯಗಳನ್ನು ವಿರೋಧ ಮಾಡುವುದಕ್ಕಾಗಲಿ ಅಥವಾ ಜಮೀನ್ದಾರರ ಪರವಾಗಿ ಮಾತನಾಡುವುದಕ್ಕಾಗಲಿ ತಯಾರಾಗಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತೇನೆ. ಆದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತು ಆಗುಹೋಗುಗಳ ಬಗ್ಗೆ ಮತ್ತು ನ್ಯಾಯ ಅನ್ಯಾಯಗಳ ಬಗ್ಗೆ ಪರಿಶೀಲನೆ ಮಾಡಬೇಕಾದುದು ಅಗತ್ಯ. ನನಗೂ ಜಮೀನಿಗೂ ಸಂಬಂಧವಿಲ್ಲದಿದ್ದರೂ ಸಹ ಒಂದಾನೊಂದು ಕಾಲದಲ್ಲಿ ಜಮೀನಿನಲ್ಲಿ ಬೇಸಾಯ ಮಾಡತಕ್ಕಂಥವನ ಮಗನಾಗಿ, ಜಮೀನು ಬಗ್ಗೆ ಇರುವ ಸ್ವಲ್ಪ ಅನುಭವದ ಮೇರೆಗೆ ಇವರ ಮೇರೆ ಮಾತನಾಡುತ್ತೇನೆಯೇ ಹೊರತು ಬರೇ ಪುಸ್ತಕದ ಬದನೆಕಾಯಿ ಆಗಿ ಮಾತನಾಡುತ್ತಾ ಇಲ್ಲ. ಈಗ ಮಾನ್ಯ ಮಂತ್ರಿಯವರು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಬಹಳ ಪರಿಶ್ರಮದಿಂದ ಮಾಡಿರುವಂಥ ವರದಿಯನ್ನು ತೆಗೆದುಕೊಂಡಿದ್ದಾರೆ ಮತ್ತು ಇದನ್ನು ಚರ್ಚೆ ಮಾಡುವಾಗ ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಬೇಕೆಂದು ಹೇಳಿದರು. ಅದರಲ್ಲಿ ಒಂದನೆಯದು ಗೇಣಿದಾರರ ಹಿತರಕ್ಷಣೆ ಮಾಡತಕ್ಕದ್ದು ಮತ್ತು ಎರಡನೆಯದು ಪರಮಾವಧಿಯ ಬಗ್ಗೆ ನಿರ್ಣಯ ಮಾಡತಕ್ಕದ್ದು ಇವುಗಳನ್ನು ಎರಡು ಭಾಗಗಳಾಗಿ ತೆಗೆದುಕೊಂಡು ಇವುಗಳಲ್ಲಿ ಏನೇನು ನ್ಯೂನತೆಗಳು ಇವೆ, ಅವುಗಳನ್ನು ಪರಿಶೀಲನೆ ಮಾಡಿ ಅದಷ್ಟು ಗೇಣಿದಾರರ ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಈ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟನ್ನು ಒಪ್ಪಿಕೊಳ್ಳಬೇಕೆಂದು ವಿವರಣೆಯನ್ನು ಮಾನ್ಯ ಮಂತ್ರಿಯವರು ಕೊಟ್ಟಿದ್ದಾರೆ.

3-30 P.M.

ಮೊಟ್ಟಮೊದಲನೆಯದಾಗಿ ನನಗೆ ಒಂದು ಸಂದೇಹ ಏನೆಂದರೆ, ಈ ದೇಶದಲ್ಲಿ ಆಹಾರ ಪರಿಸ್ಥಿತಿ ಹಾಹಾಕಾರವಾಗಿರುವಾಗ, ಈ ದೇಶದಲ್ಲಿ ಒಬ್ಬರು ಇನ್ನೊಬ್ಬರನ್ನು ಶೋಷಣೆ ಮಾಡಬೇಕೆಂಬ ಸೋಗಿನಲ್ಲಿ ಇಂದು ಆಡಳಿತವನ್ನು ನಡೆಸಿಕೊಂಡು ಹೋಗುವುದನ್ನು ನಾವು ಕಾಣುತ್ತಿದ್ದೇವೆ. ಅದನ್ನು ಈಗ ಯಾವರೀತಿ ಮಾಡಿದರೆ ಸರಿಹೋಗುತ್ತದೆನ್ನುವುದನ್ನು ಸ್ವಲ್ಪ ವಿವರವಾಗಿ ನನಗೆ ತಿಳಿದ ಹಾಗೆ ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಈ ರ್ಯಾಂಡ್ ರಿಫಾರಮ್ಸ್ ಜಾರಿಗೆ ಬಂದು ಸುಮಾರು 12 ವರ್ಷಗಳು ಆಗುತ್ತಾ ಬಂತು. ಈ 12 ವರ್ಷಗಳಲ್ಲಿ ಇದರ ಬಗ್ಗೆ ಎಷ್ಟರಮಟ್ಟಿಗೆ ಪ್ರಗತಿ ನಡೆದಿದೆ ಎನ್ನುವುದನ್ನು ನಾವು ಮೊಟ್ಟಮೊದಲನೆಯದಾಗಿ ಯೋಚನೆಮಾಡಬೇಕಾಗಿದೆ. ಬಹು ಮುಖ್ಯವಾದಂಥ ಅಂತಃವೇನೆಂದರೆ, ಇತ್ತೀಚೆಗೆ ಆಹಾರವಸ್ತು ಬೆಳವಣಿಗೆಯ ಪರಿಸ್ಥಿತಿ ದಿನೇದಿನೇ ಕ್ಷೀಣವಾಗಿ ಜನಗಳಿಗೆ ಹೆಚ್ಚಿಗೆ ಆಹಾರವಿಲ್ಲದೆ ಹಾಹಾಕಾರ ಪಡುತ್ತಿರುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಈ ಒಂದು ಪರಿಸ್ಥಿತಿ ಎಷ್ಟರಮಟ್ಟಿಗೆ ಈ ಭೂಸುಧಾರಣೆಯಿಂದ ಪರಿಹಾರವಾಗುತ್ತದೆಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ಎಲ್ಲಿಯವರೆಗೆ ಲಂಚ ಪಡೆಯತಕ್ಕ ಅಧಿಕಾರಿಗಳ ಕೈಲಿ ಈ ಆಡಳಿತ, ಇರುತ್ತದೋ ಅಲ್ಲಿಯವರೆಗೆ ಎಲ್ಲಿಯವರೆಗೆ ಕಷ್ಟಪಟ್ಟು ಎಲ್ಲರೂ ಗೇಯಬೇಕೆಂಬ ಮನೋಭಾವ ಬರುವುದಿಲ್ಲವೋ ಅಲ್ಲಿಯವರೆಗೆ ನಾವು ಎಷ್ಟು ಕಷ್ಟಪಟ್ಟರೂ ಈ ಒಂದು ಪರಿಸ್ಥಿತಿ ಬದಲಾವಣೆಯಾಗುವುದಿಲ್ಲ. ಆದರೆ ನಾವು ಇದರಲ್ಲಿ ಒಂದನೆಯದಾಗಿ ಕಾಣುವುದು ಏನೆಂದರೆ ಹೆಚ್ಚು ಹೆಚ್ಚು ಅಧಿಕಾರವನ್ನು ತಹಸೀಲ್ದಾರರಿಗೆ ಕೊಟ್ಟಿರುವುದು. ಆದರೆ ತಹಸೀಲ್ದಾರ್ ಆಗಿರುವವರು ಧರ್ಮದಿಂದ, ನ್ಯಾಯವಾಗಿ ನಡೆದುಕೊಂಡು ಜನಗಳ ಹಿತದೃಷ್ಟಿಯಲ್ಲಿ ಕೆಲಸಮಾಡಿದರೆ ಅದೊಂದು ಮಾತು. ಈಗ ಲಂಚ ರುಷುವತ್ತು, ಪಕ್ಷಪಾತ ಮತ್ತು ಆಡಳಿತ ಪಕ್ಷದವರಲ್ಲಿ ಇನ್‌ಫ್ಲುಯನ್ಸ್ ಮಾಡತಕ್ಕ ಹಾಗೂ ಪ್ರಭಾವ ಬೀರತಕ್ಕ ಶಕ್ತಿ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಸ್ವಾರ್ಥಕ್ಕಾಗಿ ಇದನ್ನು ಬಳಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಾರೆಯೇ ಹೊರತು ಇದರಿಂದ ಎಲ್ಲರಿಗೂ ಹಿತಪಡಿಸುವುದಕ್ಕಾಗುವುದಿಲ್ಲ ಮತ್ತು ಖಂಡಿತವಾಗಿ ಯಾವ ಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವುದನ್ನು ನಾವು ಕಳೆದ 12 ವರ್ಷಗಳಿಂದಲೂ ಕಂಡಂಥ ಪರಿಸ್ಥಿತಿ. ಈಗ ಇದುವರೆಗೂ ಇದು ಜಾರಿಗೆ ಬರಲಿಲ್ಲ ಈಗ ತಕ್ಷಣವೇ ಜಾರಿಗೆ ತರುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ, ಪರಿಣಾಮಕಾರಿಯಾಗಿ ಬದಲಾವಣೆಗಳನ್ನು ಮಾಡಿದ್ದೇವೆಂದು ಹೇಳುತ್ತಾರೆ. ಆ ಬದಲಾವಣೆಗಳಿಂದ ಯಾವರೀತಿ ಪರಿಣಾಮವಾಗುತ್ತದೆನ್ನುವ ಬಗ್ಗೆ ನನಗೆ ಮಂತ್ರಿಗಳು ವಿವರಣೆಯನ್ನು ಕೊಡಬೇಕು. ಅವರು ಅದನ್ನು ಮೊದಲೇ ತಿಳಿಸಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಬದಲಾವಣೆಯಾಗುವುದರಲ್ಲಿ ನಾನು ಮೊಟ್ಟಮೊದಲನೆಯದಾಗಿ ಹೇಳಬೇಕಾದರೆ, ನಾನು ಅದೇ ಉದ್ದೇಶದಿಂದಲೇ ಜಮೀನ್ದಾರರ ಪಕ್ಷವನ್ನೂ

(ಶ್ರೀ ಟಿ. ಆರ್. ಶಾಮಣ್ಣ)

ವಹಿಸುತ್ತಾ, ಇಲ್ಲ ಮತ್ತು ರೈತರ ಹಿತದೃಷ್ಟಿಯನ್ನೂ ಸಹ ಬಯಿಗೊತ್ತಿ, ಮಾನವೀಯತೆಯ ದೃಷ್ಟಿಯಿಂದ ಹೇಳುವುದಾದರೆ ಸರಿಯಾದ ರೀತಿಯಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ತೀರ್ಮಾನ ತೆಗೆದುಕೊಂಡಿಲ್ಲವೆಂಬ ಬಗ್ಗೆ ಕೆಲವು ಕಾರಣಗಳನ್ನು ಹೇಳಬೇಕಾಗಿದೆ. ನನಗೆ ಗೊತ್ತಿರುವ ಹಾಗೆ ಅನೇಕ ಸಣ್ಣ ಹಿಡುವಳಿದಾರರು ಇದ್ದಾರೆ. ಅವರು ತಮಗೆ ಇರತಕ್ಕ ಭೂಮಿಯನ್ನು ನಂಬಿಕೊಂಡು ಜೀವನ ಮಾಡುತ್ತಾರೆ. ಅಂದಮೇಲೆ ಆಡಳಿತ ಪಕ್ಷದವರು ಸೋಷಿಯಾಲಿಜಂ ಎಂದು ಹೇಳುವಾಗ ಹಾವನ್ನು ಹೊಡೆದು ಹದ್ದಿಗೆ ಹಾಕುವ ಪದ್ಧತಿ ಸರಿಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ರಾಬ್ ಪೀಟರ್ ಅಂಡ್ ಪೆಪ್ಪಾರ್--ಈ ರೀತಿ ನಿಮ್ಮ ನಿಯಮ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನನ್ನಲ್ಲಿ ಸಾವಿರಾರು ಕಾರಣಗಳು ಹಾಗೂ ನೂರಾರು ಕಾರಣಗಳಿವೆ. ಆದರೆ ನಾನು ಇದರಲ್ಲಿ ಭೋಗ ಪಡುತ್ತಿರುವ ಅನೇಕ ಭೂಮಾಲೀಕರ ಬಗ್ಗೆ ಯಾವ ವಿಧವಾದಂಥ ವಾದವನ್ನೂ ಮಾಡುವುದಿಲ್ಲ. ನಾನು ಕೊಟ್ಟಿರತಕ್ಕ ತಿದ್ದುಪಡಿಗಳಲ್ಲಿ ಹಾಗೂ ನಾನು ಸೂಚಿಸಿರತಕ್ಕ ಸೂಚನೆಗಳಲ್ಲಿ ದೊಡ್ಡ ಭೂಮಾಲೀಕರ ಬಗ್ಗೆ ಹೆಚ್ಚು ಶೋಷಣೆ ಮಾಡಿಕೊಂಡು ಹೋಗುವವರ ಮತ್ತು ಲಾಭ ಮಾಡಿಕೊಂಡು ಹೋಗುವವರ ಬಗ್ಗೆ ಹೆಚ್ಚಿಗೆ ಮಾತನಾಡಬೇಕಾಗಿಲ್ಲ. ಅಂಥವರ ಬಗ್ಗೆ ಯಾವ ವಿಧವಾದಂಥ ಕನಿಕರ ತೋರಿಸುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಅನೇಕ ಸಣ್ಣ ಹಿಡುವಳಿದಾರರು ಭೂಮಿಯನ್ನೇ ನಂಬಿಕೊಂಡು, ಭೂಮಿಯಿಂದಲೇ ಜೀವನ ಮಾಡಿ ಕೊಂಡಿದ್ದಾರೆ, ಅಂತಹವರಿಂದಲೂ ಭೂಮಿಯನ್ನು ತೆಗೆದುಕೊಂಡು ನೀವು ಈಗ ಕೊಡುವ ಕಂಪನ್ಸೇಷನ್ ಅವರಿಗೆ ಕೊಡುತ್ತಿದ್ದರೆ, ಅದರಿಂದ ಅವನು ಜೀವನವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತಾವು ಗೇಣೀದಾರರಿಗೆ ಕೊಡುವ ಕಂಪೆನ್ಸೇಷನ್ ಹೆಚ್ಚಾಗಿರಬೇಕು. ಗೇಣೀದಾರರಿಗೆ ಕಡಿಮೆ ದರದಲ್ಲಿ ಕಂಪನ್ಸೇಷನ್ ಕೊಡಬಾರದು. ಕೇವಲ ಸಣ್ಣ ಹಿಡುವಳಿದಾರ ತಾನು ಚೆನ್ನಾಗಿ ಜೀವನಮಾಡುವುದಕ್ಕೆ ತಕ್ಕ ಒಂದು ಏರ್ಪಾಡನ್ನು ಮಾಡಬೇಕೆಂದು ನಾನ ಒತ್ತಾಯ ಪೂರ್ವಕವಾಗಿ ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅನೇಕರು ತಮ್ಮ ಜಮೀನನ್ನೇ ನಂಬಿಕೊಂಡು ಜೀವನಮಾಡಿಕೊಂಡು ಬಂದಿರುತ್ತಾರೆಂದು ನಾನು ಕಳಕಳಿಯಿಂದ ಹೇಳುತ್ತೇನೆ. ನೀವು ಅವರಿಂದ ಜಮೀನನ್ನು ಕಿತ್ತುಕೊಳ್ಳುವುದು ಬೇಡವೆಂದು ನಾನು ಹೇಳುವುದಿಲ್ಲ. ಆದರೂ ಸಣ್ಣ ಹಿಡುವಳಿದಾರರಿಗೆ ನೀವು ಕೊಡುವ ಕಂಪನ್ಸೇಷನ್ ಬಹಳ ಕಡಿಮೆ. ಅವರು ಆದರಿಂದ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಅವರ ಜಮೀನಿನ ಸ್ವಲ್ಪ ಭಾಗವನ್ನು ರೆಸ್ಯೂಂ ಮಾಡಿಕೊಳ್ಳುವ ಅಧಿಕಾರವಿತ್ತು, ಅದನ್ನು ತೆಗೆದುಕೊಂಡಿದ್ದಾರೆ. ತಾವು ಹೇಳತಕ್ಕ ನಿಯಮದ ಪ್ರಕಾರ ಉಳುವವನೇ ಹೊಲದ ಮಾಲೀಕನಾಗಬೇಕೆಂಬ ತತ್ವವನ್ನು ಪರಿಪಾಲನೆ ಮಾಡಬೇಕು. ನಾನು ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಮಾನ್ಯ ಶ್ರೀ ಹುಚ್ಚಮಾಸಿಗೌಡರಿಗೆ ಕೇಳುತ್ತೇನೆ. ಏಕೆಂದರೆ ಅವರು ರೈತರ ಮಕ್ಕಳು. ತಮಗೆ ಬೇಕಾದಷ್ಟು ಜಮೀನು ಇದೆ. ತಾವು ಸ್ವತಃ ಉತ್ತಿ ಬಿತ್ತಿರಿ. ಜಮೀನು ಬಗ್ಗೆ ನಿರ್ದಿಷ್ಟವಾಗಿ ಅನುಭವವುಳ್ಳವರು ಬಹಳ ಕಡಿಮೆ. ಜಮೀನಿಗೆ ಹೋಗಿ ಸೂಪರ್‌ವಿಷನ್ ಮಾಡಿರುವವರು ಇದ್ದಾರೆಯೇ ಹೊರತು ಜಮೀನಿನಲ್ಲಿ ಬೇಸಾಯ ಮಾಡುವ ಜನರು ಕಡಿಮೆಯಾಗಿ ಇದ್ದಾರೆ. ಈ ಬಗ್ಗೆ ಅನೇಕ ಮಂತ್ರಿಗಳು ವಾದಮಾಡುವವರಾಗಿದ್ದಾರೆ. ಅನೇಕರು ಬೇರೆಯವರ ಕೈಲಿ ಕೂಲಿ ಕೊಟ್ಟು ಜಮೀನು ಮಾಡಿಸುತ್ತಾರೆ. ಆದರೆ ಸ್ವಂತವಾಗಿ ಉಳುವವರು ಬಹಳ ಕಡಿಮೆ. ಎಷ್ಟು ಜನರು ಉಳುತ್ತಿದ್ದಾರೋ ಗೊತ್ತಿಲ್ಲ. ನಾನು ಸಾವಿರಾರು ಉದಾಹರಣೆಗಳನ್ನು ಕೊಡಬಲ್ಲೆ. ಅನೇಕರು ಜಮೀನು ಸ್ವಂತವಾಗಿ ಉಳುಮೆ ಮಾಡುತ್ತಾ ಇಲ್ಲ. ಈಗ ನಮ್ಮ ಮುಂದೆ ಇಟ್ಟಿರತಕ್ಕ 1972ನೇ ಜನವರಿಯ ಬಿಲ್ಲಿನಲ್ಲಿ ವಿಧವೆಯರು, ಮೆಜಾರಿಟಿಗೆ ಬಾರದೇ ಇರುವವರು, ಡಿಸೇಬಲ್ಡ್ ಆಗಿ ತಾವೇ ಸ್ವತಃ ಬೆಳೆಯುವುದಕ್ಕೆ ಶಕ್ತಿ ಇಲ್ಲದವರಿಗೆ ಜಮೀನು ಇಟ್ಟು ಕೊಳ್ಳುವ ಅವಕಾಶ ಕೊಡಬೇಕೆಂದಿತ್ತು. ಈಗ ಆ ಒಂದು ನೀತಿಯನ್ನು ಬದಲಾವಣೆ ಮಾಡಿ ಸ್ವತಃ ಜಮೀನು ಉಳುಮೆ ಮಾಡುತ್ತಾ ಇಲ್ಲದೇ ಹೋದರೆ ಜಮೀನು ಕೊಡಬಾರದೆಂದು ಹೇಳಿದ್ದಾರೆ. ಗಂಡನನ್ನು ಕಳೆದುಕೊಂಡು ಬೀದಿ ಭಿಕಾರಿಯಾಗಿ ಹೋಗುವವರಿಂದ ಜಮೀನನ್ನು ಕಿತ್ತುಕೊಳ್ಳುವುದು ಸರಿಯಾದುದಲ್ಲ. ಅನೇಕರು ಹೊಟ್ಟೆಗಿಲ್ಲದೆ ಇದ್ದಾರೆ. ಗಂಡ ಸತ್ತ ವಿಧವೆಯರು ಪುನಃ ಮದುವೆ ಮಾಡಿಕೊಳ್ಳುವುದಕ್ಕೆ ಬಹಳ ಕಷ್ಟವಿರುತ್ತದೆ. ಅಂದಮೇಲೆ ಅವರ ಜೀವನಕ್ಕೆ ಆಶ್ರಯವಾಗಿರತಕ್ಕ ಸಣ್ಣ ಜಮೀನನ್ನು ಕಿತ್ತುಕೊಳ್ಳುವುದು ನ್ಯಾಯವೇ, ಧರ್ಮವೇ ? ಇದು ಸೋಸಿಯಲಿಜಮ್ಮೇ ? ಒಂದುಕಡೆ ಹೊಟ್ಟೆ ಹಸಿಯುತ್ತಿರುವಾಗ, ಅವರಿಗೆ ಜಮೀನು ಬೇಡ ಎಂದರೆ ಅವರು ಏನುಮಾಡಬೇಕು ? ಆದ್ದರಿಂದ ಅವರು ಜೀವನ ಮಾಡುವುದಕ್ಕೆ ಅವರಿಗೆ ಒಂದು ದಾರಿಯನ್ನು ಮಾಡಿಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅದು ಜೊತೆಗೆ ಮೈನಾರ್ಸ್ ವಿಷಯವಾಗಿ ಹೇಳಬೇಕಾಗಿದೆ.

ಇದ್ದಕ್ಕಿದ್ದಹಾಗೆ ತಂದೆ ಸತ್ತುಹೋಗುತ್ತಾನೆನ್ನೋಣ. ಮಗನಿಗೆ ವಯಸ್ಸು ಆಗುವ ತನಕ ಜಮೀನು ಮಾಡುವುದಕ್ಕಾಗುವುದಿಲ್ಲ. ಅವನು ವಯಸ್ಸಿಗೆ ಬರುವವರೆಗೆ ಅವನ ಜೀವನಕ್ಕೆ ಏನುವ್ಯವಸ್ಥೆ ಮಾಡಬೇಕೆಂದು ಸರ್ಕಾರ ನೋಡಬೇಕು. ಅದೇ ರೀತಿ ಒಂದುವೇಳೆ ಡಿಸೇಬಲ್ಡ್ ಪರ್ಸನ್ಸ್ ಅಂದರೆ ಕುಂಟ, ಕಿವುಡ, ಕಾಲು, ಕೈ ಇಲ್ಲದೇ ಇರುವವರು ಜಮೀನು ಇಟ್ಟುಕೊಂಡಿದ್ದರೆ ಅಂತಹವರ ಪರಿಸ್ಥಿತಿ ಏನು; ಅವರು ಹೇಗೆ ಜೀವನ ಮಾಡಬೇಕು? ಈಗ ಎಷ್ಟು ಜಮೀನು ಉಳಿದಿದೆ, ಜಮೀನು ಮಾಲೀಕರು ಎಷ್ಟು ಜನರಿದ್ದಾರೆ, ಎಂ.ಎಲ್.ಎ. ಗಳು ಎಲ್ಲೆಲ್ಲ ಬೇಕಾದಷ್ಟು ಜಮೀನುಗಳನ್ನು ಇಟ್ಟುಕೊಂಡಿರುತ್ತಾರೆಂಬುದನ್ನು ತಿಳಿಸಬೇಕು. ಒಟ್ಟಿನಲ್ಲಿ ಬಡವರು ಉದ್ಧಾರವಾಗಬೇಕೆಂದು ಘೋಷಣೆ ಇರುವಾಗ ಅವರ ಕಡೆ ಸರ್ಕಾರದವರು ಏನು ಗಮನಕೊಟ್ಟಿದ್ದಾರೆ.? ಈಗ ಒಂದು ಜಮೀನನ್ನು ತಂದೆಯ ಕಾಲದಲ್ಲೋ ತಾತನ ಕಾಲದಲ್ಲೋ 3 ಸಾವಿರ ಅಥವಾ 4 ಸಾವಿರ ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡಿದ್ದರೆ, ಈ ದಿವಸ ಸರ್ಕಾರದವರು ಆ ಜಮೀನನ್ನು ರೆಸ್ಯೂಂ ಮಾಡುವುದಕ್ಕೆ ಕೊಡತಕ್ಕ ಪರಿಹಾರವಾದರೂ ಎಷ್ಟು? ಆ ರೆಸ್ಯೂಂ ಮಾಡತಕ್ಕ ಜಮೀನಿಗೆ ಕಂದಾಯ ಎಕರೆಗೆ ಒಂದು ರೂಪಾಯಿ ಅಥವಾ ಒಂದೂವರೆ ರೂಪಾಯಿ ಇದ್ದರೆ ಹೆಚ್ಚಾಯಿತು ಆ ಕಂದಾಯದ ಹತ್ತುಪಟ್ಟು ಪರಿಹಾರಕೊಡಬೇಕೆಂದು ಹೇಳಿದ್ದಾರೆ. ಅಂದರೆ ಅದು ಸುಮಾರು 1500 ರೂಪಾಯಿಗಳಾಗಬಹುದು. 3—4 ಸಾವಿರ ಕೊಟ್ಟು ಕೊಂಡ ಜಮೀನಿಗೆ 1500 ರೂಪಾಯಿಗಳ ಪರಿಹಾರ ಸಾಕೆ? ಅವನಿಗೆ ಬೇರೆಲ್ಲೂ ಜೀವನಕ್ಕೆ ಆ ಜಮೀನನ್ನು ಬಿಟ್ಟರೆ ಮಾರ್ಗವಿಲ್ಲ, ಅಂಥವನನ್ನು ಬೀದಿಗೆ ಅಟ್ಟುವುದಕ್ಕೆ ಬಿಡುವುದು ಯಾವ ಧರ್ಮ? ಆದರೆ ನಾನು ಯಾವ ಭೂಮಾಲೀಕನಲ್ಲಿ ಸಾವಿರ ಎಕರೆ ಅಥವಾ ಐನೂರು ಎಕರೆ ಭೂಮಿ ಇದೆಯೋ ಅಂಥವನ ಪರವಾಗಿ ವಾದ ಮಾಡುತ್ತಿಲ್ಲ. ನಾನು ವಾದಮಾಡುತ್ತಿರುವುದೆಲ್ಲಾ ಕೇವಲ ಸಣ್ಣ ಹಿಡುವಳಿದಾರರ ಬಗ್ಗೆ ಮಾತ್ರ.

ಇನ್ನು ಕೆಲವರಿಗೆ ಇದರಲ್ಲಿ ಏನಾಯಿತಿ ವಿಚಾರ ಹೇಳಿದ್ದಾರೆ—ಹಿಂದೆ ಇದ್ದ ಶಾಸನದಲ್ಲಿ ವಿಧವೆಯರಿಗೆ, ಅಶಕ್ತಾಪ್ತ ವಯಸ್ಕರಿಗೆ, ಅಂಗವಿಕಲರಿಗೆ ಮತ್ತು ಸೈನ್ಯದಲ್ಲಿರತಕ್ಕವರಿಗೆ ಸೈನ್ಯ ದಿಂದ ನಿವೃತ್ತಿಯಾಗಿದ್ದರಿಗೆ—ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿತ್ತು. ಆದರೆ ಈಗ ತಂದಿರತಕ್ಕ ಪ್ರಸಕ್ತ ಮಸೂದೆಯಲ್ಲಿ ಸೈನ್ಯದಲ್ಲಿ ಹಾಲಿ ಇರತಕ್ಕವನಿಗೆ ಮಾತ್ರ ಅವಕಾಶವಿದೆ. ಉಳಿದವರಿಗಿದ್ದ ಅವಕಾಶವನ್ನು ಕಿತ್ತು ಹಾಕಿದ್ದಾರೆ. ಇದು ಬಹಳ ಅನ್ಯಾಯ. ಯುದ್ಧಕ್ಕೆ ಹೋಗಿ ದೇಶಕ್ಕಾಗಿ ಪ್ರಾಣಕೊಡತ್ತ ಸೈನೀಕನ ವಿಧವೆ, ಭೂಮಿಯನ್ನು ಇಟ್ಟು ಕೊಳ್ಳುವುದಕ್ಕೆ ಅವಕಾಶವಿಲ್ಲ ಎನ್ನುವುದು ಯಾವ ನ್ಯಾಯ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೈನ್ಯಕ್ಕೆ ಹೋಗುವುದಕ್ಕೆ ಅಂದರೆ ಸೇರುವುದಕ್ಕೆ ಮುನ್ನ ಮೂರು ತಿಂಗಳು ಮತ್ತು ಸೈನ್ಯದಿಂದ ಬಿಟ್ಟು ಬಂದ ನಂತರ ಒಂದು ವರ್ಷದೊಳಗಾಗಿ ಅವನು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೆ ಪರವಾ ಇಲ್ಲ. ಹಾಗಿಲ್ಲದಿದ್ದಾಗ ಅದನ್ನು ರೆಸ್ಯೂಂ ಮಾಡಬೇಕೆಂದು ಹೇಳಿದೆ. ಇಲ್ಲಿ ನಾವು ಹಾಕಿರತಕ್ಕ ಪ್ರತಿಬಂಧಕವಾದರೂ ಇಷ್ಟೇ: ಆ ಸೈನ್ಯಕ್ಕೆ ಸೇರಿದ್ದವರು ಅಲ್ಲಿಂದ ವಾಪಸ್ ಬಂದ ನಂತರ ಭೂ ಸಾಗುವಳಿಯನ್ನು ಅವರು ಅವರ ಸ್ವಂತ ಮನೆಯ ಜನರಿಂದಲಾಗಲೀ ಅಥವಾ ಕೂಲಿಗಳ ಮೂಲಕವಾಗಲಿ ಮಾಡಿಸಿದರೆ ಪರವಾಇಲ್ಲ. ಆದರೆ ಹಾಗೆ ಮಾಡದೆ ಅದನ್ನು ವಾರಕ್ಕೆ—ಗುತ್ತಿಗೆಗೆ ಕೊಡುವುದಕ್ಕೆ ಮಾತ್ರ ಅವಕಾಶ ಇಲ್ಲ ಎಂದು ಹೇಳಿದೆ.

ಶ್ರೀ ಟಿ. ಆರ್. ಶಾಮಣ್ಣ.—ಇನ್ನು ಭೂಮಿಯನ್ನು ಜೀವಂತ ವ್ಯಕ್ತಿ ವಿನಾ ನಿರ್ಜೀವಿಗಳಾವುದೂ—ಸಂಘ, ಸಂಸ್ಥೆಗಳು ಮತ್ತು ಮಠಗಳು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ನಾನು ಕೇಳುತ್ತೇನೆ—ಸರ್ಕಾರಕ್ಕೆ ಭೂಮಿ ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ ಅಂದರೆ ಅದಕ್ಕೆ ಜೀವವಿದೆಯೇ? ಅದಕ್ಕೆ ಜೀವವಿದ್ದರೆ ಜನರು ಅವರ ಜೀವನಕ್ಕೆ ಅತ್ಯವಶ್ಯಕವಾದ ಆಹಾರ, ಬಟ್ಟೆ, ವಾಸದ ಮನೆಗಳಿಗಾಗಿ ಅವರು ಏಕೆ ಇಷ್ಟೊಂದು ಪರಿತಾಪ ಪಡಬೇಕಾಗಿತ್ತು? ನಿರ್ಜೀವವಾದ ಸರ್ಕಾರಕ್ಕೆ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿರುವುದಾದರೆ ಈ ಮಠಗಳಿಗೂ ಅದೇ ಅವಕಾಶ ಏಕಿರಬಾರದು? ಅಂಥ ಸಂಸ್ಥೆಗಳಿಂದ ಭೂಮಿಯನ್ನು ಕಿತ್ತುಕೊಳ್ಳುವುದು ಯಾವ ನ್ಯಾಯ? ಆ ಮಠಗಳಾದರೂ ಈ ದಿವಸ ಈ ಸರ್ಕಾರ ಏನು ಒಂದು ಕೆಲಸ ಮಾಡಬೇಕಾಗಿತ್ತೋ ಅದನ್ನೇ ಅವು ನಡೆಸುತ್ತಿವೆ. ಉದಾಹರಣೆಗೆ ಈ ದಿವಸ ಸಿದ್ದಗಂಗಾ ಕ್ಷೇತ್ರದಲ್ಲಿ ದಿನಂ ಪ್ರತಿ ಸಹಸ್ರಾರು ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟಕ್ಕೆ ಹಾಕಿ ಅವರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹಾಗೇ ಆ ಉಡುಪೀ ಮಠದಲ್ಲಿ ಮತ್ತು ಶಿರಿಗೆರೆ ಮಠದಲ್ಲಿ ಉಚಿತವಾಗಿ ವಿದ್ಯಾರ್ಥಿಗಳಿಗೆ ಊಟ ಹಾಕಿ ವಿದ್ಯಾದಾನ ಮಾಡುತ್ತಿದ್ದಾರೆ. ಅಂಥವುಗಳಲ್ಲದ್ದ ಆಸ್ತಿಯನ್ನು

(ಶ್ರೀ ಟಿ. ಆರ್. ಶಾಮಣ್ಣ)

ಕಿತ್ತುಕೊಳ್ಳುವುದು ಯಾವ ಧರ್ಮ? ಯಾವ ನ್ಯಾಯ? ಸರ್ಕಾರದವರು ಹೇಳಬಹುದು ಅವರಿಗೆ ಪರಿಹಾರವನ್ನು ಕೊಡಲಾಗುತ್ತದೆ ಎಂದು. ಆದರೆ ಇವರು ಕೊಡತಕ್ಕ ಪರಿಹಾರಪೆಷ್ಟು? ಆ ಮಠಗಳು ಈ ದಿವಸ ನಡೆಸುತ್ತಿರುವ ಖರ್ಚುವೆಚ್ಚಗಳನ್ನು ಇವರು ಕೊಡತಕ್ಕ ಪರಿಹಾರದಿಂದ ಬರತಕ್ಕ ಉತ್ಪನ್ನದಲ್ಲಿ ಅದನ್ನು ಸಾಗಿಸುವುದಕ್ಕೆ ಸಾಧ್ಯವೇ? ಯಾವ ಧರ್ಮ ಸಂಸ್ಥೆಗಳು ಸಮಾಜ ಸೇವೆ ಮಾಡದೆ ಕುಡಿದು ಆಹ್ಮಹಾವಿಯಲ್ಲಿ ಹೋಗುತ್ತಿವೆಯೋ ಅಂಥವುಗಳ ಭೂಮಿಯನ್ನು ಇವರು ಮುಟ್ಟುಗೋಲು ಹಾಕಿಕೊಳ್ಳಲಿ, ಅದಕ್ಕೆ ನಾನು ಬೇಡವೆನ್ನುವುದಿಲ್ಲ ಆದರೆ ಉತ್ತಮ ಸಮಾಜ ಸೇವೆಯನ್ನು ನಲ್ಲಿಸುತ್ತಿರುವ ಮಠಗಳ ಆಸ್ತಿಯನ್ನು ಕಿತ್ತುಕೊಳ್ಳಿ ಎಂದು ಹೇಳುವುದಕ್ಕೆ ಇವರಿಗೆ ಬಾಯಿ ಆದರೂ ಹೇಗೆ ಬಂತು? ಈ ದಿವಸ ಧರ್ಮವನ್ನು ಎತ್ತಿಹಿಡಿಯುವ ಅವನ್ನು ಅಲ್ಲಗಳೆಯುತ್ತಿರುವುದರಿಂದಲೇ ಸಮಾಜದಲ್ಲಿ ಕಳವು, ದರೋಡೆ, ಪೋಸ್ಟ, ನಾನಾ ಕುಟಿಲತೆಗಳು, ಕುಡಿತ, ಇತ್ಯಾದಿ ಅನೇಕ ದುರ್ವ್ಯವಹಾರಗಳು ನಡೆಯುವುದಕ್ಕೆ ಅವಕಾಶ ಆಗಿದೆ. ಅಂಥ ದುರ್ಮಾರ್ಗಗಳನ್ನು ತಡೆಗಟ್ಟುವುದಕ್ಕೆ ಧರ್ಮದ ಆಗತ್ಯ ಬಹಳವಾಗಿದೆ. ಅಂಥಾದರಲ್ಲಿ ಈ ಧರ್ಮ ಸಂಸ್ಥೆಗಳು ಬೇಡ ಎನ್ನುವುದು ಬಹಳ ಖಂಡನೀಯ. ಒಟ್ಟಿನಲ್ಲಿ ನಾನು ಹಾವಮಾಡುತ್ತಿರುವುದು ಒಳ್ಳೆಯ ಉತ್ತಮ ಕೆಲಸ ಮಾಡತಕ್ಕ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡಿ, ಅದ್ದರಾ ಹಿಡಿದಿರತಕ್ಕ ಮಠಮಾನ್ಯಗಳನ್ನು ಮುಟ್ಟುಗೋಲು ಹಾಕಿಕೊಳ್ಳಿ ಎಂದು ಹೇಳುತ್ತಿದ್ದೇನೆ

ಆದರೆ ಇಲ್ಲಿ ಏನು ಒಂದು ಕಾಂಪನ್‌ಸೇಷನ್ ವಿಚಾರ ಹೇಳಿದ್ದಾರೆ—ಅದು ಪೂರಾ ಕಡಮೆ.

Mr. DEPUTY SPEAKER.—The hon. member must confine to the amendments suggested by him. He has already taken a lot of time.

Sri T. R. SHAMANNA.—I am not going beyond the amendment I am not taking more time than is absolutely necessary. I will try to be as brief as possible.

ಸರ್ಕಾರದವರು ಕೊಡತಕ್ಕ ಪರಿಹಾರದುವ್ಯದಲ್ಲಿ ಅತನ ಜೀವನ ನಡೆಯುವುದಿಲ್ಲ. ಅವನ ಜೀವನಕ್ಕೆ ಆಗುವಷ್ಟು ಪರಿಹಾರ ದ್ರವ್ಯವನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ಇದರ ಜೊತೆಗೆ ಈಗ ಟ್ರಿಬ್ಯೂನಲ್ ಕ್ರಿಯೇಟ್ ಮಾಡಬೇಕೆಂದಿದ್ದೀರಿ. ಈ ಘೋರಣ್ ನೋಡಿದರೆ ಇದು ಖಂಡಿತ ರಾಜಕೀಯ ಟ್ರಿಬುನಲ್ಲೇ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಟ್ರಿಬ್ಯೂನಲ್ಲಿಗೆ ಒಬ್ಬ ಅಸಿಸ್ಟೆಂಟ್ ಕಮಿಷನರಿರುವರ. ಅವರು ಯಾವತ್ತು ಸರಕಾರದ ಪ್ರಭಾವಕ್ಕೆ ಒಳಗಾಗುವರು. ಸರಕಾರ ಹೇಳಿದಂತೆ ಕೇಳದಿದ್ದರೆ ಅವರನ್ನು ಮಾರನೆಯ ದಿವಸವೇ ವರ್ಗ ಮಾಡುವರು. ಇದರ ಜೊತೆಗೆ ಹೆಚ್ಚು ಕಡಮೆ 350 ಜನ ಸರಕಾರಿ ಪಕ್ಷದವರೇ ಇರುವರು, ಕೋಣಂದೂರು ಲಿಂಗಪ್ಪನವರು, ಕಾಗೋಡು ತಿಮ್ಮಪ್ಪನವರು ಇಂಥವರಿರುವುದು ಬಹಳ ಕಡಮೆ. ಇಬ್ಬರನ್ನು ನಾಮಿನೇಟ್ ಮಾಡಿದರೂ ಆಡಳಿತ ಪಕ್ಷದವರೇ ಹೆಚ್ಚಾಗಿರುವರು ಅದರಲ್ಲೂ ನ್ಯಾಯವಾದ ರೀತಿಯಲ್ಲಿ ಕೆಲಸ ಮಾಡುವವರಿರಬಹುದು, ಅವರ ಬಗ್ಗೆ ಆಕ್ಷೇಪವಿಲ್ಲ. ಸಿಕ್ಕಿದ ಅವಕಾಶವನ್ನು ದುರುಪಯೋಗ ಮಾಡಿಕೊಳ್ಳುವವರನ್ನು ಹಾಕಿದರೆ ಕೆಲವರು ಊರಿನಲ್ಲಿಲ್ಲವೆಂದು ಅವರ ಜವಾಬ್ದಾನನ್ನು ಬೇರೆಯವರಿಗೆ ಕೊಡಬಹುದು, ಹೀಗೆ ಅನ್ಯಾಯ ಮಾಡಲು ಸಾಧ್ಯವಿದೆ. ಇದುವರೆಗೆ ಜಮೀನು ಹಂಚಿಕೆ ಯಾವ ರೀತಿಯಾಗಿದೆಯೆಂಬುದನ್ನು ನಾವು ನೋಡಿದ್ದೇವೆ. ರಾಜಕೀಯ ಪ್ರಭಾವಕ್ಕೆ ಹೆಚ್ಚು ಅವಕಾಶವಿದೆ. ಹೆಚ್ಚು ಅನ್ಯಾಯವಾಗುವ ಸಂದರ್ಭವಿದೆ. ಆದುದರಿಂದ ರಾಜಕೀಯ ದೃಷ್ಟಿಯಿಂದ ಟ್ರಿಬ್ಯೂನಲ್ ಕ್ರಿಯೇಟ್ ಮಾಡಬಾರದೆಂದು ಹೇಳುತ್ತೇನೆ. ರಾಜಕೀಯ ಒತ್ತಡ, ರಾಜಕೀಯ ಪ್ರಭಾವ ಮತ್ತು ಹಣದ ಪ್ರಭಾವ ಇವುಗಳಿಗೆ ಅವಕಾಶವಿಲ್ಲದಂತೆ ಟ್ರಿಬ್ಯೂನಲ್ ಮಾಡುವಾಗ ನೋಡಿಕೊಳ್ಳಬೇಕು. ಟ್ರಿಬ್ಯೂನಲ್ ಮಾಡುವುದಕ್ಕೆ ನನ್ನ ವಿರೋಧವಿಲ್ಲ. ಟ್ರಿಬ್ಯೂನಲ್ ಮಾಡುವ ಕೆಲಸದ ಬಗ್ಗೆ ನಂಬಿಕೆ ಇಲ್ಲದೆ ಇರುವುದರಿಂದ ಇದನ್ನು ಹೇಳುವುದು. ಆದುದರಿಂದ ದಯವಿಟ್ಟು ರಾಜಕೀಯ ಪಕ್ಷದ ಒಬ್ಬರ ಜೊತೆಗೆ ಇನ್ನಿಬ್ಬರು ನಿಸ್ಪಕ್ಷಪಾತವಾಗಿ ಕೆಲಸ ಮಾಡುವವರನ್ನು ನರಿಯಾಗಿ ತೀರ್ಮಾನ ಮಾಡುವವರನ್ನು ಹಾಕಬೇಕೆಂದು. ಹೇಳುತ್ತೇನೆ.

ಇನ್ನೊಂದು ದೊಡ್ಡ ತಪ್ಪು ಮಾಡಿದ್ದಾರೆ. ಸುಪ್ರೀಂ ಕೋರ್ಟು ಮಾಡಿರುವಂತೆ ಟ್ರಿಬ್ಯೂನಲ್ ತೀರ್ಮಾನಕ್ಕೆ ಅಪೀಲಿಗೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಇದು ಸರಿಯಿಲ್ಲ. ರಿಟ್ ಹಾಕಲು ಅವಕಾಶವಿದೆ. ಆದರೆ ಎಷ್ಟು ಜನಕ್ಕೆ ರಿಟ್ ಹಾಕಲು ಶಕ್ತಿಯಿದೆ? ಕೋರ್ಟುಗಳಿಗೆ ಹೋದರೆ

ಪರಿಣಾಮಕಾರಿ ತೀರ್ಮಾನ ಮಾಡುವುದು ಕಷ್ಟವಾಗುತ್ತದೆಂದು ಹೀಗೆ ಮಾಡಿರಬಹುದು. ಆದರೆ ನನಗೆ ಬಂದಿರುವ ಸಂಕಟ ಅನೇಕ ಸಂದರ್ಭಗಳಲ್ಲಿ ತೀರ್ಮಾನ ಸರಿಯಾಗಿ ಆಗುವುದಿಲ್ಲ. ಅಂಥ ಸಂದರ್ಭದಲ್ಲಿ ರಕ್ಷಣೆ ಸಿಕ್ಕಬೇಕಾದ ಅವಶ್ಯಕತೆಯಿದೆ. ಅಪೀಲಿಗೆ ಅವಕಾಶವಿಲ್ಲದಂತೆ ಮಾಡಿರುವುದು ಸರಿಯೇ ? ಕೋರ್ಟಿನಲ್ಲಿ ಇಷ್ಟು ತಿಂಗಳಲ್ಲಿ ತೀರ್ಮಾನ ಮಾಡಬೇಕೆಂದು ಜವಾಬ್ದಾರಿ ಹೊರಿಸಿ. ನ್ಯಾಯ ದೃಷ್ಟಿಯಿಂದ ಯಾವ ಕೇಸೇ ಆಗಲಿ 6 ತಿಂಗಳೊಳಗೆ ತೀರ್ಮಾನ ಮಾಡಬೇಕೆಂದು ನಿರ್ಬಂಧ ಪಡಿಸಿ. 6 ತಿಂಗಳಲ್ಲಿ ತೀರ್ಮಾನವಾಗದಿದ್ದರೆ ಟ್ರಿಬ್ಯೂನಲ್ ತೀರ್ಮಾನವೇ ಆಖೈರು ತೀರ್ಮಾನ ವೆಂದು ಮಾಡಿ. ಒಂದು ಚೆಕ್ ಮತ್ತು ಒಂದು ಕೌಂಟರ್ ಚೆಕ್ ಇಲ್ಲದಿದ್ದರೆ ನ್ಯಾಯ ಸರಿಯಾಗಿ ಸಿಕ್ಕುವುದಿಲ್ಲ. ಇದರ ಜೊತೆಗೆ ಟ್ರಿಬ್ಯೂನಲ್ ತೀರ್ಮಾನ ಮಾಡುವಾಗ ಲಾಯರಿಗೆ ಅವಕಾಶವಿಲ್ಲದಂತೆ ಮಾಡಲಾಗಿದೆ. ಲಾಯರು ಬರಲು ಅವಕಾಶವಿಲ್ಲದಿದ್ದರೆ ಪಾದಿ ಮತ್ತು ಪ್ರತಿವಾದಿಗಳಿಗೆ ತೊಂದರೆಯಾಗುವುದು. ಲಾಯರೇ ಬೇಡವೆಂದರೆ ಮೂಕರು, ತಿಳಿವಳಿಕೆಯಿಲ್ಲದವರು, ಬರೆಯಲು ಬಾರದವರು ಹೇಳುವುದಕ್ಕೆ ಬಾಯಿಲ್ಲದವರು ಮುಂತಾದವರಿಗೆ ನ್ಯಾಯ ದೊರೆಯಲು ಸಾಧ್ಯ ವಿದೆಯೇ ? ನಾನು ವಕೀಲರ ಪರವಾಗಿ ವಾದಿಸುವುದಿಲ್ಲ. ಅನೇಕರು ಅರ್ಜಿ ಬರೆಯಲು ಬಾರದ ವರಿದ್ದಾರೆ. ಏನೂ ತಿಳಿಯದವರಿದ್ದಾರೆ, ಅವರಿಗೆ ಹೇಗೆ ನ್ಯಾಯ ದೊರೆಯುವುದು ? ಲಾಯರಿಗೆ ಅವಕಾಶವಿಲ್ಲದಂತೆ ಮಾಡಿರುವುದು ನ್ಯಾಯವಲ್ಲ. ಲಾಯರು ಬರುವುದಕ್ಕೆ ಅವಕಾಶ ಮಾಡವಿದ್ದರೆ, ಅಪೀಲು ಮಾಡಲು ಅವಕಾಶವಿರದಿದ್ದರೆ ಗೇಣಿದಾರರಿಗೆ ಬಹಳ ಕಷ್ಟವಾಗುವುದು. ಅವರಿಗೆ ಸಹಾಯವಿಲ್ಲದಂತೆ ಮಾಡುವುದು ಸರಿಯೇ ಎಂಬುದನ್ನು ಯೋಚನೆ ಮಾಡಿ.

ಪ್ಲಾಂಜೇಷನ್ಸ್ ವಿಚಾರ ತೆಗೆದುಕೊಂಡರೆ, ಈ ಸಂದರ್ಭದಲ್ಲಿ ಅನುಸರಿಸಿರುವ ನೀತಿ ಸಮಾಜವಾದಕ್ಕನ ಗುಣವಾಗಿದೆಯೇ ? ಬಡವರಿಗೆ ಕನಿಕರ ತೋರಿಸುವಾಗ ಉಳುವವನೇ ಹೊಲದ ಒಡೆಯನಾಗಬೇಕೆಂದು ಹೇಳುವಾಗ ದೊಡ್ಡ ಪ್ಲಾಂಜೇಷನ್ನುಗಳ ಬಗ್ಗೆ ಅನುಸರಿಸಿರುವ ನೀತಿ ಸರಿಯಲ್ಲ. ಸಾವಿರಾರು ಎಕರೆ ಇಟ್ಟುಕೊಳ್ಳಬಹುದು ಪ್ಲಾಂಟರುಗಳು, ಅದರಲ್ಲಿ ಗುಡ್ಡ ಪ್ರದೇಶ ವಿದ್ದರೂ ಅದನ್ನು ಉಪಯೋಗ ಮಾಡಿಕೊಳ್ಳಲು ಸಾಧ್ಯವಿದೆ. ದೊಡ್ಡ ಸಾಹುಕಾರರ ಪ್ರಭಾವ ದಿಂದ ಅವರ ಒತ್ತಡದಿಂದ ಈ ಸಂಬಂಧದಲ್ಲಿ ಅವರಿಗೆ ಅನುಕೂಲವಾಗುವಂತೆ ತೀರ್ಮಾನ ಮಾಡಿರುವಂತೆ ಕಾಣುತ್ತದೆ. ಈ ವಿಚಾರದಲ್ಲಿ ಮಾಡಿರುವ ಅನ್ಯಾಯ ಸರಿಯಲ್ಲ. ಕಾಫಿ ಬೋರ್ಡಿನವರು ಮತ್ತು ಸರಕಾರದವರು ಇದರ ಸಂಬಂಧದಲ್ಲಿ ಅನ್ಯಾಯ ಮಾಡಿದ್ದಾರೆ. ಸಣ್ಣ ಪ್ಲಾಂಟರುಗಳು ಹತ್ತು ಎಕರೆಗೆ ಜಾಸ್ತಿ ಇಟ್ಟುಕೊಳ್ಳಬಾರದೆಂದು ಹೇಳುವಾಗ ಕೆಲವರಿಗೆ ಲಕ್ಷಾಂತರ ಎಕರೆ ಗಳನ್ನಿಟ್ಟುಕೊಳ್ಳಲು ಅವಕಾಶ ಮಾಡಿಕೊಡುವುದು ಸರಕಾರದ ನೀತಿಗನುಗುಣವಾಗಿಲ್ಲ. ಪ್ರಭಾವಕ್ಕೊಳ ಗಾಗಿ ಸಾಹುಕಾರರಿಗೆ ಅನುಕೂಲ ಮಾಡಲು ಒಂದು ರೀತಿಯ ತೀರ್ಮಾನ ಮಾಡಿ ಬಡವರಿಗೆ ಅನ್ಯಾಯ ಮಾಡಿರುವುದು ಉಚಿತವಲ್ಲ. ಈಗ ಲನೋಲಿಯಂಗೆ ವಿನಾಯಿತಿ ಕೊಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ವರ್ಷಕ್ಕೆ 3 ಲಕ್ಷ ವರವಾನ ಮತ್ತು 80 ಸಾವಿರ ರೂಪಾಯಿಗಳ ಖರ್ಚಿದೆ. ಇದರ ಬಗ್ಗೆ ಇರುವ ಧೋರಣೆ ನೋಡಿದರೆ ಇಂದಿರಾ ಗಾಂಧಿಯವರಿಂದ ಏನು ಬೇಕಾದರೂ ಮಾಡಿಸಿಕೊಳ್ಳುವ ಶಕ್ತಿಯಿದೆ, ಪ್ರಭಾವ ಬೀರಿ ಏನು ಬೇಕಾದರೂ ಮಾಡಿಸಿಕೊಳ್ಳಬಹುದು ಎಂಬ ಧೋರಣೆ ತಾಳಿರುವುದು ಸರಿಯಲ್ಲ. ಇದನ್ನು ನೋಡಿ ಬಡವರೇನು ಹೇಳುವುದು ? ದೇವಿಕಾರಾಣಿ ಯವರು ಎಲ್ಲಿದ್ದರೂ ಅವರಿಗೆ ಬೇಕಾದ ಅನುಕೂಲ ಮಾಡುವರು. ಅದೇ ಎರಡು ಎಕರೆ ಇರುವವರಿಗೆ ನ್ಯಾಯ ದೊರೆಯುತ್ತಿಲ್ಲ ಎಂದು ಜನಸಾಮಾನ್ಯರು ಹೇಳುವರು. ನಾನು ಇದನ್ನು ಅನುಭವದಿಂದ ಹೇಳುವುದೇ ಹೊರತು ಯಾವ ಪಕ್ಷವನ್ನೂ ಹಿಡಿದು ನಾನು ಮಾತನಾಡುತ್ತಿಲ್ಲ. ಈಗಲೂ ನಾನು ಇಪ್ಪತ್ತು ಗಂಟೆ ಕೆಲಸ ಮಾಡುತ್ತಿದ್ದೇನೆ.

ಅಮೇಲೆ ಇನ್ನೊಂದು ವಿಚಾರ ಗಮನಕ್ಕೆ ತರಬೇಕಾಗಿದೆ. ಈಗ ಜಮೀನನ್ನು ಕೊಡಲು ಬಹಳ ಉತ್ಸಾಹ ಸರಕಾರಕ್ಕಿದೆ. ಸರಕಾರಿ ಬಂಜರು ಎಷ್ಟೋ ಇದೆ, ಅದನ್ನು ಕೊಡಬಹುದಾಗಿತ್ತು. ಕಂಡವರ ಜಮೀನನ್ನು ಕೊಡಿಸುವಾಗ ಅದರಲ್ಲಿರುವ ಉತ್ಸಾಹ ಸರಕಾರಿ ಜಮೀನನ್ನು ಕೊಡುವುದರಲ್ಲೇಕಿಲ್ಲ ? ವ್ಯವಸಾಯಕ್ಕೆ ಜಮೀನಿಲ್ಲದಿರುವವರಿಗೆ ಯಾವುದಾದರೂ ಸರಕಾರಿ ಜಮೀನಿರುವಾಗ ಅದನ್ನು ಕೊಡಲು ಸಾಧ್ಯವಿಲ್ಲವೆ ? ಈ ಪಕ್ಷ ಅಧಿಕಾರಕ್ಕೆ ಬಂದು ಒಂದು ವರ್ಷ ವಾಯಿತು. ಹದಿನೈದು ದಿವಸಗಳಲ್ಲಿ ತೀರ್ಮಾನವಾಗಬೇಕೆಂದು ಹೇಳುವಾಗ ಸರಕಾರಿ ಜಮೀನಿನ ಬಗ್ಗೆ ಏಕೆ ತೀರ್ಮಾನ ಮಾಡಿಲ್ಲ ? ಸರಕಾರದಲ್ಲಿರುವ ಜಮೀನನ್ನು ಕೊಡಲು ತೊಂದರೆಯೇನು ?

4-00 P.M.

ಅದನ್ನು ಏತಕ್ಕೆ ಮಾಡಲಿಲ್ಲ ? ಇಷ್ಟು ವರೆಗೂ ಕೊಟ್ಟಿರತಕ್ಕದ್ದು ಏನಾಗಿದೆ ಎನ್ನುವ ಬಗ್ಗೆ ಯೋಚನೆ ಮಾಡಿ. ಆಮೇಲೆ ಇದರ ಜೊತೆಗೆ, ತಾವು ಹಂಚುವುದಕ್ಕೆ ಹೊರಟಿರತಕ್ಕ ಜಮೀನಿನ ಬಗ್ಗೆ

(SRI T. R. SHAMANNA)

ತಾವು ಇಟ್ಟುಕೊಂಡಿರುವ ನೀತಿ ನಿಜವಾಗಿಯೂ ಖಂಡನೀಯವಾದುದು. ಕನಿಷ್ಟಪಕ್ಷ ಒಂದು ಎಕರೆ ಜಮೀನು ಕೊಡುತ್ತೇವೆಂದು ಹೇಳುತ್ತೀರಿ. ಇರತಕ್ಕ ಜಮೀನು ಎಷ್ಟು ಸಿಕ್ಕುತ್ತದೆ? ಏನು ಬೇಕೋ ಅದೆಲ್ಲಾ ಆಗಿದೆ. ಮಾನ್ಯ ಹುಚ್ಚಮಾಸ್ತಿ ಗೌಡರು ಹೇಳಿದ ಹಾಗೆ ನಾಲ್ಕು ಲಕ್ಷ ಎಕರೆ ಖಂಡಿತವಾಗಿಯೂ ಸಿಕ್ಕುವುದಿಲ್ಲ. ಸಿಕ್ಕತಕ್ಕ ಜಮೀನು 12 ವರ್ಷಗಳಲ್ಲಿ ಏನು ಆಗಬೇಕೋ ಅದು ಆಗಿದೆ. ನೀವು ಒಂದು ಎಕರೆ ಜಮೀನನ್ನು ಕೊಡಬೇಕು ಎಂದು ಇಟ್ಟುಕೊಂಡಿದ್ದರೆ ಅದರಿಂದ ಅವರು ತನ್ನ ಸಂಸಾರವನ್ನು ಹೇಗೆ ನಡೆಸಬೇಕು? ಎತ್ತುಗಳನ್ನು ಎಲ್ಲಿಂದ ತರಬೇಕು? ಗೊಬ್ಬರ ಎಲ್ಲಿಂದ ತರಬೇಕು? ತಮಗೆ ಕಂತುಕುಟ್ಟಲಿಕ್ಕೆ ಹಣವನ್ನು ಎಲ್ಲಿಂದ ತರಬೇಕು? ಅವನು ಬೆಳೆ ಆಗದೆ ಹೋದರೆ ಏನು ಮಾಡಬೇಕು? ತಾವು ಅನುಸರಿಸುತ್ತಿರುವ ನೀತಿ ನೀತಿಯೇ ಅಲ್ಲ. ಬೀ ಜಮೀನು ಕೊಟ್ಟುಬಿಟ್ಟರೆ ಜಮೀನನ್ನು ಸಾಗುವಳಿ ಮಾಡುವುದಕ್ಕೆ ಸಾಧ್ಯವೇ? ಒಂದು ಜೊತೆ ಎತ್ತು, ಬೇಕಾದಂಥ ಗೊಬ್ಬರ ಬೀಜ ಕೊಡದೇ ಹೋದ ಪಕ್ಷದಲ್ಲಿ ಖಂಡಿತವಾಗಿಯೂ ಅವನು ಜಮೀನನ್ನು ಮಾಡುವುದಕ್ಕಾಗುವುದಿಲ್ಲ. ಸರ್ಕಾರದಿಂದ ಯಾರ ಹೆಸರಿನಲ್ಲಿ ಜಮೀನನ್ನು ತೆಗೆದುಕೊಳ್ಳುತ್ತಾರೋ ಅವರ ಹೆಸರಿನಲ್ಲಿ ಜಮೀನು ಇರುವುದಿಲ್ಲ. ಅವನು ಉಳುವವನು ಆಗಿದ್ದರೂ ಕೂಡ, ಜಮೀನು ಮಾರೀಕನ ಹೆಸರಿನಲ್ಲಿರುತ್ತದೆ, ಅವನು ಕೇವಲ ಆಳಾಗಿ ಕೆಲಸ ಮಾಡಬೇಕಂಥ ಸಂದರ್ಭ ಬರುತ್ತದೆ. ಆದ್ದರಿಂದ ಅವನಿಗೆ ಒಂದು ಎಕರೆ ಜಮೀನನ್ನು ಕೊಡುವುದಕ್ಕೆ ಹೋಗಬೇಡಿ. ಎರಡು ಎಕರೆ ಜಮೀನನ್ನು ಕೊಟ್ಟು, ಬೇಕಾದಂಥ ಸೌಲಭ್ಯ ಕೊಟ್ಟರೆ ಹೋದರೆ ಯಾರನ್ನು ಉದ್ಧಾರ ಮಾಡಬೇಕು ಎಂದು ಹೊರಟಿದ್ದೀರೋ ಅವರು ಖಂಡಿತವಾಗಿಯೂ ಉದ್ಧಾರವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಈ ಲ್ಯಾಂಡ್ ರಿಫಾರಮ್ಸ್ ಬಿಲ್ ಏನಿದೆ ಇದರ ಲೀಗಲ್ ಆಸ್ಪೆಕ್ಟ್ ಅನ್ನು ನಾಕಾದಷ್ಟು ನ್ಯಡಿ ಮಾಡಿಲ್ಲ ಎಂದು ಹೇಳಿದರೆ ತಪ್ಪಾಗುವಾದದು. ಏಕೆಂದರೆ, ನಾನು ಕೇಳಿದ್ದರಲ್ಲಿ ಕಾನ್ಸ್‌ಟಿಟ್ಯೂಷನ್‌ಗೆ ವಿರೋಧವಾಗಿರತಕ್ಕ ಅನೇಕ ನಿಯಮಗಳು ಇದರಲ್ಲಿ ಇವೆ ಈಗಲೂ ಕೋರ್ಟಿಗೆ ಇದನ್ನು ಕಾರ್ಯಗತ ಮಾಡುವುದಕ್ಕೆ ತೊಡಕು ಇವೆಯೆಂದು ಕೇಳಿದ್ದೇನೆ. ಕೋರ್ಟಿಗೆ ಇರತಕ್ಕಂಥ ಅಧಿಕಾರವನು ಕಿತ್ತುಕೊಂಡಿದ್ದೇವೆ ಅವರು ಹೇಳಿದ ಹಾಗೆ ಕೇಳುತ್ತಾರೆ ಎಂದು ನೀವು ಇರಬಹುದು. ಆದರೂ ಕೂಡ ಕಾನೂನಿಗೆ ವಿರೋಧವಾಗಿ ಅನೇಕ ಅಂಶಗಳು ಇದರಲ್ಲಿ ಇವೆ. ಲಾ ಡಿಪಾರ್ಟ್‌ಮೆಂಟಿನವರು ನೀವು ಹೇಳಿದ ಹಾಗೆ ಬಿಲ್ ಬರೆದುಕೊಡುತ್ತಾರೆ, ತಾವು ತಮಗೆ ಅನುಕೂಲವಾಗುವ ಹಾಗೆ ರಿಪೋರ್ಟ್ ಬರೆಸುತ್ತೀರಿ. ಕಾನೂನುಪ್ರಕಾರ ಸರಿಯಾದಂಥ ರೀತಿಯಲ್ಲಿ ಪರಿಶೀಲನೆ ಮಾಡಿಲ್ಲ, ತೊಡಕುಗಳು ಬೇಕಾದಷ್ಟು ಇವೆ. ಆದ್ದರಿಂದ ಕಾನೂನಿನ ಬಗ್ಗೆ ನಾಕಾದಷ್ಟು ಪರಿಶೀಲನೆ ಮಾಡಿ, ಇದರಲ್ಲಿ ಅನೇಕ ನ್ಯೂನತೆಗಳು ಇವೆ.

ಇನ್ನೊಂದು ಎಲ್ಲದಕ್ಕಿಂತ ಮುಖ್ಯವಾಗಿ ನನಗೆ ತಿಳಿದು ಬಂದಿರತಕ್ಕ ಕೊರತೆ ಏನೆಂದರೆ, ಲ್ಯಾಂಡ್ ರಿಫಾರಮ್ಸಿನಿಂದ ಆಹಾರ ಪರಿಸ್ಥಿತಿ ಸರಿ ಹೋಗುತ್ತಿದೆಯೋ ಎನ್ನುವುದರ ಬಗ್ಗೆ ಸರಿಯಾಗಿ ಆಲೋಚನೆ ಮಾಡಿಲ್ಲ ಎನ್ನತಕ್ಕಂಥಾದ್ದನ್ನು ನಾನು ಹೇಳಬಲ್ಲೆ. ಸರಿಯಾದಂಥ ರೀತಿಯಲ್ಲಿ ಉಳುವವರಿಗೆ ಜಮೀನು ಇದ್ದು, ಉತ್ಸಾಹದಿಂದ ಕೆಲಸಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಪ್ರೊಡಕ್ಷನ್ ಆಗತಕ್ಕ ಸಂದರ್ಭ ಇದೆ. ಈಗಿನ ಮೆಷಿನರಿಯಲ್ಲಿ ಇರತಕ್ಕ ವಾತಾವರಣ ಏನು ಇದೆ. ಆ ವಾತಾವರಣ ಆಹಾರವನ್ನು ಸಾಕಾದಷ್ಟು ಉತ್ಪನ್ನ ಮಾಡುವುದಕ್ಕೆ ಸಮರ್ಥವಾಗಿ ಕಾಣುತ್ತಾ ಇಲ್ಲ ಎಂದು ನಾನು ಹೇಳಬಲ್ಲೆ. ಈಗಾಗಲೇ, ಲ್ಯಾಂಡ್ ರಿಫಾರಮ್ಸ್ ಬಂದಮೇಲೆ ಉತ್ಪನ್ನ ಕುಂಠಿತವಾಗಿದೆ ಎಂದು ಕೇಳುತ್ತಾ ಇದ್ದೇನೆ. ನನ್ನ ಒಂದು ದೊಡ್ಡ ಅಬ್ಜಕ್ಷನ್ ಏನು ಎಂದರೆ, ಯಾವುದನ್ನು ಕೊನೆಯಲ್ಲಿ ತರಬೇಕಾಗಿತ್ತೋ ಅದನ್ನು ಮೊದಲೆ ತಂದು ಬಿಟ್ಟಿದ್ದಾರೆ. ತಾವೆಲ್ಲಾ ರೈತರ ಕಷ್ಟದಿಂದ ಬಂದಿರತಕ್ಕವರು. ರೈತರ ಕಷ್ಟಗಳನ್ನು ತಿಳಿದವರು, ಅವರಿಗೆ ಅನುಕೂಲ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದಾರೆ. ಒಂದು ಕಡೆ ಹೆಂಡ ಮಾರತಕ್ಕ ಖೋಡೇ ಅಂಥವರ ಉತ್ಪನ್ನ 10 ಸಾವಿರ ರೂಪಾಯಿವರೆಗೆ ಬೆಳೆದುಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನೊಂದುಕಡೆ ಜಮೀನು ಇಟ್ಟುಕೊಂಡಿದ್ದರೆ, ಅಂಥವರ ಮೇಲೆ ಜಮೀನಿನ ಪರಿಮಿತಿಯನ್ನು ತಂದು ಉತ್ಪನ್ನಕ್ಕೆ ಧಕ್ಕೆ ತರುತ್ತೀರಿ ಎಂದು ನಾನು ಹೇಳುತ್ತೇನೆ. ಏಕೆಂದರೆ, ಅವನು ಟ್ರ್ಯಾಕ್ಟರ್ ಇಟುಕೊಳ್ಳಬೇಕಾದರೆ, ಮಾಡರನೈಜ್ಡ್ ಸಿಸ್ಟಂನಲ್ಲಿ ಕಲ್ಟಿವೇಷನ್ ಮಾಡಬೇಕಾದರೆ, ಅವನಿಗೆ ಉತ್ಸಾಹ ಬೇಕು. ಇವತ್ತು ನೀವು 10 ಎಕರೆ ಜಮೀನನ್ನು ಕೊಟ್ಟಿದ್ದರೆ, ನಾಳೆ ಮೆನ್ನಿನ್ ಮೂರು ಜನ ಮಕ್ಕಳು ಇದ್ದರೆ, ಆ ಮಕ್ಕಳಿಗೆ ಫ್ರಾಗ್ಮೆಂಟೇಷನ್

ಆಫ್ ಲ್ಯಾಂಡ್ ಆದರೆ ಒಬ್ಬೊಬ್ಬರಿಗೆ ಮೂರು ಎಕರೆ ಬರುತ್ತದೆ. ಯಾವಾಗ ತಾವು ಸೀಲಿಂಗ್ ಫಿಕ್ಸ್ ಮಾಡಿದಿರಿ ಆಗ ಫ್ರ್ಯಾಗ್ಮೆಂಟೇಷನ್‌ಗೆ ಅವಕಾಶ ಮಾಡಬಾರದಾಗಿತ್ತು. ಜಮೀನನ್ನು ಒಂದು ಸಾರಿ ಕೊಟ್ಟು ನಂತರ ಅದನ್ನು ವಿಭಾಗ ಮಾಡತಕ್ಕ ಸಂದರ್ಭ ಇರುವುದಿಲ್ಲ. ವಿಭಾಗ ಮಾಡುತ್ತಾ ಹೋದರೆ ಮುಂದೆ ಬರತಕ್ಕ ಪೀಳಿಗೆ ಇದರಿಂದ ಕಿತ್ತಾಡುತ್ತಾರೆ. ಮತ್ತು ಅನೇಕ ಜನ ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಹೋಗುವ ವ್ಯವಸ್ಥೆಯನ್ನು ತರುತ್ತೀರಿ ಎಂದು ವ್ಯಥೆಯಿಂದ ನಾನು ಹೇಳಬೇಕಾಗಿದೆ. ಕೆಟ್ಟು ಪಟ್ಟಣಕ್ಕೆ ಸೇರು ಎಂದು ಹೇಳುವಂತೆ, ಎಲ್ಲರೂ ಅನುಕೂಲ ಸ್ಥರಾಗುತ್ತಾರೆ ಎಂದು ನನಗೆ ನಂಬಿಕೆಯಿಲ್ಲ. ಪಟ್ಟಣಕ್ಕೆ ಜನ ನುಗ್ಗತಕ್ಕದ್ದನ್ನು ಕಡಿಮೆ ಮಾಡ ಬೇಕು. ಅವರು ಹಳ್ಳಿಯಲ್ಲೇ ಇರುವುದಕ್ಕೆ ಸಾಕಾದಷ್ಟು ಸೌಲಭ್ಯಗಳನ್ನು ಒದಗಿಸಿ ಕೊಡಬೇಕು. ಆಹಾರ ಬೆಳೆಯುತಕ್ಕದ್ದರ ಬಗ್ಗೆ ಥಿಯರಿಟಿಕಲ್ ಆಗಿ ಮಾತನಾಡುವುದು ಬೇಡ. ರಷ್ಯಾದಲ್ಲಿ ಹೆಚ್ಚು ಉತ್ಪನ್ನ ಆಗುತ್ತದೆ, ಇಲ್ಲಿ ಏತಕ್ಕೆ ಆಗುವುದಿಲ್ಲ ಎಂದರೆ ಇದು ರಷ್ಯಾ ಅಲ್ಲ. ಇಲ್ಲಿ ಮಾಲೀಕತ್ವ ಇದೆ, ಅಲ್ಲಿ ಮಾಲೀಕತ್ವ ಇಲ್ಲ,.. ರಷ್ಯಾದಲ್ಲಿರತಕ್ಕ ಪರಿಸ್ಥಿತಿಯನ್ನು ಅವರು ನೋಡಿಕೊಂಡು ಆರೀತಿ ಮಾಡಿದ್ದಾರೆ. ಅಲ್ಲಿ ಕೆಲಸ ಮಾಡದಿದ್ದರೆ ಚಾಟಿ ತೆಗೆದುಕೊಂಡು ಹೊಡೆಯುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇವರು ಯಾವಾಗ ರಷ್ಯಾಕ್ಕೆ ಹೋಗಿರುವುದು ?

ಶ್ರೀ ಟಿ. ಆರ್. ಶಾಮಣ್ಣ.—ಅಲ್ಲಿರತಕ್ಕ ಪರಿಸ್ಥಿತಿಗೆ ಅನುಗುಣವಾಗಿ ಅವರು ಮಾಡಿ ಕೊಂಡಿದ್ದಾರೆ. ಇತ್ತ ಕಡೆ ರಷ್ಯಾದಂತೆ ಬೆಳೆಸಲಿಲ್ಲ, ಅಮೆರಿಕಾದಂತೆಯೂ ಬೆಳೆಸಲಿಲ್ಲ, ಅರ್ಧಂ ಬರ್ಧ ತಂದಿರುವುದು ಶೋಚನೀಯವಾದ ವಿಚಾರ. ಸರಿಯಾದ ರೀತಿಯಲ್ಲಿ ಗ್ರೌಂಡ್ ಪ್ರಿಪೇರ್ ಮಾಡಿಕೊಂಡು ಉತ್ಪನ್ನ ಹೆಚ್ಚು ಮಾಡುವುದಕ್ಕೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲ. ಸಾಧ್ಯವಾದಷ್ಟು ರಿಫಾರಮ್ಸ್ ಅನ್ನು ತೆಗೆದುಕೊಂಡು ಬನ್ನಿ. ನನ್ನ ಅಡ್ಡಿ ಇಲ್ಲ. ಆದರೆ ಏನೇನೋ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಹೋಗಿ, ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳತಕ್ಕ ಕೆಲಸ ನಿರ್ವಹಿಸುವ ವಿಚಾರವಾದರೆ, ಆ ಎಕ್ಸ್‌ಪೆರಿಮೆಂಟಿಗೆ ಮಾತ್ರ ಇದನ್ನು ಮಾಡುವುದಾದರೆ, ಖಂಡಿತವಾಗಿಯೂ ಫುಡ್ ಪ್ರೊಡಕ್ಷನ್‌ಗೆ ಧಕ್ಕೆ ಬರುತ್ತದೆ. ಅದಕ್ಕೆ ಧಕ್ಕೆ ಬಾರದ ಹಾಗೆ ರಿಫಾರಮ್ಸ್ ತೆಗೆದುಕೊಂಡು ಬರಬೇಕು ಎಂದು ಒತ್ತಾಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೆಲವು ವಿಚಾರಗಳಲ್ಲಿ ನಾನು ಆಗಲೇ ಹೇಳಿದಂತೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಮುಖ್ಯವಾದ ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಆದುದರಿಂದ ಅವರು ನ್ಯಾಯವಾದಂಥ ಬದಲಾವಣೆಗಳನ್ನು ಮಾಡಲಿಲ್ಲ. 16 ಕಲೋ ಮಿಟರ್ಸ್ ಇರತಕ್ಕದ್ದನ್ನು ತಗೆದುಹಾಕಿರುವುದು ತಮ್ಮ ಅನುಕೂಲಕ್ಕೆ ಮತ್ತು ಒತ್ತಡಕ್ಕೆ ಮಾಡಿಕೊಂಡಿದ್ದೇ ಹೊರತು ಪ್ರಿನ್ಸಿಪಲ್‌ಗೋಸ್ಕರ ಮಾಡಿಕೊಂಡಿದ್ದು ಅಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಮಗ ಅಲ್ಲಿ ಕೆಲಸ ಮಾಡುವವನು ಇರುತ್ತಾನೆ.

ಶ್ರೀ ಟಿ. ಆರ್. ಶಾಮಣ್ಣ.—16 ಕಲೋ ಮಿಟರ್ಸ್ ಇಡಬೇಕಾಗಿತ್ತು. ಒತ್ತಡಕ್ಕೆ ಮಣಿದು ಅದನ್ನು ಕಿತ್ತು ಹಾಕಿದ್ದಾರೆಯೇ ಹೊರತು ಪ್ರಿನ್ಸಿಪಲ್‌ಗೋಸ್ಕರ ಅಲ್ಲ. 12 ಸಾವಿರ ರೂಪಾಯಿ ಇನ್‌ಕಂ ಲಿಮಿಟ್ ಈಗ ಇರುವವರಿಗೆ ಬೇಡ ಮುಂದೆ ಬರುವವರಿಗೆ ಇರಲಿ ಎಂದು ಮಾಡಿರುವುದು ಸರಿಯಿಲ್ಲ. ಇದನ್ನು ಕೂಡ ಅನುಕೂಲಕ್ಕೆ ಮಾಡಿರುವುದೆಂದು ಹೇಳುತ್ತೇನೆ. ರೈತರು ಮುಂದೆ ಹುಶಾರಾಗಿ ಇರುತ್ತಾರೆ. ನೀವು ಚಾಪೆಕೆಳಕ್ಕೆ ತೂರಿದರೆ ಅವರು ರಂಗೋಲಿಯ ಕೆಳಕ್ಕೆ ತೂರುತ್ತಾರೆ. 12 ಸಾವಿರ ರೂಪಾಯಿ ಮಿತಿ ಎಲ್ಲರ ಮೇಲೂ ತರಬೇಕಾಗಿತ್ತು. ಬಾಕಿ ಎಲ್ಲರನ್ನೂ ಬಿಟ್ಟುಬಿಟ್ಟು ಬಡ ಬೋರೇಗೌಡನಿಗೆ ಈ ಮಿತಿ ಇಡುವುದು ತಪ್ಪೆಂದು ಹೇಳುತ್ತೇನೆ. ಬೇರೆಯವರು ಇಲ್ಲಿ ಬೇಕಾದಷ್ಟು ಲೂಟಿ ಮಾಡಬಹುದು ಅವರನ್ನು ಬಿಟ್ಟು ಬಿಡುತ್ತಾರೆ. ಆದರೆ ಬಡ ರೈತರ ಮೇಲೆ ಕಣ್ಣು ಹಾಕುವುದು ಸರಿಯಲ್ಲ. ಬೇರೆಯವರು ಎಷ್ಟು ಬೇಕಾದರೂ ಸಂಪಾದನೆ ಮಾಡಲಿ ಎಂದು ಬಿಟ್ಟು ಬಿಟ್ಟು ರೈತನ ಕತ್ತು ಹಿಸುಕಲಿಕ್ಕೆ ಹೋಗುವುದು ಸರಿಯಲ್ಲ. ಈಗ 12 ಸಾವಿರ ಮಿತಿ ಹೋಗಿರತಕ್ಕದ್ದು ಮತ್ತು 16 ಕಲೋ ಮೀಟರ್ ಕಿತ್ತು ಹಾಕಿರತಕ್ಕದ್ದು ಪ್ರಿನ್ಸಿಪಲ್ ಗೋಸ್ಕರವಲ್ಲ. ಇದರಿಂದಾಗಿ ನಿಮ್ಮಲ್ಲಿ ಅನೇಕರು ಈ ಭೂ ಸುಧಾರಣೆ ಪರಿಮಿತಿಯಿಂದ ತಪ್ಪಿಸಿ ಕೊಳ್ಳುವ ಉದ್ದೇಶದಿಂದ ಇದನ್ನು ಮಾಡಿರತಕ್ಕದ್ದು ಎಂದು ಹೇಳುತ್ತೇನೆ. ದಯವಿಟ್ಟು ನೀವು ಮಾಡತಕ್ಕ ಕೆಲಸಗಳಲ್ಲಿ ಆಹಾರದ ಉತ್ಪನ್ನಕ್ಕೆ ಧಕ್ಕೆ ಬರುವ ಕಾರ್ಯಕ್ರಮ ತೆಗೆದುಕೊಳ್ಳಬೇಡಿ ಸಹಕಾರವನ್ನು ಬೆಳೆಸಿ ಎಂದು ಹೇಳುವುದಿಲ್ಲ. ಎಕನಾಮಿಕ್ ಹೋಲ್ಡಿಂಗ್‌ಗಿಂತ ಹೆಚ್ಚಾಗಿ ಇರುವುದನ್ನು ತೆಗೆದುಕೊಳ್ಳುವುದಕ್ಕೆ ನಾನು ಅಡ್ಡಿ ಬರುವವನಲ್ಲ. ನೀವು ಕೊಡತಕ್ಕ ಜಮೀನಿನಿಂದ ನಣ್ಣಪುಟ್ಟ ರೈತರಿಗೆ ಪ್ರಯೋಜನವಾಗಬೇಕೇ ಹೊರತು ನೀವು ಬರೇ ಜಮೀನು ಹಂಚಿದ್ದೇವೆ ಎಂದ್ರ

(ಶ್ರೀ ಟಿ. ಆರ್. ಶಾಮಣ್ಣ)

ಹೇಳುವುದಕ್ಕೆ ಹೋಗಬೇಡಿ. ಅವರನ್ನು ಉದ್ಧಾರ ಮಾಡುವ ರೀತಿಯಲ್ಲಿ ಹೋಗಬೇಕು. ಹಿಂದೆ ಸ್ವಾಮಿಗಳೊಬ್ಬರು ಹೇಳುತ್ತಿದ್ದರು. ಒಬ್ಬನನ್ನು ಕೆಡಿಸಬೇಕಾದರೆ ಹಳೆಯ ಕಾರನ್ನು ಕೊಟ್ಟು ಎಲೆಕ್ಷನ್ನಿಗೆ ನಿಲ್ಲಿಸಿ ಬಿಡಿ ಎಂದು ಭೂ ಮಾಲೀಕರು ಒಳ್ಳೆಯ ಜಮೀನು ಎಲ್ಲಾ ಇಟ್ಟುಕೊಂಡು ಬಿಟ್ಟು ಕೆಲಸಕ್ಕೆ ಬಾರದ ಜಮೀನನ್ನು ಸರೆಂಡರ್ ಮಾಡುತ್ತಾರೆ. ಅಂಥ ಜಮೀನನ್ನು ಏನೂ ತಿಳಿಯದ ರೈತರ ತಲೆಗೆ ಕಟ್ಟಿ ಬಿಡುವುದು ಸರಿಯಲ್ಲ. ಅವರನ್ನು ಉದ್ಧಾರ ಮಾಡಬೇಕಾದರೆ ಅವನೂ ಜಮೀನಿನಲ್ಲಿ ಬೆಳೆದು ತನ್ನ ಕಾಲಿನ ಮೇಲೆ ನಿಂತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೇ ಹೊರತು ಒಂದು ಎಕರೆ ಜಮೀನು ಕೊಟ್ಟರೆ ಅದರಿಂದ ಎನೂ ಪ್ರಯೋಜನವಿಲ್ಲ. Side by side along with the land you must give him all facilities to see that he becomes the real cultivator of that land. ತಾವು ಮಾಡುವ ಕಾನೂನಿನ ಪರಿಣಾಮ ಲಕ್ಷಾಂತರ ಪ್ರಜೆಗಳ ಮೇಲೆ ಆಗುವುದರಿಂದ ಯೋಚನೆ ಮಾಡಿ ಕಾನೂನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ಎಂ. ಭಂಗಿ (ಜಮಖಂಡಿ).— ಮಾನ್ಯ ಉಪಾಧ್ಯಕ್ಷರೇ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಈ ನಡನದಲ್ಲಿ ಇಟ್ಟಂಥ ರಿಪೋರ್ಟಿನ ಸಲುವಾಗಿ ನಾನು ಹಲಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯವರ ಸಭೆ ನಡೆದ ಸಮಯದಲ್ಲಿ ನಾನು ಹಾಜರಾಗಿ ಬರಹ ಮೂಲಕ ರೆಪ್ರಸಂಟೇಷನ್ ಕೊಟ್ಟಿದ್ದೇನೆ. ನನ್ನ ಸಾಕ್ಷಿ ಕೂಡ ಸೆಲೆಕ್ಟ್ ಕಮಿಟಿಗೆ ಕೊಟ್ಟಿದ್ದೇನೆ. ನಾನು ಮಾಡಿದ ಕೆಲವು ಸಲಹೆಗಳನ್ನು ಸೆಲೆಕ್ಟ್ ಕಮಿಟಿಯವರು ಒಪ್ಪಿದ್ದಾರೆ. ಆ ಬಗ್ಗೆ ನಾನು ಅವರಿಗೆ ಕಂಬಾ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಹಲಕೆಲವು ವಿಷಯದಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ನನ್ನ ಸಲಹೆಗಳನ್ನು ಒಪ್ಪಿಲ್ಲ. ಅದುದರಿಂದ ನಾನು ಈ ನಡನದಲ್ಲಿ ಅವುಗಳನ್ನು ಪುನರಪಿ ಹೇಳಿ ನಮ್ಮ ಮಾನ್ಯ ಮಂತ್ರಿಗಳು ಆ ಬಗ್ಗೆ ವಿಚಾರ ಮಾಡಬೇಕೆಂದು ಹೇಳಬಯಸುತ್ತೇನೆ. ಈ ಲ್ಯಾಂಡ್ ರಿಫಾರ್ಮ್ಸ್ ಆಕ್ಟನ್ನು ಎರಡು ವಿಭಾಗಗಳನ್ನಾಗಿ ಎಂಗಡಿಸಬಹುದು. ಮೊದಲನೆಯದು ಉಳುವವನೇ ಭೂ ಮಾಲೀಕ. ಅದಕ್ಕೆ ಸಂಬಂಧ ಪಟ್ಟದ್ದು ಒಂದರಿಂದ 63 ಕಲಂಗಳು ಕಾಯಿದೆಯಲ್ಲಿರುತ್ತವೆ. ಎರಡನೆಯದು 63 ರಿಂದ ಮುಂದಿನ ಕಲಂಗಳು ಭೂ ಹಿಡುವಳಿ ಎಷ್ಟು ಇರಬೇಕೆಂಬುದು. ಹೀಗೆ ಎರಡು ವಿಭಾಗ ಇರುತ್ತದೆ. ಮುಂಬೈ ಕಾಯಿದೆಯಲ್ಲಿ ಎರಡು ವಿಭಾಗಗಳನ್ನು ಮಾಡಿ ಟೆನೆನ್ಸಿ ಕಾಯಿದೆಯನ್ನು ಸ್ವತಂತ್ರವಾದ ಕಾಯಿದೆಯನ್ನಾಗಿ ಮಾಡಿ, ಸೀಲಿಂಗ್ ಆಕ್ಟನ್ನು ಎರಡನೆ ಕಾಯಿದೆಯನ್ನಾಗಿ ಮಾಡಿ, ಅಲ್ಲಿ ರೈತರಿಗೆ ಸಾಕಷ್ಟು ಪರಿಹಾರ ಕೊಟ್ಟಿದ್ದಾರೆ. ನಮ್ಮ ಉತ್ತರ ಕರ್ನಾಟಕದ ರೈತರ ಬಗ್ಗೆ ಮಾತನಾಡ ಬೇಕಾದರೆ ಮುಂಬೈ ಶಾಸನದಿಂದ ನಮಗೆ ಗೇಣಿ ಎಷ್ಟು ಪರಿಹಾರ ದೊರಕುತ್ತಿತ್ತೋ ಅಷ್ಟು ಪರಿಹಾರ ಈ ಭೂ ಸುಧಾರಣಾ ಕಾಯಿದೆಯಿಂದ ಆಗಲಿಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಯ ರಿಪೋರ್ಟಿನಿಂದಲಾಗಲೀ ದೊರಕಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಗೇಣಿದಾರರು ಹೆಚ್ಚಿನ ಗೇಣಿ ಎಂದರೆ ಕಂದಾಯದ ½ ರಿಂದ ⅓ ಪಟ್ಟು ಕೊಡಬೇಕೆಂದು ಮುಂಬೈ ಕಾಯಿದೆಯಲ್ಲಿ ಶಾಸನವಿತ್ತು. ಆದರೆ ಮೈಸೂರು ಕಾಯಿದೆಯಲ್ಲಿ ಮತ್ತು ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟಿನಲ್ಲಿ ಒಂದು ರೂಪಾಯಿ ಇದ್ದರೆ ಆದರ 10 ಪಟ್ಟು ಗೇಣಿ ಕೊಡಬೇಕೆಂದು ಇದೆ. ಅದನ್ನು 8ನೇ ಕಲಂನಲ್ಲಿ ತೆಗೆದಿದೆ. ಆಮೇಲೆ ಮುಂಬೈ ಭಾಗದಲ್ಲಿರತಕ್ಕ ಗೇಣಿದಾರರ ಹಕ್ಕುಗಳನ್ನು ಈ ಕಾಯಿದೆಯಿಂದ ಕಸಿದುಕೊಳ್ಳಲ್ಪಟ್ಟಿದೆ. ಅದರ ಪ್ರಕಾರ ಒಂದು ರೂಪಾಯಿ ಕಂದಾಯ ವಿದ್ದರೆ ಪ್ರಮಾವಧಿ 20 ರೂಪಾಯಿನಿಂದ 200 ರೂಪಾಯಿಗಳವರೆಗೆ ಮಾಲೀಕರಿಗೆ ಪರಿಹಾರಧನ ಕೊಡಬೇಕೆಂದು ಮುಂಬೈ ಟೆನೆನ್ಸಿ ಕಾಯಿದೆ ಇದ್ದರೂ ಕೂಡ ಗೇಣಿದಾರರಿಗೆ ದೊರೆವ ಹಕ್ಕು ಮೈಸೂರು ಜಾಯಿಂಟ್ ಸೆಲೆಕ್ಟ್ ಸಮಿತಿಯ ಕಾಯಿದೆಯಿಂದ ಕಸಿದುಕೊಳ್ಳುತ್ತಿದ್ದಾರೆ. ಆ ದೃಷ್ಟಿಯಿಂದ ಕಂದಾಯ ಮಂತ್ರಿಗಳಿಗೆ ಈ ಬಗ್ಗೆ ವಿಚಾರ ಮಾಡಿ ಮುಂಬೈ ಶಾಸನದಲ್ಲಿ ಇದ್ದಂತೆ ಗೇಣಿಯ ⅓ ಪಟ್ಟು ಮತ್ತು ಪರಿಹಾರಧನ ಅಂದರೆ 20 ರಿಂದ 200 ರೂಪಾಯಿಗಳವರೆಗೆ ಮಾಲೀಕರಿಗೆ ದೊರೆಯುವ ಹಾಗೆ ವ್ಯವಸ್ಥೆಯನ್ನು ಈ ಕಂದಾಯದಲ್ಲಿ ಮಾಡತಕ್ಕದ್ದು ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಎರಡನೆಯ ವಿಷಯವೇನೆಂದರೆ ಈ ಕಾಯಿದೆಯಿಂದ ಆದಷ್ಟು ಮಟ್ಟಿಗೆ ಮುನ್ಸೀಫ್ ಮತ್ತು ಸಿವಿಲ್ ಕೋರ್ಟ್‌ಗೆ ಇದ್ದಂಥ ಅಧಿಕಾರವನ್ನು ತೆಗೆದುಕೊಂಡು ತಹಶೀಲ್ದಾರರಿಗೆ ಮತ್ತು ಲ್ಯಾಂಡ್ ಟ್ರಿಬ್ಯೂನಲ್‌ಗೆ ಕೊಡಲ್ಪಟ್ಟಿದೆ. ಆದರೆ 7ನೇ ಕಲಂನಲ್ಲಿ ಎವಿಕ್ಟೆಡ್ ಟೆನೆಂಟ್ಸ್ ಬಗ್ಗೆ ಅಧಿಕಾರವನ್ನು ಕೇವಲ ಮುನಾಸೀಫ್ ಕೋರ್ಟ್‌ಗೆ ಕೊಡಲ್ಪಟ್ಟಿದೆ. ಈ ಅಧಿಕಾರವನ್ನು ಕೂಡ ತಹಶೀಲ್ದಾರರಿಗೆ ಕೊಡತಕ್ಕದ್ದು. ಆ ದೃಷ್ಟಿಯಿಂದ ಜಾಯಿಂಟ್ ಸೆಲೆಕ್ಟ್

ಕಮಿಟಿಯವರು ಈ ಬಗ್ಗೆ ವಿಚಾರ ಮಾಡಿಲ್ಲ, ಇದನ್ನು ವಿಚಾರ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಮುಂದೆ 14ನೇ ಕಲಂ ಮತ್ತು 16ನೇ ಕಲಮನ್ನು ಕಾಯಿದೆಯಿಂದ ತೆಗೆದು ಹಾಕಲ್ಪಟ್ಟಿರುತ್ತದೆ. ಈ ಕಾಯಿದೆಯ ಈ ಎರಡು ಕಲಂಗಳು ಕುಳಗಳಿಗೆ ಹೆಚ್ಚಿಗೆ ತೊಂದರೆ-ಉಂಟು ಮಾಡುತ್ತಿವೆ. ಈ ದೃಷ್ಟಿಯಿಂದ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಈ ಎರಡು ಕಲಂಗಳನ್ನು ತೆಗೆದುಹಾಕಿ ಕುಳಗಳಿಗೆ ಹೆಚ್ಚಿಗೆ ಅನುಕೂಲ, ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವ ಬಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ನನ್ನ ಅಭಿಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಷಯದಲ್ಲಿ ನಾನು ಹೇಳಬಯಸುವುದೇನೆಂದರೆ, ಈ ಕಲಂಗಳಿಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡಬಹುದಾಗಿತ್ತು. ಈ ದೃಷ್ಟಿಯಿಂದ ಯಾವ ಭೂಮಾಲೀಕರಿಗೆ ಯಾವತ್ತೂ ಜಮೀನುಗಳು 14ನೇ ಸೆಕ್ಷನ್ ಪ್ರಕಾರ ದೊರೆತಿರುತ್ತವೆ, ಅಂಥ ಭೂಮಾಲೀಕರಿಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯು ವರದಿಯಿಂದ ಬಾಧೆ ಬರುವುದಿಲ್ಲ. ಇನ್ನು ಮುಂದೆ ಹೈಕೋರ್ಟಿಗೆ ಈ ವಿಷಯ ಹೋದರೆ ಡಿಸ್ಕ್ರಿಮಿನೇಷನ್ ಇರುವುದರಿಂದ ಎರಡು ಕಲಂಗಳು ರದ್ದಾಗಿ ರೈತರಿಗೆ ಯಾವ ರೀತಿಯ ಪರಿಹಾರ ದೊರಕುವುದಿಲ್ಲ. ಕಂದಾಯ ಮಂತ್ರಿಗಳು ಈಗ ಇವ್ವೆ ಹುಕುಂಗಳನ್ನು ರೀಪಿಪನ್‌ಮಾಡಿ ಯಾವ ಭೂಮಾಲೀಕರು ಜಮೀನುಗಳನ್ನು ತೆಗೆದುಕೊಂಡಿದ್ದಾರೋ ಅವುಗಳನ್ನು ಪುನರಪಿ ಅದೇ ಕುಳಗಳಿಗೆ ಕೊಡಬೇಕೆಂದು ಈ ಕಾಯಿದೆಯಲ್ಲಿ ವ್ಯವಸ್ಥೆ ಮಾಡತಕ್ಕದ್ದು. ಈ ಪ್ರಕಾರವಾಗಿ ಮೈಸೂರು ರಾಜ್ಯದ 1968ನೇ ಕಾಯಿದೆ 5ನೇ ಕಲಮಿನಲ್ಲಿ ತಿದ್ದುಪಡಿ ಮಾಡಿ ಭೂಮಾಲೀಕರಿಗೆ ದೊರೆತಂಥ ಜಮೀನುಗಳನ್ನು ಪುನರಪಿ ಕುಳಗಳಿಗೆ, ಗೇಣೀದಾರರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಅದೇ ಪ್ರಕಾರವಾಗಿ 2 ಕಲಂಗಳನ್ನು ರದ್ದುಮಾಡಿ ಭೂಮಾಲೀಕರಿಗೆ ದೊರೆತಂಥ ಸರ್ಟಿಫಿಕೇಟ್ ಮತ್ತು ದೊರೆತಂಥ ಜಮೀನುಗಳನ್ನು ಪುನರಪಿ ಯಾವತ್ತೂ ಗೇಣೀದಾರರಿಗೆಷ್ಟಿಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. 44ನೇ ಕಲಂ ಪ್ರಕಾರ ಯಾವತ್ತೂ ಕುಳಗಳ ಕತೆಗೆ ಇದ್ದ ಜಮೀನುಗಳಿಗೆ ಅವರು ಮಾಲೀಕರಾಗುವುದಿಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ಪ್ರಕಾರ 20 ವರ್ಷಗಳಾದ ನಂತರ ಗೇಣೀದಾರ ರಿಜಿಸ್ಟರ್ಡ್ ಆಕ್ಯುಪೆಂಟ್ಸ್ ಆಗುವ ಸಂಭವವಿದೆ. ಮುಂಬೈ ಕಾಯಿದೆ ಪ್ರಕಾರ ಡೆನೆನ್ಸಿ ಡಿಕ್ಲೇರ್‌ಮಾಡಿ ಯಾವತ್ತೂ ಕುಳಗಳು ಡೀಮ್ಡ್ ಪರ್ಚೇಸರ್ಸ್ ಆಗುತ್ತಾರೆ. ಅದೇ ಪ್ರಕಾರ ಕುಳಗಳು ಡೀಮ್ಡ್ ರಿಜಿಸ್ಟರ್ಡ್ ಆಕ್ಯುಪೆಂಟ್ಸ್ ಇನ್ ಎಫೆಕ್ಟ್ ಆಗತಕ್ಕದ್ದು. ಆ ಪ್ರಕಾರ ಕಾಯಿದೆ ಮಾಡಿ, ಯಾವತ್ತೂ ಕುಳಗಳನ್ನು ಭೂಮಾಲೀಕರನ್ನಾಗಿ ಮಾಡಬೇಕೆಂದು ಸೂಚಿಸಬಯಸುತ್ತೇನೆ. 63(8) ಕಲಂನಲ್ಲಿ ಪ್ಲಾಂಟೇಷನ್ ಕ್ಯಾಪ್ಸ್‌ಗೆ ವಿನಾಯಿತಿ ಕೊಟ್ಟಿದ್ದೀರಿ. ಅದು ಸರಿಯಲ್ಲ. ಎಷ್ಟು ಕುಳಗಳನ್ನು ಸರಿಸಮಾನವಾಗಿ ತಿಳಿಯತಕ್ಕದ್ದು. ಪ್ಲಾಂಟೇಷನ್ ಕ್ಯಾಪ್ಸ್‌ಗೂ ಕೂಡ 10 ಯೂನಿಟ್ಸ್ ಸೀಲಿಂಗ್ ಅನ್ವಯಿಸತಕ್ಕದ್ದು ಎಂದು ನಾನು ಈ ಸಮಯದಲ್ಲಿ ಸಲಹೆ ಮಾಡಬಯಸುತ್ತೇನೆ. 133 ನೇ ಕಲಮಿನಲ್ಲಿ 1 ನೇ ಭಾಗ ಈ ರೀತಿ ಇದೆ :

> "If any suit instituted in the Court as defined in this Act, involves any issues which are required to be settled, decided or dealt with by that court under this Act the same shall be tried as preliminary issues and the suit shall be proceeded with after deciding such preliminary issues."

ಈ ಪ್ರಕಾರವಾಗಿ ಇದರಲ್ಲಿ ವ್ಯವಸ್ಥೆ ಇದೆ. ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್‌ನಲ್ಲಿ ಈ ಕಲಮಿನ ಬಗ್ಗೆ ಯಾವ ದುರಸ್ತಿಯನ್ನೂ ಸೂಚಿಸಲ್ಪಟ್ಟಿಲ್ಲ. ಮಾಲೀಕ ಮತ್ತು ಗೇಣೀದಾರರ ಉಭಯತ್ರರಲ್ಲೂ ವ್ಯಾಜ್ಯ ಇದ್ದಪಕ್ಷದಲ್ಲಿ ಲ್ಯಾಂಡ್ ಟ್ರಿಬುನಲ್ ಡಿಸೈಡ್ ಮಾಡತಕ್ಕದ್ದು ಎಂದು ಲ್ಯಾಂಡ್ ಟ್ರಿಬ್ಯೂನಲ್‌ಗೆ ಅಧಿಕಾರ ಕೊಟ್ಟಿರುತ್ತಾರೆ. ಆದರೆ ಈ ಕಲಮಿನಲ್ಲಿ ಮುನ್ಸೀಫ್ ಕೋರ್ಟಿಗೆ ಅಧಿಕಾರ ಏಕೆ ಇರಬೇಕು ? ಉಳಿದ ವಿಷಯದಲ್ಲಿ ಲ್ಯಾಂಡ್ ಟ್ರಿಬ್ಯೂನಲ್ಲಿಗೆ ಅಧಿಕಾರ ವಿರುವಾಗ ಇದರಲ್ಲಿ ಏಕೆ ತಾರತಮ್ಯ ಮಾಡಬೇಕು ? ನಾನು ಹೇಳಬಯಸುವುದೇನೆಂದರೆ ಮುನ್ಸೀಫ್ ಕೋರ್ಟಿನಲ್ಲಿ ಗೇಣೀದಾರರ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಯಾವುದಾದರೂ ಕೇಸ್ ಇದ್ದರೆ ಅವುಗಳನ್ನು ತಹಶೀಲ್ದಾರರ ಕಡೆಗೆ ಕಳುಹಿಸತಕ್ಕದ್ದು. ತಹಶೀಲ್ದಾರ್ ಅಥವಾ ಲ್ಯಾಂಡ್ ಟ್ರಿಬ್ಯೂನಲ್ ಕೊಟ್ಟ ನಿರ್ಣಯಗಳನ್ನು ಮುನ್ಸೀಫ್ ಕೋರ್ಟ್ ಮಾನ್ಯಮಾಡಿ ಆ ಪ್ರಕಾರವಾಗಿ ಹುಕುಂ ಮಾಡತಕ್ಕದ್ದು ಎಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ವಕೀಲರಿಗೆ ಹಾಜರಾಗಲು ಪ್ರವಾನಗಿ ಇಟ್ಟಿಲ್ಲ. ಲ್ಯಾಂಡ ಟ್ರಿಬ್ಯೂನಲ್ ಕೆಲಸ ನಡೆಯುವ

(ಶ್ರಿ ಪಿ. ಎಂ. ಭಂಗಿ)

ಸಮಯದಲ್ಲಿ ಅಶಿಕ್ಷಿತ ಗೇಣೀದಾರರಿಗೆ ಇದರಿಂದ ತೊಂದರೆಯಾಗುತ್ತದೆ. ಆ ದೃಷ್ಟಿಯಿಂದ ರ್ಯಾಂಡ್ ಟ್ರಿಬ್ಯೂನರ್ ಮುಂದೆ ವಕೀಲರು ಹಾಜರಾಗಿ ಕೆಲಸ ನಿರ್ವಹಿಸುವ ಅನುಕೂಲತೆ ಮಾಡಿ ಕೊಡಬೇಕು. ಈ ಬಗ್ಗೆ ಇರುವ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ನಾನು ಸೂಚಿಸಬಯಸುತ್ತೇನೆ. ಕಾಫಿಬೋರ್ಡ್ ವ್ಯಕ್ತಿ ಇಲ್ಲದೇ ಇದ್ದಾಗ್ಯೂ ಕೂಡ ಅದಕ್ಕೆ ಕಾಯಿದೆ ವಿನಾಯಿತಿ ಕೊಡಲ್ಪಟ್ಟಿದೆ. ಆದರೆ ಶೈಕ್ಷಣಿಕ ಸಂಸ್ಥೆಗಳವರು ಯಾವರೀತಿಯಿಂದಲೂ ಭೂಮಾಲೀಕ ಆಗತಕ್ಕ ದ್ದಲ್ಲ. ಅವರು ಪ್ರತಿವರ್ಷ ಕೇವಲ ಗೇಣಿ ತೆಗೆದುಕೊಂಡು ಸಂತೋಷ ಪಡಬೇಕೆಂದು ಕಲಮಿನಲ್ಲಿ ಹೇಳಲ್ಪಟ್ಟಿದೆ. 107 ನೇ ಕಲಮನ್ನು ತೆಗೆದುಹಾಕಿ ಶೈಕ್ಷಣಿಕ ಸಂಸ್ಥೆಗಳಿಗೆ ಇದ್ದಂಥ ವಿನಾಯಿತಿ ಕಸಿದುಕೊಳ್ಳಲ್ಪಟ್ಟಿದೆ. ಇದು ಸರಿಯಿಲ್ಲ. ರಾಜ್ಯದಲ್ಲಿರತಕ್ಕ ಅನೇಕ ವಿದ್ಯಾಸಂಸ್ಥೆಗಳು ಭೂಮಿ ಉತ್ಪನ್ನದಿಂದ ಸಾಗಲ್ಪಟ್ಟಿರುತ್ತವೆ. ಸರ್ಕಾರದವರು ಯಾವತ್ತೂ ಕಾಲೇಜುಗಳನ್ನು ಸರ್ಕಾರದ ಕಾಲೇಜುಗಳನ್ನಾಗಿ ನಡೆಸಿದ ಪಕ್ಷದಲ್ಲಿ ಈ ವಿನಾಯಿತಿ ತೆಗೆದುಹಾಕತಕ್ಕದ್ದು. ಆದರೆ ಸದ್ಯಕ್ಕೆ ಸರ್ಕಾರದವರು ಶಾಲೆಗಳಿಗೆ, ಕಾಲೇಜುಗಳಿಗೆ ಯಾವ ರೀತಿಯಿಂದಲೂ ಸಂಪೂರ್ಣವಾಗಿ ಹಣ ಕೊಡುವುದಿಲ್ಲ. ಕೇವಲ ಡಿಫಿಸಿಟ್‌ನ 80 ಪರ್ಸೆಂಟ್ ಗ್ರಾಂಟ್ ಕೊಡುತ್ತಾರೆ. ಉಳಿದ 20 ಪರ್ಸೆಂಟ್ ಹಣ ಏನಿದೆ ಅದನ್ನು ಭೂಮಿ ಉತ್ಪನ್ನದಿಂದ ತುಂಬಿ ಯಾವತ್ತೂ ಶೈಕ್ಷಣಿಕ ಸಂಸ್ಥೆಗಳನ್ನು, ಶಾಲೆಗಳನ್ನು, ಕಾಲೇಜುಗಳನ್ನು, ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಆದುದರಿಂದ ಈ ಸಮಯದಲ್ಲಿ ಈ ವಿನಾಯಿತಿ ತೆಗೆದುಹಾಕುವುದು ಸರಿಯಲ್ಲ ಎಂದು ಹೇಳಬಯಸುತ್ತೇನೆ.

ಮತ್ತೊಂದು ವಿಷಯವೇನೆಂದರೆ, ಭೂಸುಧಾರಣೆ ವಿಷಯದಲ್ಲಿ ಬೇರೆ ರಾಜ್ಯಗಳಲ್ಲಿ ಇದ್ದಂಥ ಭೂಮಿಗಳನ್ನು ಲಕ್ಷ್ಯದಲ್ಲಿ ತೆಗೆದುಕೊಂಡು ಸೀಲಿಂಗ್ ಏರಿಯಾ ಫಿಕ್ಸ್ ಮಾಡುವ ಬಗ್ಗೆ ಈ ಕಾಯಿದೆಯಲ್ಲಿ ವ್ಯವಸ್ಥೆ ಇಲ್ಲ. ಮುಂಬೈ ರಾಜ್ಯದಲ್ಲಿ, ಮದ್ರಾಸ್ ರಾಜ್ಯದಲ್ಲಿ, ಹಿಂದೂಸ್ಥಾನದಲ್ಲಿ ಇರುವ ಯಾವುದೇ ರಾಜ್ಯದಲ್ಲಿ ಭೂಮಾಲಿಕನಿಗೆ ಜಮೀನಿದ್ದರೆ, ಅವುಗಳನ್ನು ಲಕ್ಷ್ಯದಲ್ಲಿ ತೆಗೆದುಕೊಂಡು ಸೀಲಿಂಗ್ ಫಿಕ್ಸ್ ಮಾಡಬೇಕು ಎಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. ಜೆನೆನ್ಸಿ ಇಯರ್ ಬಗ್ಗೆ ಕಾಯಿದೆಯಲ್ಲಿ ದುರಸ್ತಿ ಇಲ್ಲ. ಇದರ ಬಗ್ಗೆ ಜಾಯಿಂಟ್ ಸೆಲೆಕ್ಟ್ ಸಮಿತಿಯು ವರದಿಯಲ್ಲಿ ಉಲ್ಲೇಖಿಸಿಲ್ಲ. ಈ ಬಗ್ಗೆ ಒಂದು ವಾಕ್ಯ ಸ್ಪಷ್ಟವಾಗಿ ಹಾಕಬೇಕು ಎಂದು ಪದೇ ಪದೇ ಹೇಳುತ್ತಿದ್ದೇನೆ. ಮಾನ್ಯ ಕಂದಾಯ ಮಂತ್ರಿಗಳು ಜೆನೆನ್ಸಿ ಇಯರ್ ಬಗ್ಗೆ ಗಮನಕೊಟ್ಟು ಒಂದು ವಾಕ್ಯ ಹಾಕಬೇಕೆಂದು ನಾನು ಸೂಚಿಸಬಯಸುತ್ತೇನೆ. ಕ್ಷಾಮಗ್ರಸ್ಥ ಪ್ರದೇಶದಲ್ಲಿ 20 ಪರ್ಸೆಂಟ್ ಪೈಸೆಯ ಚೇಜ್ ಕೊಡಬೇಕೆಂದು ಜಾಯಿಂಟ್ ಸೆಲೆಕ್ಟ್ ಕಮಿಟಿ ಸೂಚಿಸಿದ್ದು ಸರಿಯಲ್ಲ. ಯಾವತ್ತೂ ಮೈಸೂರು ರಾಜ್ಯದಲ್ಲಿರುವ ಎಲ್ಲಾ ಜನರಿಗೆ ಸರಿಸಮಾನವಾದ ಕಾಯಿದೆ ಅಥವಾ ಒಂದೇ ಭೂ ಹಿಡುವಳಿ ಇರುವಂತೆ ವ್ಯವಸ್ಥೆ ಮಾಡಬೇಕು. ಕ್ಷಾಮಗ್ರಸ್ಥ ನಾಡಿನಲ್ಲಿ ಕೂಡ ಭೂಹಿಡುವಳಿಗೆ ಸಂಬಂಧಪಟ್ಟ ಜಮೀನು ಎಲ್ಲ ಚಲೋ ರೀತಿ ಸಾಗುವಳಿ ಮಾಡಿ ಉತ್ಪನ್ನ ತೆಗೆದರೆ ಸರಿಯಾದ ಉತ್ಪನ್ನ ಬರುತ್ತದೆ. ಆ ದೃಷ್ಟಿಯಿಂದ ಮೆಯಚೇಜ್ ಏನು ಕೊಡಲಾಗಿದೆ ಅದೂ ಸರಿಯಲ್ಲ ಎಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಈ ಸಮಯದಲ್ಲಿ ಹೇಳುವುದೇನೆಂದರೆ ನಧ್ಯಕ್ಕೆ ಮುನ್ಸೀಫ್ ಕೋರ್ಟ್‌ನಲ್ಲಿ ಬೇರೆ ಬೇರೆ ವ್ಯಾಜ್ಯಗಳು, ಬೇರೆ ಬೇರೆ ಲಿಟಿಗೇಷನ್ಸ್ ಪೆಂಡಿಂಗ ಇರುತ್ತವೆ. ಈ ಮುನ್ಸೀಫ್ ಕೋರ್ಟ್‌ನಲ್ಲಿ 14ನೇ ಕಲಂ ಪ್ರಕಾರ ದಾಖಲು ಆದಂಥ ಜೆನೆನ್ಸಿ ಕೇಸ್‌ಗಳು, ರ್ಯಾಂಡ್ ರಿಕವರಿ ಕೇಸ್‌ಗಳು ಪೆಂಡಿಂಗ್ ಇದ್ದವುಗಳನ್ನು ವರ್ಗಾವಣೆ ಮಾಡಿ ತಹಶೀಲ್ದಾರರ ಕಡೆಗೆ ಕಳುಹಿಸಬೇಕು ಎನ್ನುವ ವ್ಯವಸ್ಥೆ ಇಲ್ಲ.

ಅದನ್ನು ಮಾಡುವುದು ಅವಶ್ಯ ಇದೆ. ಈ ಬಗ್ಗೆ ದಿವಾಣಿ ಕೋರ್ಟ್‌ನಲ್ಲಿ ಕೆಲವು ಮತ್ತು ತಾಸೀಲ್ದಾರ್ರರು ಕೆಲವು ನಿರ್ಣಯ ಮಾಡಿದರೆ ಭಾಗಸ್ಥರಿಗೆ ತೊಂದರೆಯಾಗುತ್ತವೆ. ಆದುದರಿಂದ ಇದರಲ್ಲಿ 14 ನೇ ಕಲಂ ತೆಗೆದರೂ ಕೂಡ ಈಗ ಪೆಂಡಿಗ್ ಇರತಕ್ಕಂಥ ಆರ್ಜಿಗಳು ಏನು ಇವೆ ಅವನ್ನು ಅಟೆಂಡ್ ಮಾಡುವುದಕ್ಕೆ ಆಗುತ್ತದೋ ಇಲ್ಲವೋ, ಆ ಬಗ್ಗೆ ಕಾಯಿದೆಯಲ್ಲಿ ಸ್ಪಷ್ಟಪಡಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ರಿಕವರಿ ಆಫ್ ರೆಂಟ್ ಬಗ್ಗೆ ಹೇಳುವುದಾದರೆ ಈಗ ಮುನ್ಸೀಫ್ ಕೋರ್ಟ್‌ನಲ್ಲಿ ಈ ಬಗ್ಗೆ ಏನು ಪೆಂಡಿಂಗ್ ಕೇಸ್ ಚಾಲು ಇರುತ್ತದೋ ಅದನ್ನು ತಾಸೀಲ್ದಾರರ ಕಡೆಗೆ ವರ್ಗಾಯಿಸಬೇಕೆನ್ನುವ ವಿಚಾರ ಈ ಜಾಯಿಂಟ್ ಸೆಲೆಕ್ಟ್ ಕಮಿಟೀ ರಿಪೋರ್ಟ್‌ನಲ್ಲಿ ಇರುವುದಿಲ್ಲ. ಇದರಿಂದ ಏನಾಗುತ್ತದೆ ಎಂದರೆ, ಈಗ ಕೆಲವು ಮುನ್ಸೀಫ್ ಕೋರ್ಟ್‌ನಲ್ಲಿ ನಿರ್ಣಯ ಮಾಡುವರು. ಮುಂದೆ

ತಾಸೀಲ್ದಾರರು ಈ ಬಗ್ಗೆ ನಿರ್ಣಯ ಮಾಡುವರು. ಇದರಲ್ಲಿ ಒಂದು ವಿಧವಾದ ಅಧಿಕಾರ ಇರುವುದಿಲ್ಲ. ಈ ದೃಷ್ಟಿಯಿಂದ ಪೆಂಡಿಂಗ್ ಇರುವಂಥಾ ಕೇಸುಗಳನ್ನೂ ಕೂಡ ಚಾಲು ಮಾಡುವುದಕ್ಕೆ ಆವರಿಂದ ರಿಕವರಿ ಆಫ್ ರೆಂಟ್ ವಸೂಲ್ಮಾಡುವುದಕ್ಕೆ ತಾಸೀಲ್ದಾರರ ಕಡೆಗೆ ವರ್ಗ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವ ಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P. M.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಉಪಾಧ್ಯಕ್ಷರೇ, ಈ ಭೂಸುಧಾರಣೆ ವಸೂದೆ ಬಗ್ಗೆ ಮತ್ತು ಭೂ ಪರಿಮಿತಿ ಬಗ್ಗೆ ಈ ಸಭೆಯಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಯವರ ರಿಪೋರ್ಟ್ ಏನು ಇಟ್ಟಿದ್ದಾರೆ ಅವನ್ನು ನಾನು ಸ್ವಾಗತಿಸುತ್ತೇನೆ. ಅದರಲ್ಲಿ ಕೆಲವು ಅಂಶಗಳನ್ನು ಸ್ವಾಗತಿಸುತ್ತೇನೆ ಇನ್ನು ಕೆಲವು ಅಂಶಗಳನ್ನು ನನ್ನ ಅಭಿಪ್ರಾಯದಲ್ಲಿ ಯಾವುದು ಅದರಲ್ಲಿ ಕೈಬಿಟ್ಟಿದೆ ಅದನ್ನೂ ಕೂಡ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅನೇಕ ವರ್ಷಗಳಿಂದಲೂ ಅದರಲ್ಲೂ ಹೋದ ವರ್ಷದಿಂದಲೂ ಈ ಭೂಸುಧಾರಣಾ ಮಸೂದೆಯನ್ನು ಜಾರಿಗೆ ತೆಗೆದುಕೊಂಡು ಬರಬೇಕು ಎಂದು ನಮ್ಮ ದೇಶದ ರೈತ ವರ್ಗದವರು ಅದರಲ್ಲೂ ಕೃಷಿ ಕಾರ್ಮಿಕರು, ಭೂಹೀನ ರೈತರು ಅನೇಕ ರೀತಿಯಲ್ಲಿ ಒತ್ತಾಯ ಮಾಡಿದ್ದುಂಟು, ಚಳುವಳಿ ನಡೆಸಿದ್ದುಂಟು, ಹೋರಾಟ ಮಾಡಿದ್ದುಂಟು. ಮತ್ತು ಇದನ್ನು ಸರ್ಕಾರ ಗಮನಿಸಿ ಈ ಭೂಮಸೂದೆಯನ್ನು ತೆಗೆದುಕೊಂಡು ಬರುತ್ತೇವೆ ಎಂದು ಹಿಂದಿನಿಂದಲೂ ಕಾಂಗ್ರೆಸ್ ಪಕ್ಷ ಹೇಳಿಕೊಂಡು ಬಂದಿದೆ. ಮತ್ತು ಇದನ್ನು ಕರಾಚಿ ಕಾಂಗ್ರೆಸ್ ಅಧಿವೇಶನದಿಂದಲೂ ಹೇಳಿಕೊಂಡು ಬಂದಿದೆ. ಆದರೆ ಕರಾಚಿ ಅಧಿವೇಶನದಲ್ಲಿ ಭೂಪರಿಮಿತಿ ಹಾಕಿರಲಿಲ್ಲ. ಇದರಲ್ಲಿ ಇನ್ನೊಂದು ಪ್ರಶ್ನೆ ಏನೆಂದರೆ ಯಾರು ಈಪೊತ್ತು ಗೇಣಿದಾರರು ಇದ್ದಾರೆ ಅವರ ಸಂಕಷ್ಟಗಳ ಬಗ್ಗೆ ಅವರನ್ನು ವಕ್ಕಲೆಬ್ಬಿಸುವುದು ಸರಿಯಾದುದಲ್ಲ. ಗೇಣಿದಾರರಿಗೆ ಪೂರ್ಣ ರಕ್ಷಣೆ ಕೊಡಬೇಕು ಎಂದು ಹೇಳಿಕೊಂಡು ಬಂದಿದ್ದಾರೆ. ಇದರಲ್ಲಿ ಒಂದು ಸಂತೋಷ ಏನೆಂದರೆ ಈ ಮಸೂದೆ ಏನು ತಂದಿದ್ದಾರೆ ಅದಕ್ಕೆ ನಾನು ಸಂತೋಷ ಪಡುತ್ತೇನೆ. ಮತ್ತು ಗೇಣಿದಾರರ ಒಂದು ಪ್ರಗತಿಗೆ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿದ್ದಾರೆ ಎಂದು ನನ್ನ ಅಭಿಪ್ರಾಯ. ಇದಕ್ಕೆ ಶಹಭಾಷ್‌ಗಿರಿ ಮೊದಲು ಹುಚ್ಚಮಾಸ್ತಿಗೌಡರಿಗೆ ಸಲ್ಲಬೇಕು. ಅನಂತರ ಇದರ ಜಾಯಿಂಟ್ ಸೆಲೆಕ್ಟ್ ಕಮಿಟಿ ಮೆಂಬರ್ಸ್‌ಗೆ ಸಲ್ಲಬೇಕು ಎಂದು ನನ್ನ ಅಭಿಪ್ರಾಯ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈಪೊತ್ತು ಇದರಲ್ಲಿ ಕೆಲವರ ವಾದ ಏನು ಇದೆ ಎಂದರೆ ಈ ಮಸೂದೆಯನ್ನು ತೆಗೆದುಕೊಂಡು ಬಂದರೆ ಇದರಲ್ಲಿ ಫ್ರಾಗ್‌ಮೆಂಟೇಷನ್ ಜಾಸ್ತಿಯಾಗುತ್ತದೆಯೇ ವಿನಾ ಉತ್ಪಾದನೆ ಜಾಸ್ತಿಯಾಗುವುದಿಲ್ಲ ಎಂದು, ಶ್ರೀ ಶಾಮಣ್ಣನವರು ಇದರ ಬಗ್ಗೆ ಹೇಳಿದರು. ಇದರ ಬಗ್ಗೆ ಪೂರ್ಣ ವಿವರಗಳನ್ನು ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶ ಇಲ್ಲ. ಇದಕ್ಕಿಂತಲೂ ಮುಂಚೆ ನಾವು ತಿಳಿದುಕೊಳ್ಳಬೇಕಾದುದು ಏನೆಂದರೆ ನಮ್ಮ ದೇಶದ ನರಾನರಿ ವರಮಾನ ಪರ್‌ಕ್ಯಾಪಿಟಾ ಇನ್‌ಕಂ ಒಂದು ವರ್ಷಕ್ಕೆ 295 ರೂಪಾಯಿ ಇದೆ. ಇದರಲ್ಲಿ 50 ಪರ್ಸೆಂಟ್ ಬಿಲೋ ಸ್ಯಾರ್ವೇಕ್ಷನ್‌ನಲ್ಲಿ ಇದೆ, ಇದನ್ನು ಸರಕಾರದವರೇ ಹೇಳಿದ್ದಾರೆ, ಇನ್ನು 40 ಪರ್ಸೆಂಟ್ ಅಬೋ ಸ್ಯಾರ್ವೇಕ್ಷನ್‌ನಲ್ಲಿ ಇದ್ದಾರೆ. ಇದರಿಂದ ಈ ಕಡಿಮೆ ಲೆವರ್‌ನಲ್ಲಿ ಇರತಕ್ಕ ರೈತ ವರ್ಗದವರು ಏನು ಇದ್ದಾರೆ, ಅವರ ಒಂದು ಹಿತಕ್ಕಾಗಿ ದೇಶದ ಉತ್ಪನ್ನ ಜಾಸ್ತಿ ಮಾಡಬೇಕಾದರೆ ಈ ಭೂಸುಧಾರಣೆಯನ್ನು ಜಾರಿಗೆ ತರದೇ ಹೋದರೆ ವಿಧಿಯಿಲ್ಲ. ಅದನ್ನು ಒಪ್ಪಿಕೊಳ್ಳಲೇ ಬೇಕು.

ಇನ್ನು ಫ್ರಾಗ್‌ಮೆಂಟೇಷನ್ ಆಫ್ ಲ್ಯಾಂಡ್ ಬಗ್ಗೆ ಏನು ಹೇಳಿದ್ದಾರೋ ಆ ಬಗೆ ತಜ್ಞರು ಹೇಳಿರುವುದರಿಂದ ನಾನು ಹೆಚ್ಚು ಹೇಳುವುದಿಲ್ಲ. ಏತಕೆಂದರೆ ನಾನು ಅಂಥ ತಜ್ಞನಲ್ಲ, ಮೇಲಾಗಿ ನಾನು ಜಮೀನು ಇಟ್ಟುಕೊಂಡವನೂ ಅಲ್ಲ. ನನಗೇನೂ ಜಮೀನು ಇಲ್ಲ. ನಾನು ಹೇಳಬೇಕಾದರೆ ಬರೀ ಥಿಯರಿಟಿಕಲ್ ನಾಲೆಡ್ಜ್‌ನಿಂದ ಹೇಳಬೇಕು. ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಏತಕ್ಕೆಂದರೆ ಅದು ಪುಸ್ತಕದ ಬದನೆಕಾಯಿ ಆಗುತ್ತದೆ. ಆದುದರಿಂದ ನಾನು ತಮ್ಮ ಮುಂದೆ ಒಂದು ವಿಷಯ ತರುವುದು ಏನೆಂದರೆ, ಈಪೊತ್ತು ದೇಶದಲ್ಲಿ ಪ್ರೊಡಕ್ಷನ್ ಅಂದರೆ ಪಾಳಿಗಾರರ ಪದ್ಧತಿ ಏನು ಇದೆ ಅವರು ಸಾವಿರಾರು ಎಕರೆ ಜಮೀನು ಇಟ್ಟುಕೊಂಡು ನೂರಾರು ಜನರ ಹತ್ತಿರ ಕೆಲಸವನ್ನು ಮಾಡಿಸಿ ಹೆಚ್ಚು ಉತ್ಪಾದನೆ ಮಾಡಿ ತಾವು ಸುಖವಾಗಿ ಇರುವ ಪದ್ಧತಿ ಏನು ಇದೆ ಅದು ಹೋಗಬೇಕು. ಮತ್ತು ಈ ಸ್ವಾತಂತ್ರ್ಯ ಬಂದ ಮೇಲಂತೂ ಬಂಡವಾಳ ಶಾಹಿಗಳು ಈ ಕೃಷಿ ವಿಧಾನವನ್ನು ಅರಿತು ಟ್ರಾಕ್ಟರುಗಳನ್ನು ಕೊಂಡು ಕೊಂಡು ಹೆಚ್ಚು ಉತ್ಪಾದನೆ ಮಾಡಿ ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ, ಕೃಷಿ ಕಾರ್ಮಿಕರು, ಬಡ

(ಶ್ರೀ ಎಂ. ಎಸ್. ಕೃಷ್ಣನ್)

ರೈತರು ಬಡವರಾಗಿಯೇ ಮುಂದುವರೆಯುತ್ತಿದ್ದಾರೆ. ನಮ್ಮ ದೇಶದಲ್ಲಿ ಯಾರು ಕೃಷಿ ಕಾರ್ಮಿಕರು, ಭೂ ಹೀನರು ಇದ್ದಾರೋ ಅಂಥಾವರಿಗೆ ಒಂದು ರಕ್ಷಣೆ ಕೊಡುವುದಕ್ಕೆ ಈ ಪಾಳೆಗಾರ ಪದ್ಧತಿ ಈವಾಗ ಏನು ಇದೆಯೋ ಅದನ್ನು ತೊಡೆದು ಹಾಕಬೇಕು. ಈ ಬಗ್ಗೆ ಚರ್ಚೆ ಆಗಿ ಒಂದು ತೀರ್ಮಾನಕ್ಕೆ ಬಂದು ಈ ಕೃಷಿ ಕಾರ್ಮಿಕರು ಮತ್ತು ಬಡ ರೈತರು ಮುಂದುವರೆದು ಸಾಮಾಜಿಕ ಅಭಿವೃದ್ಧಿ ಬೆಳೆಯುವಂತೆ ಮಾಡಬೇಕು ಎಂದು ಮಾಡಿದ್ದಾರೆ. ಆದುದರಿಂದ ಈಗ ಇರತಕ್ಕಂಥ ರ್ಯಾಂಡ್‌ನ್ನು ರೀಡಿಸ್ಟ್ರಿಬ್ಯೂಷನ್ ಮಾಡಿದರೆ ಉತ್ಪಾದನೆ ಕಡಮೆಯಾಗುತ್ತದೆ ಎನ್ನುವ ವಾದ ಸರಿಯಾದುದಲ್ಲ. ಯಾವ ಸದಸ್ಯರು ಈರೀತಿ ಹೇಳುತ್ತಾರೆ ಅಂಥಾವರಿಗೆ ಹೇಳುತ್ತೇನೆ. ಈಪೊತ್ತಿನ ದಿವಸ ಜಪಾನ್ ದೇಶ ತೆಗೆದುಕೊಳ್ಳಿ. ನನಗೆ ತಿಳಿದಮಟ್ಟಿಗೆ ಅಲ್ಲಿ ಭೂಮಾಲೀಕರು ಇಲ್ಲ. ಅಲ್ಲಿ ಭೂಸುಧಾರಣೆ ತೆಗೆದುಕೊಂಡು ಬಂದು ಹೆಚ್ಚು ಭೂಮಿ ಇರುವವರಿಗೆ ಸ್ವಲ್ಪ ಕಡಿಮೆ ಮಾಡಿದ್ದಾರೆ, ಕಡಿಮೆ ಭೂಮಿ ಇರುವರಿಗೆ ಸ್ವಲ್ಪ ಜಾಸ್ತಿ ಮಾಡಿದ್ದಾರೆ. ಈರೀತಿ ಮಾಡಿರುವುದರಿಂದ ಇನ್‌ಪುಟ್ಸ್ ಜಾಸ್ತಿ ಮಾಡಿ ಪ್ರೊಡಕ್ಷನ್ ಜಾಸ್ತಿ ಮಾಡಿದ್ದಾರೆ. ಇದರಿಂದ ಗ್ರೀನ್ ರೆವಲ್ಯೂಷನ್ ಆಗುವುದಕ್ಕೆ ಕಾರಣವಾಗಿದೆ. ಸೆಂಟ್ರಲ್ ರ್ಯಾಂಡ್ ರೀಫಾರಂಸ್ ಕಮೀಷನ್‌ನವರು ಏನು ಒಂದು ವರದಿಯನ್ನು ಕೊಟ್ಟಿದ್ದಾರೋ ಅದರಲ್ಲಿ ಗ್ರೀನ್ ರೆವಲ್ಯೂಷನ್ ಬಗ್ಗೆ ಹೇಳಿದ್ದಾರೆ.

Mr. DEPUTY SPEAKER.—Percentage use of Fertilisers in Japan is highest in the world.

ಶ್ರೀ ಎಂ. ಎಸ್. ಕೃಷ್ಣನ್.—ಈ ತರಹ ಇರಬೇಕಾದರೆ ಈಪೊತ್ತಿನ ದಿವಸ ಈರೀತಿ ಹಂಚಿಕೆ ಮಾಡಿದರೆ ಉತ್ಪಾದನೆ ಕಡಿಮೆಯಾಗುತ್ತದೆ ಎನ್ನುವ ವಾದ ಏನು ಇದೆ ಅದು ಸರಿಯಾದುದಲ್ಲ. ಈಗ ಇರತಕ್ಕಂಥ ಪದ್ಧತಿ ಮುಂದುವರೆಯಕೂಡದು, ಆರೀತಿ ಮುಂದುವರೆಯುವುದಾದರೆ ವೈಜ್ಞಾನಿಕ ದೃಷ್ಟಿಯಿಂದಲೂ ಕೂಡ ತಪ್ಪಾಗುತ್ತದೆ. ಆದುದರಿಂದ ಈ ಭೂಸುಧಾರಣೆ ರೈತರ ಹಿತದೃಷ್ಟಿಯಿಂದಲೂ ಮತ್ತು ಸಾಮಾಜಿಕ ಹಿತದೃಷ್ಟಿಯಿಂದಲೂ ತೆಗೆದುಕೊಂಡು ಬರುವುದು ಅತ್ಯಾವಶ್ಯಕವಾಗಿದೆ. ಇದನ್ನು ಯಾರೂ ಅಲ್ಲಗಳೆಯಬೇಕಾಗಿಲ್ಲ. ಇದನ್ನು ತಂದಿರುವುದು ಒಳ್ಳೆಯದು ಎಂದು ಹೇಳುತ್ತೇನೆ.

ಎರಡನೇ ಅಂಶವೇನೆಂದರೆ ಈ ಹೊತ್ತು ತಲತಲಾಂತರಗಳಿಂದ, ಅನೇಕ ವರ್ಷಗಳಿಂದ ಬಂದಿರುವ ಭೂ ಮಾಲೀಕ ಮತ್ತು ಗೇಣಿದಾರನ ಸಂಬಂಧವೇನಿದೆ, ಆ ಸಂಬಂಧವಾಗಿ ಶೋಷಣೆ ಅತಿ ಅಮಾನುಷವಾಗಿ ನಡೆಯುತ್ತಿತ್ತು ಎನ್ನುವುದು ಎಲ್ಲರೂ ಒಪ್ಪತಕ್ಕ ವಿಚಾರ. ಅನೇಕ ವರ್ಷಗಳಿಂದ ಜೀತ ಮಾಡಿಕೊಂಡಿದ್ದರೂ ಅವನಿಗೆ ಭೂಮಿಯ ಮೇಲೆ ಯಾವ ಹಕ್ಕೂ ಇರುವುದಿಲ್ಲ, ಆ ಹಕ್ಕು ಎಲ್ಲ ಭೂ ಮಾಲೀಕನಿಗೇ ಎಂದು ಇದೆ. ಈ ಹಕ್ಕನ್ನು ತೊಡೆದು ಹಾಕಬೇಕು, ನೇರವಾಗಿ ಸರ್ಕಾರ ಮತ್ತು ಗೇಣಿದಾರನಿಗೆ ಸಂಬಂಧವಿರಬೇಕು, ಇವರಿಬ್ಬರ ಮಧ್ಯೆ ಇರುವವರು ಹೋಗಬೇಕು ಎಂದು ನಾವು ಪದೇ ಪದೇ ಹೇಳಿದೆವು. ಆ ರೀತಿ ಮಾಡಿದರೆ ಮಾತ್ರ ಪ್ರಗತಿ ಮಾರ್ಗದಲ್ಲಿ ನಡೆದಂತಾಗುತ್ತದೆ, ಆ ಮಾಜವಾದವನ್ನು ಜಾರಿಗೆ ತರುವುದಕ್ಕೆ ಅವಶ್ಯಕವಾದ ಕ್ರಮವಾಗುತ್ತದೆ ಎಂದು ಹೇಳುತ್ತಿದ್ದೆವು. ಈ ಸಂದರ್ಭದಲ್ಲಿ ನಾನು ಸ್ವಲ್ಪ ಉದ್ವೇಗದಿಂದ ಮಾತನಾಡಿದರೆ ತಪ್ಪಾಗಲಾರದು. ಭೂ ಮಾಲೀಕ ಮತ್ತು ಗೇಣಿದಾರನ ಸಂಬಂಧವೇನಿದೆ ಅದನ್ನು ಪೂರ್ತಿ ಕಡಿದು ಹಾಕುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿರುವುದಕ್ಕಾಗಿ ತಾವು ಅಭಿನಂದನಾರ್ಹರು ಎಂದು ಹೇಳಬೇಕಾಗಿದೆ.

1961ನೇ ಇಸವಿಯಲ್ಲಿ ಭೂ ಸುಧಾರಣಾ ಕಾನೂನು ಆಯಿತು. ಅದರ ಪ್ರೀಯಾಂಬಲ್‌ನಲ್ಲಿ ಕನ್‌ಫರ್ಮೆಂಟ್ ಆಫ್ ಓನರ್‌ಷಿಪ್ ಆನ್ ಟೆನೆಂಟ್ಸ್ ಎಂದು ಹೇಳಿದ್ದಾರೆ. ಅದು ಇದುವರೆಗೂ ನಡೆಯಲಿಲ್ಲ. ಈ ಹೊತ್ತು ಸ್ವಲ್ಪ ಮಟ್ಟಿಗೆ ನಡೆದಿದೆ. ಅದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಿಂದೆ ಯಾವ ರೀತಿ ನಡೆಯಲಿಲ್ಲವೆಂದರೆ ಓನರ್‌ಷಿಪ್ ಕೊಡುವುದಕ್ಕೆ ಯಾವ ದಿನವನ್ನೂ ಗೊತ್ತು ಮಾಡಲಿಲ್ಲ. ಯಾವ ರೀತಿ ಈ ಹೊತ್ತು ಆ ಸಂಬಂಧವನ್ನು ಕಡಿದು ಹಾಕಬೇಕೆಂಬುದರ ಬಗ್ಗೆ ಯಾವ ರೀತಿ ಸ್ಪಷ್ಟವಾಗಿ ಹೇಳಿದ್ದಾರೆ ಆ ರೀತಿಯಾಗಿ ಹಕ್ಕನ್ನು ಯಾವ ದಿನದಿಂದ ಸ್ಥಿರಪಡಿಸಬೇಕು ಎಂದು ಹಿಂದೆ ಇದ್ದ ಶಾಸನದಲ್ಲಿ ಇರಲಿಲ್ಲ ಎನ್ನುವುದು ಬಹಳ ಸ್ಪಷ್ಟ. ಈಗ ತಂದಿರುವ ತಿದ್ದುಪಡಿ ಶಾಸನದಲ್ಲಿ ಯಾವ ರೀತಿ ಗೇಣಿದಾರನಿಗೆ ಅನುಕೂಲವಾಗುವಂತೆ ಮಾಡಿದ್ದಾರೆನ್ನುವುದಕ್ಕೆ ಒಂದೆರಡು ಅಂಶಗಳನ್ನು ಹೇಳಬೇಕಾಗಿ ಬರುತ್ತದೆ. ಕನ್‌ಫರ್‌ಮೆಂಟ್ ಆಫ್ ಓನರ್‌ಷಿಪ್ ಅನ್ ಟೆನೆಂಟ್ಸ್ ಎನ್ನುವ ಅಧ್ಯಾಯದಲ್ಲಿ ಸೆಕ್ಷನ್ 44ರ ಪ್ರಕಾರ ಮೊದಲು ಅಪ್ಲಿಕೇಷನ್ ಹಾಕಿಕೊಳ್ಳಬೇಕು, ಭೂಮಿಯನ್ನು ರಿಸ್ಯೂಮ್ ಮಾಡಿಕೊಳ್ಳು

ವುದಕ್ಕೆ ಹಾಕಿರುವ ಸಾವಿರಾರು ಅರ್ಜಿಗಳು ಕೋರ್ಟಿನಲ್ಲಿ ಇರುವುದೆಲ್ಲ ತೀರ್ಮಾನವಾಗಬೇಕು, ತೀರ್ಮಾನ ಮಾಡಿಯಾದ ಮೇಲೆ ಸರ್ಕಾರದವರು ಒಂದು ದಿನವನ್ನು ಗೊತ್ತು ಮಾಡಬೇಕಾಗಿತ್ತು. ಯಾವಾಗಿನಿಂದ ಗೌಣಿದಾರನಿಗೆ ಹಕ್ಕು ಬರುತ್ತದೆ, ರೆಸ್ಯೂಮಬಲ್ ಲ್ಯಾಂಡ್ ಯಾವುದು, ನಾನ್ ರೆಸ್ಯೂಮಬಲ್ ಲ್ಯಾಂಡ್ ಯಾವುದು ಎನ್ನುವುದನ್ನು ಆಗ ಮಾಡುತ್ತಿದ್ದರು. ಇದರಿಂದ ಏನಾಯಿತು ಎಂದರೆ ಸಾವಿರಾರು ಭೂಮಾಲೀಕರು ಕೋರ್ಟಿಗೆ ಹೋಗಿದ್ದಾರೆ. ಅದರ ಜೊತೆಗೆ ರೈತರ ಅರ್ಜಿಗಳೂ ಕೋರ್ಟಿನಲ್ಲಿ ಇವೆ. ಇವೆಲ್ಲ ಕೋರ್ಟಿನಲ್ಲಿ ಕೊಳೆಯುತ್ತ ಬಿದ್ದಿವೆ, ತೀರ್ಮಾನವಾಗುವ ಪರಿಸ್ಥಿತಿ ಇರಲಿಲ್ಲ. ಅವು ತೀರ್ಮಾನವಾಗುವವರೆಗೆ ಸರ್ಕಾರ ಕಾನೂನು ಅನ್ವಯ ಮಾಡುವ ಸ್ಥಿತಿ ಇರಲಿಲ್ಲ. ಇದು ಹಳೆಯದು. ಈ ಮಧ್ಯೆ ತಂದಂಥ ತಿದ್ದುಪಡಿ ಬಿಲ್‌ಗೂ ಅಷ್ಟು ಸಮರ್ಪಕವಾಗಿ ಇರಲಿಲ್ಲ. ಏರಿಯಾ ನೋಟಿಫೈ ಮಾಡಬೇಕು ಎಂದು ಇತ್ತು. ನೋಟಿಫೈ ಮಾಡಿದರೆ ನಾನ್ ರೆಸ್ಯೂಮಬಲ್ ಲ್ಯಾಂಡ್ ಮತ್ತು ರೆಸ್ಯೂಮಬಲ್ ಲ್ಯಾಂಡ್ ಎಷ್ಟು ಎಂದು ತೀರ್ಮಾನ ಮಾಡಬಹುದು ಎಂದು ಇತ್ತು. ಈಗ ಇಂಟಿ ಪಾಶೀಲಕ ಸಮಿತಿಯಿಂದ ಬಂದಿರುವ ತಿದ್ದುಪಡಿಗಳೆಲ್ಲ ಅದಕ್ಕಿಂತ ಒಂದು ದೊಡ್ಡ ಹೆಜ್ಜೆ ಮುಂದೆ ಹೋಗಿದ್ದಾರೆ. ಆ ದೊಡ್ಡ ಹೆಜ್ಜೆ ಈ ಹೊತ್ತಿನ ದಿವಸ ಯಾವುದು ಎಂದರೆ ಇಂಥ ದಿನದಿಂದ ಹಕ್ಕು ಗೇಣಿದಾರರಿಗೆ ಬರುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. 44 ಮತ್ತು 45ನೇ ಸೆಕ್ಷನ್‌ಗಳಿಗೆ ತಿದ್ದುಪಡಿಯನ್ನು ತಂದು ಡೇಟ್ ಬಹಳ ಸ್ಪಷ್ಟವಾಗಿ ತೀರ್ಮಾನ ಮಾಡಿದ್ದಾರೆ. ಈಗ ತಂದಿರುವ ತಿದ್ದುಪಡಿ ಮಸೂದೆಯ 31ನೇ ಕ್ಲಾಜ್‌ನಲ್ಲಿ ಸೆಕ್ಷನ್ 44(1) ರಲ್ಲಿ ಡೇಟ್ ಫಿಕ್ಸ್ ಮಾಡುವುದರೊಳಗೆ ಸ್ಪಷ್ಟತೆ ಇವೆ. ಆ ದಿನದ ನಂತರ ಸರ್ಕಾರಕ್ಕೂ ಗೇಣಿದಾರನಿಗೂ ಸಂಬಂಧವಿರುತ್ತದೆ ಎನ್ನುವ ಅಭಿಪ್ರಾಯ ಬರುತ್ತದೆ. ಇದು ಒಳ್ಳೆಯ ಅಂಶ ಎಂದು ನನಗೆ ತಿಳಿದು ಬರುತ್ತದೆ. ಕೋರ್ಟಿನಲ್ಲಿ ಈಗ ಎಷ್ಟೋ ಕೇಸುಗಳಿವೆ., ಆ ಕೇಸುಗಳೆಲ್ಲ ಹೋಗುವುದರಿಂದ ಅನ್ಯಾಯವಾಗುತ್ತದೆ ಎನ್ನುವ ವಾದವನ್ನು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಕೋರ್ಟಿನಲ್ಲಿರುವ ಕೇಸುಗಳು ಹೋಗಬೇಕು ಎನ್ನುವುದಕ್ಕೆ ಇದನ್ನು ಮಾಡಬೇಕಾಯಿತು. ಇಲ್ಲದೆ ಹೋದರೆ ಸಾಮಾಜಿಕ ನ್ಯಾಯ ಗೇಣಿದಾರನಿಗೆ ದೊರೆಯುವುದಿಲ್ಲ. ಕೋರ್ಟಿನಲ್ಲಿರುವ ಕೇಸುಗಳು ನಡೆದುಕೊಂಡು ಹೋಗಿ ಏನೂ ನ್ಯಾಯ ದೊರೆಯದ ಹಾಗೆ ಕಾನೂನು ಮಾಡಿದ್ದುದನ್ನು ತಿದ್ದುಪಡಿ ಮಾಡಿದರೆ ಮಾತ್ರ ಯಾವುದೇ ರೈತನ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವೆಂದು ಈ ರೀತಿ ಮಾಡಿದ್ದಾರೆ. ಆದುದರಿಂದ ಕೋರ್ಟಿನಲ್ಲಿರುವ ಕೇಸುಗಳ ಹೋಗಬೇಕು ಎನ್ನುವ ಸರಿಯಾದ ಉದ್ದೇಶದಿಂದ ಅದನ್ನು ಕಾರ್ಯಗತ ಮಾಡಿರುವುದು ಸಮಂಜಸವಾಗಿದೆ. ಎಲ್ಲೋ ಕೆಲವರು ಭೂಮಾಲೀಕರಿಗೆ ಸ್ವಲ್ಪ ಮಟ್ಟಿಗೆ ಅನ್ಯಾಯವಾಗುತ್ತದೆ ಎಂದು ಹೇಳಿಕೊಳ್ಳಬಹುದು. ನಿಜವಾಗಿ ಅನ್ಯಾಯವಾಗಲಾರದು. ನನಗೆ ತಿಳಿದಮಟ್ಟಿಗೆ ಅನ್ಯಾಯವಾಗುವುದಿಲ್ಲ. ಮುಖ್ಯವಾಗಿ ಗೇಣಿದಾರನಿಗೆ ಅನುಕೂಲವಾಗುತ್ತದೆ ಎನ್ನುವುದು ಒಳ್ಳೆಯದು. ಅಂಥವರು ಲಕ್ಷಾಂತರ ಜನರಿದ್ದಾರೆ. ಅವರಿಗೆ ಅನುಕೂಲವಾಗುವಂತೆ ಮಾಡಿರುವುದು ನ್ಯಾಯವಾದುದು ಅದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ.

ಯಾವ ಕ್ಲಾಜ್, ವಿಧಿ ನಿಯಮಗಳನ್ನು ತಿದ್ದುಪಡಿ ಮಾಡುವುದಕ್ಕೆ ಹಿಂದಿನ ಬಿಲ್‌ನಲ್ಲಿ ಹೇಳಲಿಲ್ಲವೋ ಅವನ್ನು ಈಗ ತಿದ್ದುಪಡಿ ಮಾಡಿದ್ದಾರೆ, ಅದು ಸಾಧುವಲ್ಲ ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತ ಪಡಿಸಿದರು. ಇದಾದಮೇಲೆ ಅದನ್ನು ಮಾಡಲೇ ಬೇಕು. ಸೆಕ್ಷನ್ 44 ಬದಲಾಯಿಸಿದ ಮೇಲೆ ಸೆಕ್ಷನ್ 14 ಹೋಗಲೇ ಬೇಕಾಗುತ್ತದೆ. ಸೆಕ್ಷನ್ 44 ಬದಲಾವಣೆಯಾಗಿ, ಸೆಕ್ಷನ್ 14 ಹೋಗದೆ ಇದ್ದರೆ, ಎರಡನ್ನೂ ಒಟ್ಟಿಗೆ ಇಟ್ಟು ಪಟ್ಟಭದ್ರ ಹಿತಗಳ ವಾದವನ್ನು ಇನ್ನೂ ಜೋರಾಗಿ ಪುಷ್ಟೀಕರಿಸಿದ ಹಾಗೆ ಆಗುತ್ತದೆ. ಸೆಕ್ಷನ್ 44 ತಿದ್ದುಪಡಿ ಮಾಡಿ, 14ನೇ ಸೆಕ್ಷನ್ ಕೈ ಬಿಡದೆ ಹೋದರೆ ಕೋರ್ಟು ಕಚೇರಿಗಳಿಗೆ ಹೋಗಿ ಗೇಣಿದಾರನಿಗೆ ಅನ್ಯಾಯವಾಗುತ್ತದೆ, ನ್ಯಾಯ ದೊರೆಯುವುದಿಲ್ಲ. ಈಗ ತಂದಿರುವುದು ಸಮಂಜಸವಾದುದು. ಸೆಕ್ಷನ್ 44 ತಿದ್ದುಪಡಿ ಮಾಡಿ ಸೆಕ್ಷನ್ 14 ಬಿಟ್ಟಿರುವುದು ಬಹಳ ಒಳ್ಳೆಯದು ಎಂದು ನಮ್ಮ ಅಭಿಪ್ರಾಯ ವಿರುವುದರಿಂದ ಬಹಳ ದೊಡ್ಡ ಹೆಜ್ಜೆ ಇಟ್ಟಂತಾಗಿದೆ.

ಸರ್ಕಾರಕ್ಕೆ ಮತ್ತು ಗೇಣಿದಾರನಿಗೆ ಸಂಬಂಧವೇನೋ ಬಂತು. ಯಾವರೀತಿ ಒನರ್‌ಷಿಪ್ ಕನಫರ್ಮ್ ಮಾಡುವುದು ಎನ್ನುವುದು ಎರಡನೆಯದು. ಇದರೊಳಗೆ ಮೂಲಭೂತವಾದ ತಿದ್ದುಪಡಿಯೇನೂ ಮಾಡಿಲ್ಲ, ಬದಲಾವಣೆ ಮಾಡಿಲ್ಲ. ಒರಿಜಿನಲ್ ಆಕ್ಟ್ ಎಸಿದೆ ಆದರಲ್ಲಿರುವುದನ್ನೇ ಈ ಹೊತ್ತೂ ಇಟ್ಟುಕೊಂಡಿದ್ದಾರೆ, ಅದರಲ್ಲಿ ಬದಲಾವಣೆ ಮಾಡಿಲ್ಲ. ಬದಲಾವಣೆ ಆಗಬೇಕಾದಂಥ ಪ್ರಮೇಯವಿತ್ತೋ ಇಲ್ಲವೋ, ಆದರೂ ಕೆಲವು ಸಂಶಯಗಳು ಬರುತ್ತವೆ. ಪ್ರೀಮಿಯಂ ಎಲ್ಲ ಕೊಟ್ಟ ಮೇಲೆ ಗೇಣಿದಾರ ಆ ಜಮೀನಿನ ಹಕ್ಕನ್ನು ಪಡೆಯುತ್ತಾನೆ. ಎಂದರೆ ಅದು ಸುಮಾರು ವರ್ಷಗಳಾಗುತ್ತದೆ. ಆ ಹಣವನ್ನು 20 ವರ್ಷದ ಕಂತುಗಳಲ್ಲಿ ಕೊಡುವುದಕ್ಕೆ

(ಶ್ರೀ ಎಂ. ಎಸ್. ಕೃಷ್ಣನ್)

ಅವಕಾಶವಿದೆ. ಅಂದರೆ 20 ವರ್ಷಗಳ ತನಕ ಕಂತು ಕೊಡುತ್ತ ಹೋದರೆ ಆ ಮೇಲೆ ಅವನು ಆಕ್ಯುಪೆಂಟ್ ಆಗುತ್ತಾನೆ. ಕಂತುಗಳನ್ನು ಪೂರ್ತಿಯಾಗಿ ಕಟ್ಟದೆ ಇದ್ದರೆ ಓನರ್‌ಷಿಪ್ ಕೊಡುವುದಿಲ್ಲ. 20 ವರ್ಷಗಳಿಗೆ ಮುಂಚೆಯೇ ಪ್ರೀಮಿಯಂ ಹಣವನ್ನು ಕೊಡುವುದಾದರೆ ಓನರ್‌ಷಿಪ್ ಕೊಡಬಹುದು. ಅದು ಬೇರೆ ವಿಷಯ. ಆದರೆ ಆ ರೀತಿ ಹಣವನ್ನು ಕೊಡುವ ಶಕ್ತಿ ರೈತನಿಗೆ ಇಲ್ಲ. ನನಗೆ ತಿಳಿದಮಟ್ಟಿಗೆ ಈ ಹೊತ್ತಿನ ಕಾನೂನು ಪರಿಸ್ಥಿತಿಯೊಳಗೆ ಅವನಿಗೆ ಪಟ್ಟ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅದನ್ನು ಬದಲಾವಣೆ ಮಾಡಿ ಎರಡು ಮೂರು ಕಂತುಗಳನ್ನಾದರೂ ಕೊಟ್ಟಮೇಲೆ ಎಂದು ಇಷ್ಟು ಕಂತುಗಳನ್ನು ಎನ್ನುವುದನ್ನು ಫಿಕ್ಸ್ ಮಾಡಿ ಓನರ್‌ಷಿಪ್ ಕೊಡುವುದು ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಿದ್ದರೆ ಚೆನ್ನಾಗಿತ್ತು. ಇಪ್ಪತ್ತು ವರ್ಷವಾದರೂ ಕೂಡ ಆರು ವರ್ಷಗಳ ಕಾಲ ಅವರು ಮಾರಾಟ ಮಾಡುವ ಹಾಗಿಲ್ಲ ಎಂದಿದೆ. ಇದರಲ್ಲಿ ಭೂಮಾಲೀಕರು ಯಾರು, ಚೆನೆಂಟು ಯಾರು ಎನ್ನುವುದನ್ನು ಕಂಡು ಹಿಡಿಯುವುದಕ್ಕಾಗುವುದಿಲ್ಲ. ಈಗೇನೋ ಇವರು ಸರಕಾರದ ಗೇಣಿದಾರರಾಗುತ್ತಾರೆ. ಇವರ ಬಗ್ಗೆ ಇಲ್ಲಿ ಹೇಳಿರುವಂತೆ ಕನ್‌ಫರ್‌ಮೆಂಟ್ ಆಫ್ ಜ್ಯೂಟಲ್ ಯಾವ ರೀತಿ ಮಾಡಬೇಕು ಎನ್ನುವುದು ಮುಖ್ಯ. ಬೇರೆ ರಾಜ್ಯಗಳಲ್ಲಿ ಎಂದರೆ ಕೇರಳದಲ್ಲಿ ಒಂದು ರೀತಿಯಾಗಿದೆ. ಇದನ್ನು ತಿಳಿದು ಕೊಂಡು ಇದರ ಬಗ್ಗೆ ಯೋಚನೆ ಮಾಡುವುದು ಒಳ್ಳೆಯದು.

ಇನ್ನು ಮೂರನೆಯ ಮುಖ್ಯ ಅಂಶ ಎಂದರೆ ಇದರಲ್ಲಿ ಯಾವುದಾದರೂ ತಂಟೆ ತಕರಾರುಗಳು ಬಂದರೆ ಇದನ್ನು ಯಾವ ರೀತಿಯಾಗಿ ಬಗೆಹರಿಸಬೇಕು ಎನ್ನುವುದು ಇದರಲ್ಲಿರುವ ಪ್ರಶ್ನೆ. ಇದಕ್ಕಾಗಿ ಒಂದು ಹೊಸ ಕ್ಲಾಸನ್ನು ಎಂದರೆ ಕ್ಲಾಸನ್ನು 48 ರಲ್ಲಿ ಕಾನ್ಸ್‌ಟಿಟ್ಯೂಷನ್ ಆಫ್ ಟ್ರಿಬ್ಯುನಲ್ಸ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ತಮಗೆ ಗೊತ್ತಿರುವ ಹಾಗೆ ಹಿಂದೆ ಕೂಡ ಇಲ್ಲಿ ಟೀಕೆಗಳು ಬಂದಿದ್ದವು ಮತ್ತು ಹೊರಗಡೆ ಕೂಡ ಇದರ ಬಗ್ಗೆ ಟೀಕೆಗಳು ಬರುತ್ತಿದ್ದವು. ಇದರೊಳಗೆ ತಾವೀಗ ಜನರ ಪ್ರತಿನಿಧಿಗಳೂ ಇರಬೇಕೆಂದು ಹೇಳಿ ಮಾಡಿರುವುದು ಒಂದು ಸರಿಯಾದ ಹೆಜ್ಜೆಯಾಗಿದೆ. ಇದರಲ್ಲಿ ನಾವು ಆ ಪಕ್ಷ ಈ ಪಕ್ಷ ಎಂದು ಹೇಳುತ್ತಿಲ್ಲ. ಪುರೋಗಾಮಿ ಪಕ್ಷಗಳೂ ಹೇಳುತ್ತಿದ್ದವು ಮತ್ತು ನಮ್ಮ ಕಮ್ಯೂನಿಸ್ಟ್ ಪಕ್ಷವು ಇದರ ಬಗ್ಗೆ ಹೇಳುತ್ತಲೇ ಬರುತ್ತಿತ್ತು. ಅಂತೂ ನಾವು ಹೇಳಿದ ಅಭಿಪ್ರಾಯಗಳಿಗೆ ಈಗ ಮನ್ನಣೆ ದೊರೆತಿದೆ ಎನ್ನುವುದು ನನ್ನ ಅಭಿಪ್ರಾಯ. ಹಿಂದೆ ತಹಶೀಲ್ದಾರ್‌ಗಳಿಗೇ ಇಂತಹ ಅಧಿಕಾರವನ್ನು ಕೊಡುತ್ತಿದ್ದರಿ. ಈಗ ಜನತಾ ಪ್ರತಿನಿಧಿಗಳನ್ನೂ ಇದರಲ್ಲಿ ಸೇರಿಸಿರುವುದರಿಂದ ಇದರಲ್ಲಿ ನ್ಯಾಯವಾಗಿ ಬೇಗನೆ ತೀರ್ಮಾನ ಪಡೆಯಲು ಅವಕಾಶ ಸಿಗುತ್ತದೆ. ಇದುವರೆಗೆ ಮುನ್‌ಸೀಫ್ ಕೋರ್ಟುಗಳಲ್ಲಿ ಯಾವ ರೀತಿ ಕೇಸುಗಳು ಬಂದು ಎಷ್ಟು ನಿಧಾನವಾಗುತ್ತಿತ್ತು ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಇದುವರೆಗೂ ಏನಿತ್ತು ಎಂದರೆ ಗೇಣೀದಾರ ಅಪ್ಲಿಕೇಷನ್ ಮೊದಲು ಕೊಡಬೇಕು ಮತ್ತು ಇವನು ಗೇಣಿದಾರನೇ ಅಲ್ಲವೇ ಎನ್ನುವುದನ್ನು ಕಂಡುಹಿಡಿಯಬೇಕು ಮತ್ತು ಇದರಲ್ಲಿ ಎಕ್ಸ್‌ಪೆಂಟ್ ಆಫ್ ಲ್ಯಾಂಡು ಎಷ್ಟಿದೆ ಇದನ್ನು ಕಂಡುಹಿಡಿಯಬೇಕು ಮತ್ತು ಇದರ ಬಗ್ಗೆ ಚೆನೆನ್ಸಿಯನ್ನು ಯಾವ ರೀತಿಯಾಗಿ ತೀರ್ಮಾನ ಮಾಡಬೇಕು, ಇವು ಮೂರು ಮುಖ್ಯ ವಿಷಯಗಳು ಇಲ್ಲರುವುದು. ಹಿಂದೆ ಇವನ್ನು ತೀರ್ಮಾನ ಮಾಡಲು ಅಧಿಕಾರಿಗಳಿಗೇ ಎಲ್ಲ ಅಧಿಕಾರ ಇತ್ತು. ಇವರಿಂದ ಸರಿಯಾಗಿ ನ್ಯಾಯ ದೊರೆಯುತ್ತಿಲ್ಲ ಎಂದು ದೂರುಗಳೂ ಬರುತ್ತಿತ್ತು. ಇದನ್ನೆಲ್ಲಾ ತಪ್ಪಿಸಲೋಸುಗ ಈಗ ತಂದಿರುವ ತಿದ್ದುಪಡಿಯಲ್ಲಿ ಇದಕ್ಕಾಗಿಯೇ ಬೇರೆ ಟ್ರಿಬ್ಯುನಲ್‌ಗಳನ್ನು ನೇಮಕ ಮಾಡಬೇಕೆಂದು ತಂದಿರುವುದು ಮತ್ತು ಇದರಲ್ಲಿ ಪ್ರಜಾಪ್ರತಿನಿಧಿಗಳು ಇರಬೇಕೆಂದು ಮಾಡಿರುವುದು ಸರಿಯಾದುದು ಎಂದು ನನಗೆ ಕಾಣುತ್ತದೆ. ಹಿಂದೆ ಇದ್ದಂತೆ ಮುನ್‌ಸೀಫ್ ಕೋರ್ಟುಗಳಿಗೆ ಇದರ ಅಧಿಕಾರ ಇದ್ದಾಗ ಇದರ ತೀರ್ಮಾನ ಬರುವುದೇ ಬಹಳ ನಿಧಾನವಾಗುತ್ತಿತ್ತು ಮತ್ತು ನಮಂಜಸವಾದ ತೀರ್ಮಾನವೂ ಬರುತ್ತಿರಲಿಲ್ಲ. ಈಗ ತಿದ್ದುಪಡಿ ಮಾಡಿ ಇಲ್ಲಿತಂದಿರುವುದು ಬಹಳ ಸಂತೋಷದ ವಿಷಯ. ಇದರಲ್ಲಿ ಎರಡು ಪ್ರಶ್ನೆಗಳು ಬರುತ್ತವೆ. ಇದರಲ್ಲಿ ಅಸಿಸ್ಟೆಂಟು ಕಮಿಷನರವರನ್ನು ನೇಮಕ ಮಾಡಬೇಕೆಂದು ಇದೆ. ಆದರೆ ಈಗ ಅಸಿಸ್ಟೆಂಟು ಕಮಿಷನರುಗಳಿಗೆ ಇರುವ ಕೆಲಸಗಳೇ ಹೆಚ್ಚು. ಅವರೇ ಇದರ ಕೆಲಸಗಳನ್ನೂ ಮಾಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಇದು ಕಷ್ಟ ಇದರಿಂದ ಡಿಲೇ ಆಗಲು ಅವಕಾಶವಾಗುತ್ತದೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಇಂತಹ ಚೆನೆಂಟ್ ಕೇಸುಗಳನ್ನು ತೀರ್ಮಾನ ಮಾಡಲು ಪ್ರತ್ಯೇಕವಾದ ಒಬ್ಬ ಅಸಿಸ್ಟೆಂಟು ಕಮಿಷನರನ್ನೇ ನೇಮಕ ಮಾಡಬೇಕು ಎಂದು ನನ್ನ ಸಲಹೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಪುಟ 50 ರಲ್ಲಿ ಸೆಕ್ಷನ್ 48 (1) ಮತ್ತು (2) ರಲ್ಲಿ ಇದರ ಬಗ್ಗೆ ವಿವರವಾಗಿ ಹೇಳಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಸ್ಪೆಷಲ್ ಆಗಿ ಅಸಿಸ್ಟೆಂಟು ಕಮಿಷನರನ್ನೇ ನೇಮಕ ಮಾಡಬಹುದು ಎಂದು ಇದೆ. ಹಾಗಿಲ್ಲದೇ ಇರುವ ಅಸಿಸ್ಟೆಂಟು ಕಮಿಷನರಿಗೇ ಈ ಕಲಸವನ್ನೂ ವಹಿಸಿದರೆ ಇದನ್ನು ಜಾರಿಗೆ ತರಲು ಸಾಧ್ಯವಾಗುವುದಿಲ್ಲ. ಇದಕ್ಕಾಗಿ ನಾನು ಸ್ಪೆಷಲ್ ಆಗಿ ಒಬ್ಬ ಅಸಿಸ್ಟೆಂಟು ಕಮಿಷನರನ್ನೇ ನೇಮಿಸಬೇಕೆಂದು ನನ್ನ ಒಂದು ಸಲಹೆ. ಇದರಲ್ಲಿ ರೆವಿನ್ಯೂ ಆಫೀಸರುಗಳೂ ಇರಬಹುದು ಎಂದಿದೆ, ಇದರಿಂದ ಕೆಲವು ಕಷ್ಟಗಳು ಬರಬಹುದು, ಕೆಲ ಎ ಎಲ್ ಎ ಗಳು ಭೂಮಾಲೀಕರ ಪ್ರಭಾವಕ್ಕೆ ಒಳಗಾಗಿ ಕೆಲಸ ಮಾಡಬಹುದು ಮತ್ತು ಅವರ ಪ್ರಭಾವವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೂ ಅವಕಾಶವಾಗಬಹುದು, ಆದುದರಿಂದ ಇದನ್ನು ಯಾವ ರೀತಿ ಮಾಡಬಹುದು ಎನ್ನುವುದನ್ನು ಯೋಚನೆ ಮಾಡಬೇಕು, ಇದರಲ್ಲಿ ನಾನು ಹೇಳುವುದು ಒಂದೇ ಪಕ್ಷದವರನ್ನು ಇದರಲ್ಲಿ ಸೇರಿಸುವ ಬದಲು ಸ್ವಲ್ಪ ಇದೇ ತತ್ವಕ್ಕೆ ಬೆಲೆ ಕೊಡುವಂತಹ ಎಸ್. ಎಸ್. ಪಿ. ಪಕ್ಷ, ಕಮ್ಯೂನಿಸ್ಟು ಪಕ್ಷದ ಪ್ರತಿನಿಧಿಗಳನ್ನೂ ಇದರಲ್ಲಿ ಸೇರಿಸಲು ಯತ್ನ ಮಾಡಬೇಕು ಮತ್ತು ಗೇಣಿದಾರರುಗಳಿಗೆ ಅನುಕೂಲವಾಗುವಂತೆ ಮಾಡಬೇಕು. ಆದರೆ ಇದರಲ್ಲಿ ರಾಜಕೀಯ ಬೆಳೆಸುವುದಕ್ಕಾಗಿ ಹೇಳುತ್ತಾರೆ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳಲು ತಯಾರಿಲ್ಲ. ತಮಗೆ ಗೊತ್ತಿರುವ ಹಾಗೆ ಇದರಲ್ಲಿ ಯಾರೂ ರಾಜಕೀಯಕ್ಕಾಗಿ ಮಾತನಾಡುತ್ತಿಲ್ಲ. ಸಾಮಾನ್ಯವಾಗಿ ಬಡವರಾಗಿರುವ ರೈತರುಗಳಿಗೆ ಅನುಕೂಲವಾಗುವಂತೆ ಮಾಡಬೇಕು ಮತ್ತು ಇಂತಹ ಕಾನೂನಿಗೆ ನಾವೆಲ್ಲರೂ ಬೆಂಬಲ ಕೊಡಬೇಕು ಎಂದು ನನ್ನ ಅಭಿಪ್ರಾಯ. ಆದುದರಿಂದ ಟ್ರಿಬ್ಯುನಲ್ಸ್‌ಗಳನ್ನು ನೇಮಕ ಮಾಡುವಾಗ ನಾನು ಸೂಚಿಸಿದ ಕೆಲವು ಅಭಿಪ್ರಾಯಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಇನ್ನೊಂದು ಮುಖ್ಯವಾದ ಅಂಶವೆಂದರೆ ಇಲ್ಲಿ ಸೈನಿಕರ ಮತ್ತು ನಾವಿಕರ ಬಗ್ಗೆ ಹೇಳಲಾಗಿದೆ. ಈ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇವರಿಗೆ ರಿಯಾಯಿತಿ ಕೊಡಬಾರದು ಎಂದು ನನ್ನ ಅಭಿಪ್ರಾಯವಲ್ಲ. ಏಕೆಂದರೆ ಕೃಷಿ ಮಾಡುವ ಕೃಷಿ ಕಾರ್ಮಿಕ ಬಗ್ಗೆ ಎಷ್ಟು ಅಭಿಮಾನ ನಮಗೆ ಇದೆಯೋ ಅಷ್ಟೇ ಅಭಿಮಾನ ಈ ನಾವಿಕರ ಮತ್ತು ಸೈನಿಕರ ಬಗ್ಗೆ ಯೂ ಸಹ ಇದೆ, ಆದ್ದರಿಂದ ಇವರಿಗೆ ಬೇಕಾದ ಅನುಕೂಲ ಮಾಡಿಕೊಡಬೇಕಾಗಿದೆ. ಅದರ ಪ್ರಕಾರ ಇಲ್ಲಿ ಕೆಲವು ರಿಯಾಯಿತಿಗಳನ್ನು ಕೊಡಲಾಗಿದೆ. 3 ತಿಂಗಳ ಮುಂಚೆ ಲೀವ್‌ಗೆ ಕೊಟ್ಟಿದ್ದರೆ ಅವರಿಗೆ ಹಕ್ಕು ಇರುತ್ತದೆ ಮತ್ತು ಅವರು ಸೈನ್ಯದಿಂದ ವಾಪಸ್ ಬಂದ ಒಂದು ವರ್ಷದೊಳಗೆ ವಾಪಸ್ ಜಮೀನನ್ನು ಪಡೆದುಕೊಳ್ಳುವುದಕ್ಕೆ ಅವಕಾಶವಿದೆ ಎಂದು ಇಲ್ಲಿ ಹೇಳಲಾಗಿದೆ. ಮತ್ತು ಪೂರ್ತಾ ಜಮೀನನ್ನು ವಾಪಸ್ ಪಡೆಯುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇದಕ್ಕೆ ಮೊದಲು ಈ ಅವಕಾಶವಿರಲಿಲ್ಲ. ಈಗ ಆ ಅನುಕೂಲ ಮಾಡಿಕೊಟ್ಟಿರುವುದು ಸ್ವಾಗತಾರ್ಹವಾದ ವಿಷಯ ಎಂದು ಹೇಳುತ್ತೇನೆ.

5-00 P.M.

ಇನ್ನೊಂದು ವಿಷಯ ಎಂದರೆ, ಸೆಕ್ಷನ್ 36, ಇದರ ಒರಿಜಿನರ್ ಆಕ್ಟ್ ಟೀಕಾಸ್ಪದವಾದ ವಿಚಾರವಾಗಿದೆ ಎಂದು ನನ್ನ ಅಭಿಪ್ರಾಯ. ಗೇಣಿ ಮಾಡುವ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದರೆ ಅಥವಾ ವಾಸವಾಗಿದ್ದರೆ ಅಂತಹ ಗೇಣಿದಾರರ ಪರಿಸ್ಥಿತಿ ಏನು ಎಂಬುದನ್ನು ನೋಡಬೇಕಾಗಿದೆ. Regarding dwelling houses of agricultural labourers, etc. Section 38 says that the provisions of Sections 35, 36 and 37 shall apply. "If the tenant is in possession of the house and if he has been living there, he must have the right to occupy it and it must belong to him" ಎಂದು ಹೇಳಿದ್ದಾರೆ. ಆದರೆ ಇಲ್ಲಿ ಒಂದು ವೇಳೆ ಕೃಷಿ ಕಾರ್ಮಿಕ ಆ ಮನೆಯಲ್ಲಿ ವಾಸವಾಗಿದ್ದರೆ ಆತ ಅದನ್ನು ಪ್ರೂವ್ ಮಾಡುವುದು ಕಷ್ಟವಿದೆ. ಆದ್ದರಿಂದ ಈ ವಿಚಾರದಲ್ಲಿಯೂ ಸಹ ಗೇಣಿದಾರರಿಗೆ ಅನ್ಯಾಯವಾಗದಂತೆ ತಿದ್ದುಪಡಿ ತಂದಿದ್ದರೆ ಚೆನ್ನಾಗಿರುತಿತ್ತು. ಈಗ ಇಲ್ಲಿ ಹೇಳಿರುವುದರಲ್ಲಿ ದೋಷವಿದೆ. ಈ ದೋಷವನ್ನು ಸರಿ ಮಾಡಬೇಕೆಂದು, ಸಾಧ್ಯವಾದರೆ ತಿದ್ದುಪಡಿ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೆಕ್ಷನ್ 63ರಲ್ಲಿ ಸೀಲಿಂಗ್ ಬಗ್ಗೆ ಹೇಳಲಾಗಿದೆ. ಇದರಲ್ಲಿ ಸ್ವಾಗತ ಮಾಡಬೇಕೆಂದಿರುವ ವಿಷಯ ಎಂದರೆ, ಮೊದಲಿನಿಂದಲೂ ನೀವು ಹೇಳಿಕೊಂಡು ಬಂದಿರುವ ಹಾಗು ಎಕರೆಯನ್ನು ಜಾಸ್ತಿ ಮಾಡದೆ ಉಳಿಸಿಕೊಂಡು ಬಂದಿರುವುದು. ಈ ಸೀಲಿಂಗನ್ನು ಗೊತ್ತುಮಾಡುವುದರಲ್ಲಿಯೂ ಸಹ

(ಶ್ರೀ ಎಂ. ಎಸ್. ಕೃಷ್ಣನ್)

ಬೇಕಾದಷ್ಟು ನ್ಯೂನತೆಗಳಿವೆ. ಪ್ಲಾನ್‌ಜೇಷನ್ ಬಗ್ಗೆ ರಿಯಾಯಿತಿ ಕೊಟ್ಟಿದ್ದೀರಿ. ಈ ರೀತಿ ಕೊಟ್ಟಿದ್ದು ಸರಿಯಲ್ಲ. ಸಮಾಜವಾದದ ಬಗ್ಗೆ ಮಾತನಾಡುವ ನೀವು ಈ ವಿಷಯದಲ್ಲಿ ರಿಯಾಯಿತಿ ಕೊಟ್ಟಿದ್ದು ಸರಿಯೇ ಎಂದು ಕೇಳುತ್ತೇನೆ. ಪ್ಲೈಬ್ಯಾನಿಕವಾಗಿ ಯೋಚನೆ ಮಾಡಿದರೆ ಇದು ಸರಿಯಾದುದಲ್ಲ. ಆದೇ ಪ್ರಾಪರ್ಟಿಯಂಡಾ ವಿಷಯಕ್ಕೆ ಹೇಳಿದ್ದರೆ ಸರಿ ಎಂದು ಹೇಳಬಹುದು. ಪ್ಲಾನ್‌ಜೇಷನ್‌ನಲ್ಲಿ ಏನಾದರು ವ್ಯವಸಾಯ ಜಮೀನು ಇದ್ದರೆ ಅದಕ್ಕೆ ಸೀಲಿಂಗ್ ಅನ್ವಯವಾಗುತ್ತದೆಂದು ಹೇಳಿದ್ದೀರಿ ; ಅದು ಸ್ವಾಗತಾರ್ಹ ಆದರೆ ಪ್ಲಾನ್‌ಜೇಷನ್‌ಗೆ ರಿಯಾಯಿತಿ ಕೊಟ್ಟಿದ್ದು ಸರಿಯಲ್ಲ. ಪ್ಲಾನ್‌ಜೇಷನ್ ಬೆಳೆಸಬೇಕಾದರೆ ನುಮ್ಮಾರು ಎಕರೆ ಜಮೀನು ಇರಬೇಕು, ಇಲ್ಲದಿದ್ದರೆ ಅನಾನುಕೂಲವಾಗುತ್ತದೆ ಮತ್ತು ಕೈಗಾರಿಕಾ ಕ್ಷೇತ್ರವನ್ನು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ ಅದು ಕುಂಠಿತವಾಗುತ್ತದೆ ಎಂದು ಹೇಳುವುದಾದರೆ ಎಲ್ಲ ಪ್ಲಾನ್‌ಜೇಷನ್‌ಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇಂದು ಅನೇಕ ರಾಜ್ಯಗಳಲ್ಲಿ ಈ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಆದೇ ರೀತಿ ತಾವೂ ಸಹ ಎಲ್ಲ ಪ್ಲಾನ್‌ಜೇಷನ್‌ಗಳನ್ನು ತೆಗೆದುಕೊಂಡು ನಡೆಸಿದರೆ ತೊಂದರೆಯಿರುವುದಿಲ್ಲ ; ಆದಕಾರಣ ಆದಷ್ಟು ಬೇಗ ಸರ್ಕಾರದವರು ಈ ಬಗ್ಗೆ ತೀರ್ಮಾನ ತೆಗೆದುಕೊಂಡರೆ ಪ್ಲಾನ್‌ಜೇಷನ್‌ಗಳಲ್ಲಿರುವ ವ್ಯವಸಾಯದ ಜಮೀನನ್ನು ಕೃಷಿ ಕಾರ್ಮಿಕರಿಗೆ ಕೊಡುವುದಕ್ಕೂ ಸಹ ಅನುಕೂಲವಾಗುತ್ತದೆ ಮತ್ತು ಇದರಿಂದ ದೇಶಕ್ಕೂ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯ.

ಇನ್ನು ಸೀಲಿಂಗ್ ವಿಚಾರದಲ್ಲಿ 'ಫ್ಯಾಮಿಲಿ' ಎನ್ನುವುದಕ್ಕೆ ಏನು ಡೆಫಿನಿಷನ್ ಕೊಟ್ಟಿದ್ದಾರೆ ಅದು ತೀರ ಅನಮರ್ಪಕವಾದುದಾಗಿದೆ ಮತ್ತು ಪ್ರಗತಿಗೆ ವಿರೋಧವಾದುದಾಗಿದೆ ಎಂದು ನನ್ನ ಅಭಿಪ್ರಾಯ. 1961ರ ಒರಿಜನಲ್ ಆಕ್ಟ್‌ನಲ್ಲಿ ಏನು ಹೇಳಲಾಗಿದೆ ಅದು ಬಹಳ ಚೆನ್ನಾಗಿದೆ. ಮತ್ತು ಬಹಳ ಸಿಂಪಲ್ ಆಗಿದೆಯಲ್ಲದೆ ಎಷ್ಟೋ ಪ್ರಗತಿದಾಯಕವಾದುದಾಗಿದೆ. ಆದರೆ ಈಗ ಅದಕ್ಕೆ ನಾನಾ ಅರ್ಥವನ್ನು ಕೊಟ್ಟು ವಿಂಗಡಿಸುವ ಪ್ರಯತ್ನ ಮಾಡಿದ್ದಾರೆ. ಇದು ಬಹಳ ಮೋಸದಿಂದ ಕೂಡಿದುದಾಗಿದೆ ಎಂದು ಹೇಳಬಹುದು. ಉದಾಹರಣೆಗೆ ಇಲ್ಲಿ ಫ್ಯಾಮಿಲಿ ಎನ್ನುವುದಕ್ಕೆ ಅರ್ಥ ಕೊಡುತ್ತಾ ಹೀಗೆ ಹೇಳಿದ್ದಾರೆ :

> "In the case of an individual who has a spouse or spouses, such individual, the spouse/spouses and their minor sons and their unmarried daughters, if any ;"

ಇದರಿಂದ ಏನಾಗುತ್ತದೆಂದರೆ, ತಾವು ಈ ಮೂಲಕ ಎಷ್ಟು ಜಮೀನನ್ನು ಪಡೆಯುತ್ತೇವೆಂದು ಹೇಳಿಕೊಂಡು ಬರುತ್ತಿದ್ದಿರೋ ಅಷ್ಟು ಜಮೀನು ಸಿಗುವುದಿಲ್ಲ. ಕೆಲವು ತಿಂಗಳ ಹಿಂದೆ ಮಾನ್ಯ ಮಂತ್ರಿಗಳು ನಾಲ್ಕೂವರೆ ಲಕ್ಷ ಎಕರೆ ಜಮೀನು ಇದರಿಂದ ಸರ್ಕಾರಕ್ಕೆ ಸಿಗುತ್ತದೆಂದು ಹೇಳಿದ್ದರು ಆದರೆ ಇಲ್ಲಿ ಕೊಟ್ಟಿರುವ ಡೆಫಿನಿಷನ್ ನೋಡಿದರೆ 4 ಲಕ್ಷ ಎಕರೆ ಜಮೀನು ಸಿಗುವುದು ಸಹ ಕಷ್ಟವೆಂದೆ ಈ ವಿಚಾರದಲ್ಲಿ ಮಾನ್ಯ ಶಾಮಣ್ಣನವರು ಹೇಳಿದ್ದು ಸರಿಯಾಗಿದೆ. ಇಲ್ಲಿಯವರೆಗೆ ಅನೇಕ ಜನರು ತಮ್ಮ ಜಮೀನನ್ನು ಬೇರಾಟ ಮಾಡಿರುವುದರಿಂದ ಮತ್ತು ಅನೇಕ ರೀತಿಯ ವ್ಯವಹಾರ ನಡೆಸಿರುವುದರಿಂದ ಖಂಡಿತವಾಗಿ ಇಷ್ಟು ಜಮೀನು ನಿಮಗೆ ಸಿಗುವುದಿಲ್ಲ. ಫ್ಯಾಮಿಲಿ ಎನ್ನುವುದರ ಅರ್ಥ ಮೊದಲನಂತೆಯೇ ಇದ್ದರೆ ಸ್ವಲ್ಪ ಮಟ್ಟಿಗೆ ಜಮೀನು ಸಿಗುತ್ತಿತ್ತು. ಸಿ. ಎಲ್. ಆರ್. ಸಿ. ರೆಕಮೆಂಡೇಷನ್ಸ್ ಮತ್ತು ಮುಖ್ಯಮಂತ್ರಿಗಳ ಮೀಟಿಂಗ್‌ನಲ್ಲಿ ಕೈಕೊಂಡಂತಹ ತೀರ್ಮಾನಕ್ಕೆ ಸಹ ಇದು ವಿರುದ್ಧವಾಗಿದೆಯೇ ಹೊರತು ಆ ತೀರ್ಮಾನಕ್ಕೆ ಅನುಗುಣವಾಗಿದೆ ಎಂದು ನನಗನ್ನಿಸುವುದಿಲ್ಲ. ಇಲ್ಲಿ ಮೈನರ್ ಚಿಲ್ಡ್ರನ್ ಮತ್ತು ಮೇಜರ್ ಚಿಲ್ಡ್ರನ್ ಎಂದು ವಿಂಗಡಣೆ ಮಾಡಿರುವುದು ಸರಿಯಾಗಿಲ್ಲ. ಈ ವಿಷಯದಲ್ಲಿ ಹಿಂದಿನ ಕಾನೂನೇ ಸರಿಯಾಗಿತ್ತು. ಆದ್ದರಿಂದ ಅದನ್ನೇ ಮುಂದುವರೆಸುವ ಬಗ್ಗೆ ತಿದ್ದುಪಡಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಡ್ರಾಟ್ ಆಫೆಕ್ಟೆಡ್ ತಾಲ್ಲೂಕ್‌ಗಳ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಟ್ಟರು ಬರಗಾಲದ ತಾಲ್ಲೂಕುಗಳ ಒಂದು ಲಿಸ್ಟ್ ಮಾಡಿದ್ದಾರೆ. ಅದು ಬಹಳ ತಪ್ಪಾಷೆಯಾಗಿದೆ. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. 87 ತಾಲ್ಲೂಕುಗಳ ಜೊತೆಗೆ 9 ತಾಲ್ಲೂಕುಗಳನ್ನು ಸೇರಿಸಿ 96 ತಾಲ್ಲೂಕುಗಳನ್ನು ಮಾಡಿದ್ದಾರೆ. ಅವರು ಎಂದರೆ ಡ್ರಾ ಆಫೆಕ್ಟೆಡ್ ಏರಿಯಾದವರು ಸೀಲಿಂಗ್ ಲಿಮಿಟಿಗಿಂತ 20 ಪರ್ಸೆಂಟ್ ಹೆಚ್ಚು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇದೆ. ಇದು ಬರೀ ಬರಗಾಲ ಪ್ರದೇಶಕ್ಕೆ ಮಾತ್ರ ಅನ್ವಯಿಸುತ್ತದೆಯೇ ಅಥವಾ ಕ್ಯಾನಿಕಲ್

ಡ್ರಾಟ್ ಅಫೆಕ್ಟೆಡ್ ಏರಿಯಾಕ್ಕೆ ಅನ್ವಯಿಸುತ್ತದೆಯೇ ಎಂಬುದನ್ನು ನೋಡಬೇಕಾಗಿದೆ ಏತಕ್ಕೆಂದರೆಇದು ಬರೀ ಡ್ರಾಟ್ ಅಫೆಕ್ಟೆಡ್ ಏರಿಯಾಕ್ಕೆ ಅನ್ವಯಿಸಿದರೆ ತಪ್ಪಾಗುತ್ತದೆ. ಇವೊತ್ತು ಅಲ್ಲಿ ಬರಗಾಲ ಪರಿಸ್ಥಿತಿ ಬಂದಿರಬಹುದು. ನಾಳೆ ಪರಿಸ್ಥಿತಿ ಉತ್ತಮವಾಗಬಹುದು. ಆದ್ದರಿಂದ ಅವರು ಸೀಲಿಂಗ್ ಲಿಮಿಟ್‌ಗಿಂತ ಜಾಸ್ತಿ ಇಟ್ಟುಕೊಳ್ಳಬಹುದು ಎಂದರೆ ಹೇಗೆ? ಕ್ರಾನಿಕಲ ಡ್ರಾಟ್ ಅಫೆಕ್ಟೆಡ್ ಏರಿಯಾದಲ್ಲಿ ಸೀಲಿಂಗ್ ಲಿಮಿಟ್‌ಗಿಂತ 20 ಪರ್ಸೆಂಟ್ ಹೆಚ್ಚು ಭೂಮಿಯನ್ನು ಇಟ್ಟುಕೊಳ್ಳಬಹುದು ಎಂದು ಇರಿಗೇಷನ್ ಕಮಿಷನ್‌ನವರು ಹೇಳಿದ್ದಾರೆ. ಅವರ ಪ್ರಕಾರ ಕ್ರಾನಿಕಲೆ ಡ್ರಾಟ್ ಅಫೆಕ್ಟೆಟ್ ಏರಿಯಾ ರಾಜಸ್ಥಾನ ಮತ್ತು ಗುಜರಾತ್ ಎಂದು ಹೇಳಿದ್ದಾರೆ. ಆದ್ದರಿಂದ ಇದು ರಾಜಸ್ಥಾನ ಮತ್ತು ಗುಜರಾತಿಗೆ ಮಾತ್ರ ಅನ್ವಯಿಸುತ್ತದೆ. ಈ 96 ತಾಲ್ಲೂಕುಗಳನ್ನು ಹಳೆಯ ಕಾಲದಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರ ಕಾಲದಲ್ಲಿ ಲಿಸ್ಟ್ ಮಾಡಿಕೊಟ್ಟಿದ್ದನ್ನು ನೀವು ನೋಡಿದ್ದೀರಾ? ಅವರ ಮೇಲೆ ನಮಗೆ ಏತಕ್ಕೆ ಮೋಹಬಂತೋ ಗೊತ್ತಿಲ್ಲ. ನಿಜವಾಗಿ ಡ್ರಾಟ್ ಏರಿಯಾ ಇರುವುದು ಬೀದರ್ ಜಿಲ್ಲೆ. ಆದರೆ ಬೀದರ್ ಜಿಲ್ಲೆ ಇದರಲ್ಲಿ ಕಾಣುವುದಿಲ್ಲ ಆದರೆ ಬೀದರ್ ಜಿಲ್ಲೆಯನ್ನು ಬಿಟ್ಟು ಮಂಡ್ಯ ಜಿಲ್ಲೆಯನ್ನು ಸೇರಿಸಿದ್ದಾರೆ. ಮಂಡ್ಯ, ಹಾಸನ, ಬೆಂಗಳೂರು ಡಿಸ್ಟ್ರಿಕ್ಟ್, ಹೊಸಕೋಟೆ, ದೊಡ್ಡಬಳ್ಳಾಪುರ ಇವುಗಳನ್ನೂ ಡ್ರಾಟ್ ಅಫೆಕ್ಟೆಡ್ ಏರಿಯಾದಲ್ಲಿ ಸೇರಿಸಿದ್ದಾರೆ. ಅವರು ಸೀಲಿಂಗ್ ಲಿಮಿಟ್‌ಗಿಂತ 20 ಪರ್ಸೆಂಟ್ ಹೆಚ್ಚಿಗೆ ಭೂಮಿಯನ್ನು ಇಟ್ಟುಕೊಳ್ಳಬಹುದು ಎಂದರೆ ನನಗೆ ಅರ್ಥವಾಗುವುದಿಲ್ಲ. ಇದು ಸರಿಯಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿರತಕ್ಕ ಒಂದು ತೀರ್ಮಾನ ಇದೆ. ಅದರಲ್ಲಿ ಸೀಲಿಂಗ್ ಲಿಮಿಟ್‌ಗಿಂತ ಹೆಚ್ಚು ಯಾರಿಗೆ 20 ಪರ್ಸೆಂಟ್ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ ಎಂದರೆ ಕ್ರಾನಿಕಲೀ ಡ್ರಾಟ್ ಅಫೆಕ್ಟೆಡ್ ಏರಿಯಾದವರು, ಮರಳುಗಾಡು ಇರುವ ಕಡೆ ವಾಸ್ತವ್ಯ ಸ್ಪಷ್ಟರ ಪ್ರಾಬ್ಲಮ್ಸ್ ಮೇಲೆ ಅವರು ಸೀಲಿಂಗ್ ಲಿಮಿಟ್‌ಗಿಂತ 20 ಪರ್ಸೆಂಟ್ ಹೆಚ್ಚು ಭೂಮಿಯನ್ನು ಇಟ್ಟುಕೊಳ್ಳಬಹುದು ಎಂದು ಹೇಳಿದ್ದಾರೆ. ಇದರ ಜೊತೆಗೆ ಇರಿಗೇಷನ್ ಕಮಿಷನ್‌ನವರು ಈ ರೀತಿ ಹೇಳಿದ್ದಾರೆ.

> "Chronically draught affected areas are extremely limited and found only in the States of Rajasthan and Gujarat."
>
> "In view of the desert conditions existing on a wide scale in Rajastahan, the State has got some special problem regarding fixation of ceiling under this head. The State Government will discuss with the Ministry of Agriculture and take appropriate decisions."

ಎಂದು ಹೇಳಿದ್ದಾರೆ. ಅಮೇರೆ Nine man Committee report on agricultural ceiling. This report is signed by Sri Fakrudin Ali Ahmad, Sri C. Subramaniam, Sri Barkathulla Khan, Sri Devaraj Urs, Sri Karunakaran and others.

Sri D. DEVARAJ URS.—The point is this. These are recommendations no doubt. But Subsequently there was only a slight modification in the Working Committee, namely, as you stated for chronically draught affected areas some consession may be shown. Any concession which is shown either to desert areas or chronically draught affected areas, still the Government of India reserves the right to accept or reject the recommendation. The House might as well understand that when this goes before the Government of India, simply because we include 70 or 90 areas, there is no guarantee that the Government of India will accept. There is a tendency as you know, whenever there is a question of some concession to be shown, each man wants to get as much concession as possible. That will not work when there is a unanimous recommendation. When the enatment is passed, if the Centre does not want this, they will certainly strike it down or send it back. That is the position.

Mr. DEPUTY SPEAKER.—Mr. Krishnan, have taken more than 45 minutes.

Sri M. S. KRISHNAN.—I will finish soon Sir. He referred to the Congress Working Committee.

Mr. DEPUTY SPEAKER.—My same matter. is repeated three times by the member.

Sri M. S. KRISHNAN.—The Congress working committee on 22nd July 1972 said exactly what has been stated earlier. It says : For other types of land celling does not exceed 54 acres. For desert and hilly land, ceiling of over 54 acres may be fixed and this should be fixed in consultation with the Ministry of Agriculture.

Sri D. DEVARAJ URS.—That is the modification.

Sri M. S. KRISNAN.—The point is, it must be desert and hilly areas. What we make, should not be patently absurd recommendations. It should be acceptable or it may be modified. It should not be patently absurd recommendations. So I would request you to completely delete it. If necessary, there may be even a committee to go into the matter which are chronically draught affected areas. ಈ ಡ್ರಾಟ್ ಅಫೆಕ್ಟೆಡ್ ಏರಿಯಾದಲ್ಲಿ ಮೈಸೂರು, ಮಂಡ್ಯ, ಬೆಂಗಳೂರು ಡಿಸ್ಟ್ರಿಕ್ಟ್, ಸೇರಿಸಬೇಕು ಎಂದರೆ ಇದು ನನಗೆ ಅರ್ಥವಾಗುವುದಿಲ್ಲ. ಇದನ್ನು ಪೂರ್ತಿ ಕಿತ್ತು ಹಾಕಬೇಕು.

Rent is a very important matter. Rent should not be more than five times the land revenue and not ten times as in this clause. You will appreciate, Mr. Deputy Speakar, because you come from the very place where the Bombay Tenancy Act is in operation and rent has been fixed at five times the land revenue.

Land revenue is 4 per cent of the gross yield and ten times that means 40 per cent of the gross yield. Under the original Act, the rent is only one-fourth or one-fifth of the gross produce *i.e.*, 20 or 25 per cent. This is totally unjust, against the interest of the peasantry and against the principles of justice. It must be 5 per cent of the land revenue as it was in the Bombay Tenancy Act. ಯಾವುದು 25 ಪರ್‌ಸೆಂಟ್ ಇತ್ತು, ಅದನ್ನು 40 ಪರ್‌ಸೆಂಟ್ ಮಾಡುವುದಕ್ಕೆ ಹೊರಟಿದ್ದೀರಿ. ಇನ್ನೊಂದು ಏನೆಂದರೆ, ಈ 16 ಕಿಲೋಮೀಟರ್ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಆದರೆ ಮುಂದಿನ ಕೇಸ್‌ಗೆ ಅನ್ವಯವಾಗುತ್ತದೆ, ಹಿಂದಿನ ಕೇಸ್‌ಗೆ ಅನ್ವಯವಾಗುವುದಿಲ್ಲ ಎಂದು ಹೇಳುವುದು ಸರಿಯಾದ ವಾದವಲ್ಲ. It is not correct to have made this change. ಒಟ್ಟಿನಲ್ಲಿ ಇದರಲ್ಲಿ ಕೆಲವು ಪ್ರಗತಿದಾಯಕವಾದ ಅಂಶಗಳಿದ್ದರೂ, ಕೆಲವು ನ್ಯೂನತೆಗಳು ಇವೆ. ಅವುಗಳನ್ನು ಸರಿಪಡಿಸುವುದಕ್ಕೆ ಸಭೆ ಗಮನ ಕೊಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ವಿ. ಮುನಿಸ್ವಾಮಿ (ಮಾಲೂರು)—ಸನ್ಮಾನ್ಯ ಅಧ್ಯಕ್ಷರೇ, ನಾನು ಒಬ್ಬ ರೈತನಾಗಿ ಈ ಭೂಸುಧಾರಣಾ ತಿದ್ದುಪಡಿಯನ್ನು ಸ್ವಾಗತಿಸಿ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈ ಭೂಸುಧಾರಣೆ 10—12 ವರ್ಷಗಳಿಂದಲೂ ಬರುತ್ತದೆ ಎಂದು ಇದ್ದರೂ, ಬಾರದೆ ಈಗ ಬಂದಿರುವುದು ತುಂಬಾ ಸಂತೋಷದ ವಿಚಾರ. ಇದು ನಮ್ಮ ತಲೆಯ ಮೇಲೆ ಒಂದು ಕತ್ತಿಯೋಪಾದಿಯಲ್ಲಿ ಇದೆ ಎಂಬ ಭಯ ಕೆಲವರಲ್ಲಿ ಇದ್ದುದರಿಂದ ನಮಗೆ ಬಹಳ ತೊಡಕುಗಳು ಉಂಟಾಯಿತು. ಒಂದನೆಯ ತೊಡಕು ನಮ್ಮ ಉತ್ಪತ್ತಿಯು ಕಡಿಮೆಯಾಯಿತು ; ಮತ್ತು ಇದರಿಂದ ದೇಶಕ್ಕೆ ನಷ್ಟವಾಯಿತು. ಈಗ ಇರುವ ಭೂಸುಧಾರಣಾ ಮಸೂದೆ ಬರೇ ಸೀಲಿಂಗ್ ವಿಚಾರದ ಬಗ್ಗೆ ಮಾತ್ರ

ಹೇಳುತ್ತದೆ ಎಂದು ಹೇಳಿದೆ ವಿಧಿಯಿಲ್ಲ. ಈ ಭೂಸುಧಾರಣೆಯಿಂದ ಹೆಚ್ಚಿನ ಉತ್ಪತ್ತಿಯಾಗಿ ರೈತನಿಗೆ ಹೆಚ್ಚು ಅನುಕೂಲವಾಗಬೇಕು ಮತ್ತು ಭೂಮಾಲೀಕರಿಗೂ ಹೆಚ್ಚು ಅನುಕೂಲವಾಗಬೇಕು, ಮತ್ತು ದೇಶಕ್ಕೆ ಒಳ್ಳೆಯದಾಗಬೇಕು. ಆದರೆ ಇದರಲ್ಲಾವುದು ಬರೇ ಮಿತಿಯನ್ನು ವಿಧಿಸುವ ವಿಚಾರ ಮಾತ್ರ. ಇದರಲ್ಲಿ ಕೆಲವು ಒಳ್ಳೆಯದೂ ಇವೆ ; ಕೆಲವು ಒಳ್ಳೆಯದಲ್ಲದ್ದೂ ಇವೆ. ಇದರಲ್ಲಿ ಬರೇ ಸೈನಿಕರಿಗೆ ಮಾತ್ರ ರಿಸ್ಯೂವ್ ಮಾಡುವ ಅವಕಾಶ ಕೊಟ್ಟು ವಿಧವೆಯರಿಗೆ ಮತ್ತು ಮೈನರ್ಸಿಗೆ ಬಹಳ ಅನ್ಯಾಯ ಮಾಡಿದ್ದಾರೆ. ರಾಜಾರಾಮ ಮೋಹನ ರಾಯರ್‌ರವರು ವಿಧವೆಯರಿಗೆ ಏನೊಂದು ರಕ್ಷಣೆಯನ್ನು ಕೊಟ್ಟರು ಅದನ್ನು ಇವತ್ತು ಪುನಃ ಕಿತ್ತುಹಾಕಿ, ಅವರು ಪುನಃ ಸುಸ್ಥೈರ್ಯ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗಿದೆ. ಅದೇ ರೀತಿ ಮೈನರ್ಸ್ ಮಕ್ಕಳನ್ನು ಸರ್ಕಾರವೇ ವಹಿಸಿಕೊಂಡು ನೋಡಿಕೊಳ್ಳುವ ವ್ಯವಸ್ಥೆಯನ್ನು ಈ ತಿದ್ದುಪಡಿಯಲ್ಲಿ ಸೇರಿಸಬೇಕು. ಅಮೇಲೆ ಸೈನಿಕರು ರ್ಯಾಂಡ್ ರಿಸ್ಯೂಂ ಮಾಡಿಕೊಳ್ಳುವಾಗ ಟೆನೆಂಟ್ಸ್ ಗತಿ ಏನು ? ಅತನು ಸೈನ್ಯದಿಂದ ಬಂದು ಹೆನ್‌ಷನ್ ಮತ್ತು ಇತರ ಅನುಕೂಲಗಳನ್ನು ಪಡೆದುಕೊಂಡು ಟೆನೆಂಟ್ ವ್ಯವಸಾಯ ಮಾಡುತ್ತಿದ್ದ ಭೂಮಿಯನ್ನು ವಹಿಸಿಕೊಂಡರೆ, ಅವನ್ನೇ ನಂಬಿಕೊಂಡಿರುವ ರೈತನ ಗತಿ ಏನಾಗಬೇಕು ? ಮೊದಲಿನೆಯ ಕಾನೂನು ಪ್ರಕಾರ ಒಂದು ಪ್ರೋರ್ಶನ್ ರಿಸ್ಯೂವ್ ಮಾಡಬಹುದಾಗಿತ್ತು. ಆದರೆ ಈಗ ಅದನ್ನು ಪೂರ್ತಿಯಾಗಿ ಕೈಬಿಟ್ಟಿದ್ದಾರೆ. ಇದರಿಂದ ಗೇಣಿದಾರನ ಹಿತರಕ್ಷಣೆಯಾಗಲಲ್ಲ.

ಇನ್ನು ಕೆಲವು ಅನೋಲಯುಂ ಪ್ಲಾಂಟೇಶನಿಗೆ ಮತ್ತು ಇತರ ಪ್ಲಾಂಟೇಶನಿಗೆ ವಿನಾಯಿತಿಯನ್ನು ಕೊಟ್ಟಿದ್ದಾರೆ. ನಾವು ವರ್ಗರಹಿತವಾದ ಸಮಾಜವನ್ನು ಕಟ್ಟಬೇಕೆಂದು ಹೇಳುತ್ತಿರುವಾಗ ಈ ರೀತಿ ಮಾಡಿದರೆ ನಾನಾ ವರ್ಗಗಳನ್ನು ನಿರ್ಮಾಣ ಮಾಡಿದ ಹಾಗೆ ಆಗುತ್ತದೆ. ಇವತ್ತು ಪ್ಲಾಂಟೇಶನುಗಳನ್ನು ಹೊಂದಿರುವವರು ಬಹಳ ಶ್ರೀಮಂತರಾಗಿರುತ್ತಾರೆ. ಆದರ ಜೊತೆಗೆ ತರಿ ಭೂಮಿ 10 ಎಕರೆ ಏನು ಕೊಡುತ್ತೀರಿ ಅದು ಎರಡನೆಯ ವರ್ಗದ ಭೂಮಿಯಾಗುತ್ತದೆ. ಡ್ರಾಟ್ ಇದ್ದಂತಹ ಪ್ರದೇಶಗಳಲ್ಲಿ ನೀವು 100 ಎಕರೆ ಖುಷ್ಕಿ ಭೂಮಿ ಕೊಟ್ಟರೂ ಅವರು ನಿರ್ಗತಿಕರಾಗುತ್ತಾರೆ. 10 ಎಕರೆ ತರಿ ಭೂಮಿಗೆ ಎರಡು ಲಕ್ಷ ರೂಪಾಯಿ ಬೆಲೆಯಾಗುತ್ತದೆ. ಆದರೆ ಡ್ರಾಟ್ ಏರಿಯಾದಲ್ಲಿ 50—100 ಎಕರೆ ಖುಷ್ಕಿ ಭೂಮಿ ಕೊಟ್ಟರೂ ಸಹ ಅದರ ಬೆಲೆ 50 ಸಾವಿರ ರೂಪಾಯಿ ಸಹ ಬರುವುದಿಲ್ಲ. ಅಲ್ಲಿ ಒಂದು ವರ್ಷ ಬೆಳೆ ಬಂದರೆ ಮತ್ತೆ 5 ವರ್ಷ ಬೆಳೆಯಾಗುವುದಿಲ್ಲ. ಇನ್ನು ಕೆಲವು ವರ್ಷ ಬೆಳೆ ಬರುತ್ತದೆ, ಕೆಲವು ವರ್ಷ ಬರುವುದಿಲ್ಲ. ಅಂಥ ಕಡೆಗಳಲ್ಲಿ ನೀವು ಸಾವಿರ ಎಕರೆ ಕೊಟ್ಟರೂ ಸುಧಾರಣೆಯಾಗುವುದಿಲ್ಲ.

ಇನ್ನು ಗೇಣಿದಾರರ ವಿಚಾರದಲ್ಲಿ ಸೆಲೆಕ್ಟ್ ಕಮಿಟಿಯವರನ್ನು ಅಪ್ರಿಶಿಯೇಟ್ ಮಾಡುವಂತಹ ವಿಚಾರ ಏನೂ ಇಲ್ಲ. ಆದರೆ ಸೆಕ್ಷನ್ 14ರ ಪ್ರಕಾರ ಗೇಣಿದಾರರಿಗೆ 20 ವರ್ಷದವರೆಗೆ ಕಂತುಗಳನ್ನು ಪಡೆದು, ಆ ಮೇಲೆ ರಿಜಿನ್ವರ್ ಮಾಡಿಸಿ ಕೊಡುತ್ತಾರೆಂದು ಇದೆ. ಆದರೆ 20 ವರ್ಷದ ವರೆಗೆ ಇತನು ಕಂದಾಯ ಕೊಡಬೇಕೇ ಅಥವಾ ಗೇಣಿ ಕೊಡಬೇಕೇ ಎಂಬುದು ಸ್ಪಷ್ಟವಾಗಿ ತಿಳಿಸಿಲ್ಲ. ಅತನು 20 ವರ್ಷ ಬಾಳಿ ಬದುಕಿದ ಮೇಲೆ ಭೂಮಿ ಅತನಿಗೆ ಸ್ವಂತವಾಗಿ ಆಗುತ್ತದೆಯೇ ಹೊರತು ಅದರ ಮೊದಲು ಆಗುವುದಿಲ್ಲ. ಇದರಿಂದಾಗಿ ಅತನು ಇದರಲ್ಲಿ ಹೆಚ್ಚು ಆಸಕ್ತಿ ವಹಿಸಿ ದುಡಿಯುವುದಿಲ್ಲ. ಮಾನ್ಯ ಮಂತ್ರಿಯವರು ಒಟ್ಟು ನಾಲ್ಕು ಲ್ ಎಕರೆ ಭೂಮಿ ಹಂಚುವುದಕ್ಕೆ ಸಿಗುತ್ತದೆ ಎಂದು ಹೇಳಿದರು. ಆದರೆ ನನಗನಿಸುತ್ತದೆ, ಎರಡು ಲಕ್ಷ ಮಾತ್ರ ಸಿಗಬಹುದು ಎಂದು. ನಾನಾದರೂ ಒಂದು ಸಲಹೆ ಮಾಡುತ್ತೇನೆ. ರೈತನಿಗೆ 20 ವರ್ಷವಾದ ಮೇಲೆ ಪೂರ್ತಿ ಹಕ್ಕನ್ನು ಕೊಡುವುದರ ಬದಲು ರೈತನಿಗೆ ಜಮೀನನ್ನು ಪುಕ್ಕಟೆಯಾಗಿ ಕೊಟ್ಟು ಭೂಮಾಲೀಕರಿಗೆ ಒಂದು ಸಬ್ಸಿಡಿಯನ್ನು ಕೊಟ್ಟರೆ, ಇದರಿಂದ ರೈತನಿಗೂ ಸಂತೋಷವಾಗುತ್ತದೆ ಮತ್ತು ಭೂಮಾಲೀಕರಿಗೂ ಕೊಂದರೆ ತಪ್ಪುತ್ತದೆ. ಆದಲ್ಲದೆ ಇದರಿಂದ ರೈತನು ಸಹ ಹೆಚ್ಚು ಉತ್ಸಾಹದಿಂದ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಯೋಚನೆ ಮಾಡಿ ಭೂಮಿಯನ್ನು ರೈತನಿಗೆ ಪುಕ್ಕಟೆಯಾಗಿ ಕೊಡುವುದಕ್ಕೆ ಏರ್ಪಾಡು ಮಾಡುವುದು ಸೂಕ್ತವೆಂದು ಹೇಳುತ್ತೇನೆ. ಇದರಿಂದ ರೈತನು ಸಹ ಹೆಚ್ಚು ಹೆಚ್ಚು ದುಡಿದು ದೇಶದ ಕಲ್ಯಾಣವೂ ಸಹ ಆಗುತ್ತದೆ. ತಹಸೀಲ್ದಾರರಿಗೆ ಹೆಚ್ಚಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ತಹಸೀಲ್ದಾರರು ಈಗ ನವಾಬರು ಆಗುತ್ತಿದ್ದಾರೆ. ಅವರು ಮಾಡಿದ್ದೇ ಅಧಿಕಾರ ಅದರಿಂದ. ರೈತರಿಗೆ ಬಹಳವಾಗಿ ತೊಂದರೆಯಾಗುತ್ತಿದೆಯೆಂದು ನಾನು ಮೊದಲಿನಿಂದ ಹೇಳುತ್ತಿದ್ದೆ. ಲಂಚಕೋರತನದಿಂದ ಬೇಕಾದಷ್ಟು ತೊಂದರೆಯಾಗುತ್ತಿದೆ. ಈ ಕಾನೂನಿನಿಂದ ಅವರಿಗೆ ಇನ್ನೂ ಹೆಚ್ಚು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ಇದರಿಂದ ಗೇಣಿದಾರರಿಗೂ ಮತ್ತು ಭೂಮಾಲೀಕರಿಗೂ ಹೆಚ್ಚಿಗೆ ತೊಂದರೆಯಾಗಬಹುದು. ಅಷ್ಟಲ್ಲದೇ ಈಗ ಒಂದು ಟ್ರಿಬ್ಯೂನರ್ ಹೆಚ್ಚು ಮಾಡುವುದಕ್ಕೆ

(ಶ್ರೀ ಎ. ವಿ. ಮುನಿಸ್ವಾಮಿ)

ಹೋಗಿದ್ದಾರೆ. ಈ ರಿಪೋರ್ಟ್ ಪ್ರಕಾರ ಯಾವ ಲೇಗರ್ ಪ್ರೊಸೀಡಿಂಗ್ಸ್‌ನ್ನೂ ತೆಗೆದುಕೊಳ್ಳಬಾರದು. ಯಾವ ಲಾಯರ್ ಸಹ ಅಲ್ಲಿ ಅಪಿಯರ್ ಆಗಬಾರದೆಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಸೆನ್ಸಸ್ ಪ್ರಕಾರ ಸೇಕಡ 5ರಷ್ಟು ಮಾತ್ರ ಅಕ್ಷರಸ್ಥರು ಇದ್ದಾರೆ. ಸೇಕಡ 10ರಷ್ಟು ರುಜು ಹಾಕುವವರೇ ಇದ್ದಾರೆ. ಕಾನೂನು ವ್ಯವಹಾರ ಗೊತ್ತಿರುವವರು ಕೇವಲ ಸೇಕಡ 5ರಷ್ಟೂ ಸಹ ಇರುವುದಿಲ್ಲ. ಅವರು ಭೂಮಾಲೀಕರು. ಗೇಣಿದಾರರಲ್ಲ. ಅವರು ಏನಾದರೂ ಮಾಡಬೇಕೆಂದರೆ, ಟ್ರಿಬ್ಯೂನಲಿನಲ್ಲಿ ಏನು ಬೇಕಾದರೂ ಮಾಡಬಹುದು. ಆದರೆ ಗೇಣಿದಾರರಿಂದ ಆ ರೀತಿ ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅವರಿಗೆ ಲಾಯರ್‌ಗಳನ್ನು ಉಪಯೋಗಿಸುವ ಅವಕಾಶವನ್ನು ಮಾಡಿಕೊಡಬೇಕು. ಇದರಲ್ಲಿ ಸ್ವಾಗತಾರ್ಹವಾದುದು ಏನೆಂದರೆ, ಮುಕ್ಕಾಲುಪಾಲು ಜನರು ಲಾಯರುಗಳಿದ್ದರೆ, ಅವರಿಗೆ ಅನುಕೂಲ ಮಾಡಿಕೊಳ್ಳುವ ಹಾಗೆ ಮಾಡಿಕೊಂಡಿದ್ದಾರೆ. ಇದರಲ್ಲಿ ಟ್ರಿಬ್ಯೂನಲ್ಲಿನಲ್ಲಿ ಅಪೀಲಿಗೆ ಹೋಗುವುದಕ್ಕೆ ಅವಕಾಶವಿಲ್ಲ. ಅಸಿಸ್ಟೆಂಟ್ ಕಮಿಷನರ್, ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್—ಹೀಗೆ ಬೇರೆ ಬೇರೆ ಇದ್ದಾರೆ. ಅಸಿಸ್ಟೆಂಟ್ ಕಮಿಷನರ್ ಹುದ್ದೆ ಪೋಸ್ಟ್ ಆಫೀಸ್ ಇದ್ದ ಹಾಗೆ ಇದೆ. ಅದನ್ನು ಕೂಡಲೇ ಅಬಾಲಿಷ್ ಮಾಡಬೇಕು. ಈಗಾಗಲೇ ಸೇಕಡ 40 ಅಥವಾ 45ರಷ್ಟು ಇಂತಹ ಆಫೀಸರುಗಳಿಗೆ ಅಲ್ಲಿ ಅವಕಾಶ ಕೊಡುವಾಗ ನಿಮ್ಮ ವರ್ಗದವರಲ್ಲಿ ಸೇಕಡ 2ರಷ್ಟನ್ನು ಕೊಟ್ಟು, ಇನ್ನುಳಿದ ಸೇಕಡ 98ರಷ್ಟಕ್ಕೆ ಬೇರೆಯವರನ್ನು ಅಲ್ಲಿಗೆ ಹಾಕುವುದು ಯೋಗ್ಯ. ಅಸಿಸ್ಟೆಂಟ್ ಕಮಿಷನರ್ಸ್ ಈಗ ಪೋಸ್ಟ್ ಆಫೀಸ್ ಕೆಲಸ ಮಾಡುವುದನ್ನು ಬಿಟ್ಟು, ರ್ಯಾಂಡ್ ರಿಫಾರಮ್ ಕೆಲಸ ಮಾಡಬೇಕು. ಅವರು ಮಾಡಿದ್ದೇ ಸರ್ವಾಧಿಕಾರ. ಅವರು ಮಾಡಿದ್ದೇ ಫೈನಲ್. ಅವರು ಯಾವ ಸ್ಟೇಜಿಗೆ ಬೇಕಾದರೂ ಹೋಗುತ್ತಿದ್ದಾರೆ. ನಮ್ಮನ್ನು ಪ್ರಶ್ನೆ ಮಾಡುವವರು ಯಾರೂ ಇಲ್ಲವೆಂದು ಹೇಳುತ್ತಾರೆ. ಅದಕ್ಕೆ ಅಪೀಲು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಬಹಳವಾಗಿ ತೊಂದರೆಯಾಗುತ್ತದೆ. ಅದರಿಂದ ಸ್ವಾರ್ಥಿಗಳ ಕೆಲಸ ಸಾಕು.

5-30 P.M.

ಇನ್ನು ಭೂಮಿ ಹಂಚಿಕೆ ಮಾಡುವುದಕ್ಕೆ ಕೆಲವು ಏರ್ಪಾಡುಗಳನ್ನು ಮಾಡಿದ್ದಾರೆ. ಗದ್ದೆಯಲ್ಲಿ ಎರಡು ಮೂರು ಲಕ್ಷ ಎಕರೆಗಳನ್ನು ಕೊಡುವಾಗ ಯಾರ್ಯಾರಿಗೆ ಅದನ್ನು ಕೊಡಬೇಕು ಎಂಬ ಬಗ್ಗೆ ಒಂದು ಪಟ್ಟಿ ಮಾಡಿದ್ದಾರೆ. ನಮ್ಮ ಸಮಾಜವಾದ ಹಾಗೂ ನಿಮ್ಮ ಸಮಾಜವಾದ ಸ್ಥಾಪನೆ ಮಾಡಿರುವಂತಹ ಕಾಂಗ್ರೆಸ್ ಈಗ ಆ ಒಂದು ಸಮಾಜವಾದದ ತತ್ವಗಳನ್ನು ಅನುಷ್ಠಾನಕ್ಕೆ ತರುತ್ತೇವೆಂದು ಬಂದಿದ್ದಾರೆ. ಈಗಲಾದರೂ ಈ ಕಾನೂನು ಬಂದಿದೆ. ಪೂರ್ತಿಯಾಗಿ ಈಗ ನ್ಯಾಷನಲೈಜ್ ಮಾಡುವಾಗ ನಾವು ಪುನಃ ಯಾರಿಗೋ ಹಂಚಿ ಇತರರಿಗೆ ಅವಕಾಶ ಇಲ್ಲದ ಹಾಗೆ ಮಾಡಿಕೊಳ್ಳುವುದಕ್ಕಿಂತ ಬರುವ ಭೂಮಿಯನ್ನು ವರ್ಗಮಾಡಿಕೊಳ್ಳುವುದು ಯೋಗ್ಯವಾಗಿದೆ. ಈಗ ಎಷ್ಟು ಭೂಮಿ ಎಲ್ಲೆಲ್ಲಿ ಸಿಗುತ್ತದೋ ಆ ಭೂಮಿಯನ್ನೆಲ್ಲ ಒಂದು ಕಲೆಕ್ಟಿವ್ ಫಾರಂ ಎಂಬುದಾಗಿ ಮಾಡಿ ಅಗ್ರಿಕಲ್‌ಚರರ್ ಲೇಬರರ್ಸ್‌ಗೆ ಅದನ್ನು ಯೂಟಿಲೈಜ್ ಮಾಡುವುದಕ್ಕೆ ಕೊಟ್ಟರೆ ಬಹಳ ಒಳ್ಳೆಯದು. ಅಗ್ರಿಕಲ್‌ಚರರ್ ರ್ಯಾಂಡ್ ಲೇಬರರ್ಸ್ ಫೈನಾನ್ಸ್ ಬ್ಯಾಂಕಿನಿಂದ ಸಹಾಯ ಪಡೆಯುವುದನ್ನು ಈಗ ಸಾಕಷ್ಟು ತಡೆಯಬೇಕೆನ್ನುವಾಗ, ಈಗಾಗಲೇ ಎಷ್ಟೋ ದಿವಸಗಳಿಂದ ಬೇಕಾದಷ್ಟು ಭೂಮಿಯನ್ನು ಹಂಚಿದ್ದಾರೆ. ಸುಮಾರು 30–40 ವರ್ಷಗಳಿಂದಲೂ ಭೂಮಿ ಇಲ್ಲದವರು ಯಾರೆಂಬುದನ್ನು ಇನ್ನೂ ಗೊತ್ತು ಮಾಡಿಲ್ಲ ಅಂದಮೇಲೆ ಈಗ ಸೇಕಡ 5ರಷ್ಟು ಭೂಮಿಯನ್ನು ಯಾರಿಗೆ ಕೊಡುತ್ತಾರೆ? ಅದು ಯಾವುದೋ ಒಂದು ರೂಪದಲ್ಲಿ ವರ್ಗಾವಣೆ ಆಗಿದೆ. ಗೇಣಿದಾರ ಹೆಚ್ಚಿಗೆ ಕಂದಾಯ ಕೊಡುವುದಕ್ಕಾಗುವುದಿಲ್ಲ. ಅವರಲ್ಲಿ ಇದರ ಬಗ್ಗೆ ಇಚ್ಛೆ ಇಲ್ಲದೇ ಇರುವವರಿಗೆ ಮತ್ತೆ ಭೂಮಿ ಕೊಟ್ಟರೆ ಅವನು ಅದನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ರ್ಯಾಂಡ್‌ಲೆಸ್ ಲೇಬರರ್ಸನ್ನು ಒಂದು ಕಡೆ ಸೇರಿಸಿ ಅವರಿಗೆ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟರೆ ಆಗ ನಾವು ಸಮಾಜವಾದದ ತತ್ವವನ್ನು ಪರಿಪಾಲನೆ ಮಾಡಿದಂತಾಗುತ್ತದೆ. ಆಗ ದೇಶದ ಉತ್ಪತ್ತಿ ಜಾಸ್ತಿಯಾಗುತ್ತದೆ.

ಕಡೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ನಾನು ಈಗಾಗಲೇ ಹೇಳಿದ ಹಾಗೆ ಸರ್ಕಾರದವರು ಭೂಮಿಗೆ ಕಂಪನ್ಸೇಷನ್ನನ್ನು ಗೇಣಿದಾರರಿಂದ ವಸೂಲುಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಏಕೆಂದರೆ ಸುಮಾರು ಸುಮಾರು 20 ವರ್ಷಗಳ ಹಿಂದಿನ ಬಾಕಿ ಕೊಡಬೇಕೆಂದರೆ ಕಷ್ಟ

ವಾಗುತ್ತದೆ. ಸತ್ತುಹೋದ ಆಫೀಸರಿಗಳಿಗೆ ಪೆನ್‌ಷನ್ ಡಿಕ್ಲೇರ್ ಮಾಡಿದಂತೆ ಇದು ಆಗುತ್ತದೆ. ಆದ್ದರಿಂದ ಇದನ್ನೆಲ್ಲಾ ಸಬ್ಸೆಡೈಜ್ ಮಾಡಿ ಲ್ಯಾಂಡ್ ಹೋಲ್ಡರ್‌ಗೆ ಎಷ್ಟು ಕೊಡಬೇಕೋ ಅಷ್ಟು ಕಂಪನ್‌ಸೇಷನ್‌ನ್ನು ಕೊಟ್ಟು ಗೇಣೀದಾರರಿಗೆ ತಕ್ಷಣ ಜಮೀನನ್ನು ಕೊಡಬೇಕು.

ನಾನು ಲ್ಯಾಂಡ್‌ಲಾರ್ಡ್ ವಿಷಯವಾಗಿ ಏಕೆ ಮಾತನಾಡುತ್ತೇನೆಂದರೆ, ನಾನೂ ಒಬ್ಬ ವ್ಯವಸಾಯಗಾರ. ನನಗೆ 5 ಎಕರೆ ಜಮೀನು ಕೊಟ್ಟರೆ ಸಾಕು. ಭೂಮಿ ಕಡಿಮೆ ಇದ್ದರೆ, ಅವನು ವಿಜ್ಞಾನಿ, ಇಂಜನಿಯರ್ ಹಾಗೂ ಡಾಕ್ಟರ್ ಆಗುವುದಕ್ಕೆ ಆಗುವುದಿಲ್ಲವೆಂಬುದು ಶುದ್ಧ ಸುಳ್ಳು. ಮಾನ್ಯ ಸರ್ ಎಂ. ವಿಶ್ವೇಶ್ವರಯ್ಯನವರು ಬಹಳ ದೊಡ್ಡಮನೆತನದಿಂದ ಬರಲಿಲ್ಲ. ಅವರು ದೊಡ್ಡ ಶಿಲ್ಪಿಗಳಾದರು. ಬಡತನದಿಂದ ಬಂದರೂ ಸಹ ಅವರ ಬ್ಯೆಕ್‌ಗ್ರೌಂಡ್‌ಗೆ ಹೆಚ್ಚಿನ ಬೆಲೆ, ಗೌರವ ಬಂತು. ಅಂದಮೇಲೆ ನಾನು ಹೆಚ್ಚು ಭೂಮಿ ಪಡೆಯಬೇಕೆಂದು ಹೇಳುವವನಲ್ಲ. ನಾನೂ ಸಹ ಎಷ್ಟೋಸಾರಿ ಸ್ವತಃ ಕಲ್ಟಿವೇಟ್ ಮಾಡಿದ್ದೇನೆ. ಕೆಲವು ಜಿಲ್ಲೆಗಳಲ್ಲಿ ತಾಲ್ಲೂಕುಗಳಿವೆ. ಅಂತಹ ಕಡೆಗಳಲ್ಲಿ 50 ಎಕರೆ ಜಮೀನು ಕೊಟ್ಟರೂ ಅಲ್ಲಿ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಕೇವಲ 20 ಎಕರೆ ಜಮೀನು ಕೊಡುತ್ತೇವೆಂದರೂ ಕೂಡ ಅವರು ಎಷ್ಟರಮಟ್ಟಿಗೆ ಜೀವನ ಮಾಡುತ್ತಾರೋ ಗೊತ್ತಿಲ್ಲ. ರಾಜಸ್ಥಾನ ಹಾಗೂ ಪಂಜಾಬು ಪ್ರದೇಶಗಳಲ್ಲಿರತಕ್ಕ ರೀತಿನೀತಿಯೇ ಬೇರೆ. ಕೋಲಾರದ ಹತ್ತಿರ ಸಾಮಾನ್ಯವಾಗಿ ಕೆಲವು ನದಿಗಳ ನೀರು ಹರಿದು ಹೋಗುತ್ತಿದ್ದರೂ ಅಲ್ಲಿ ಕೇವಲ 4 ಎಕರೆ ಜಮೀನು ಕೊಟ್ಟರೆ ಮಾಡುತ್ತಾರೆಂದರೆ, ಅದನ್ನು ಬಿಟ್ಟು ಬೇರೆ ಕಡೆಗೆ ವಲಸೆ ಹೋಗುತ್ತಾರೆ. ಏಕೆಂದರೆ ಅಲ್ಲಿನ ಭೂಮಿಗೆ ಮಳೆಯೇ ಆಧಾರ. ಕೋಲಾರ ಜಿಲ್ಲೆಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿನವರಿಗೆ ಸುಮಾರು 400-500 ಎಕರೆಯವರೆಗೆ ಜಮೀನು ಕೊಡುತ್ತಾರೆ. ಅದಕ್ಕೆ ಬೇಕಾದ ಅನುಕೂಲಗಳನ್ನು ಅಲ್ಲಿ ಮಾಡಿಕೊಡುತ್ತಾರೆ.

ಶ್ರೀ ಎ. ವಿ. ಮುನಿಸ್ವಾಮಿ.—ಅಲ್ಲಿ ಹಾಣಿಸೇಮರ ಹೆಚ್ಚು. ಅಲ್ಲಿ ಒಂದು ಬೆಳೆ ಬಂದರೆ 4 ವರ್ಷಗಳವರೆಗೆ ಬರ ಬರುವುದಕ್ಕೆ ಸಾಧ್ಯವಿದೆ. ಅಲ್ಲಿನವರಿಗೆ ವ್ಯವಸಾಯ ಅಷ್ಟಾಗಿ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಕಡೆಗಳಲ್ಲಿ ಬ್ಲಾಕ್‌ಮಾರ್ಕೆಟ್ ಮಾಡುವುದೂ ಉಂಟು. ಇನ್ನು ಏನೇನು ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಎ. ವಿ. ಮುನಿಸ್ವಾಮಿ.—ನನ್ನಾನ್ಯ ಸದಸ್ಯರು ವ್ಯವಸಾಯಗಾರರಲ್ಲ. ಅವರಿಗೆ ವ್ಯವಸಾಯದ ವಿಚಾರ ಗೊತ್ತಿಲ್ಲ. ನನ್ನ ತಾತ, ಮುತ್ತಾತ, ನಮ್ಮ ಮಕ್ಕಳು ವ್ಯವಸಾಯಗಾರರಾಗಿದ್ದಾರೆ. ನಾನು ಎಂ. ಎಲ್. ಎ. ಆಗಿದ್ದರೂ, ಅದರಲ್ಲಯೇ ಜೀವನ ಮಾಡುತ್ತಿದ್ದೇನೆ. 4 ಎಕರೆ ಜಮೀನು ಇಟ್ಟುಕೊಂಡು ಏನು ಮಾಡುವುದಕ್ಕೆ ಸಾಧ್ಯ? ಆದ್ದರಿಂದ ಸರ್ಕಾರದವರು ಎಲ್ಲ ಭೂಮಿಯನ್ನು ಜನರ ಕೈತಪ್ಪಿಸಿ ಎಲ್ಲಾ ಕಡೆಗಳಲ್ಲೂ ಕಲೆಕ್ಟೀವ್ ಫಾರಂಗಳನ್ನು ಮಾಡಿ. ಅದರಿಂದ ಲಾದರೂ ದೇಶದಲ್ಲಿ ವ್ಯವಸಾಯ ಮುಂದುವರಿಯಲಿ. ಕಳೆದ 25 ವರ್ಷಗಳಿಂದ ಬಂದೀ ಈ ವಾದಗಳಲ್ಲೇ ಮುಕ್ತಾಯವಾಯಿತು. ಆದಕ್ಕೆ ನಾನು ಇಷ್ಟನ್ನೆಲ್ಲಾ ಹೇಳಬೇಕಾಯಿತು. ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ನಾನು ಮೊಟ್ಟ ಮೊದಲನೆಯದಾಗಿ ಮಾನ್ಯ ರೆವಿನ್ಯೂ ಸಚಿವರನ್ನು, ಈ ಸಂಯುಕ್ತ ಪಂಥೀಯ ಸರ್ಕಾರದ ಸಮಿತಿಯ ಸದಸ್ಯರನ್ನು, ಪ್ರಾಯೋಗಿಕವಾಗಿ ಸರ್ಕಾರದವರನ್ನು ರಾಜ್ಯದ ಗೇಣೀದಾರರ ಪರವಾಗಿ ಹೃದಯಪೂರ್ವಕ ಅಭಿನಂದಿಸುತ್ತೇನೆ. ಒಂದು ರೀತಿಯಲ್ಲಿ ನೋಡಿದ್ದಾದರೆ ಈ ರಾಜ್ಯದಲ್ಲಿ ಮೊದಲು ಎಂಬೆಲ್ಲಾ ನಮ್ಮ ಸೋಷಿಯಲಿಸ್ಟ್ ಪಾರ್ಟಿಯವರೇ ಪ್ರಪ್ರಥಮವಾಗಿ ಇಲ್ಲಿಗೆ 25 ವರ್ಷಗಳ ಕೆಳಗೆ ಈ ರಾಜ್ಯದಲ್ಲಿ 'ಉಳುವವನೇ (ಭೂಮಿಗೆ) ಹೊಲದೊಡೆಯನಾಗಬೇಕು. ಎಂದು ಹೇಳಿ ಇದರ ಒಂದು ದೊಡ್ಡ ಹೋರಾಟವನ್ನೇ ನಡೆಸಿ ಕೊಂಡು ಬಂದವರು.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ಬೇರೆ ಇನ್ನಾವ ಪಾರ್ಟಿಯವರೂ ಅದಕ್ಕೆ ಹೋರಾಟ ನಡೆಸಲಿಲ್ಲವೋ?

ಉಪಾಧ್ಯಕ್ಷರು.—ಇನ್ನೂ ಕೆಲವು ಪಕ್ಷಗಳವರು ನಡೆಸಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಮ್ಯುನಿಸ್ಟ್ ಪಾರ್ಟಿಯವರೂ ನಡೆಸಿದ್ದಾರೆ. ಆದರೆ ಅವರು ವೈಯಕ್ತಿಕವಾಗಿ ಕಡೆಗೆ ಭೂಮಾಲೀಕತ್ವವನ್ನು ಒಪ್ಪುತ್ತಾರೆಯೇ ಎಂದು ಅವರನ್ನು ಕೇಳಬೇಕಾಗಿದೆ. ಅಂತೂ ಒಟ್ಟಿನಲ್ಲಿ ಪ್ರಗತಿಶೀಲ ಮನೋಭಾವವುಳ್ಳವರೆಲ್ಲಾ ಕರ್ನಾಟಕದಲ್ಲಿ ಹೋರಾಟ ಮಾಡಿದ್ದರೆ, ಈ ಹಳೇ ಮೈಸೂರು ವಿಭಾಗದಲ್ಲಿ ಮಾತ್ರ ಪ್ರಪ್ರಥಮವಾಗಿ ಈ ಹೋರಾಟವನ್ನು ಸೋಷಿಷಿಯಲಿಸ್ಟ್ ಪಾರ್ಟಿಯವರು 1950-51 ರಲ್ಲಿ ಕಾಗೋಡಿನಲ್ಲಿ ಇದರ ಕೂಗೆಬ್ಬಿಸಿದವರು ನಮ್ಮ ಪಕ್ಷದವರು. ಆದರೆ ಈ ಒಂದು ಚಳುವಳಿಗೆ ಬೆಂಬಲವನ್ನಿತ್ತು, ಗೇಣೀದಾರರ ಬಗ್ಗೆ ಅನುಕಂಪವನ್ನು ತೋರಿರತಕ್ಕ ಎಲ್ಲಾ ಮಹನೀಯರಿಗೂ ನಾನು ಪ್ರಾಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುವುದರ ಜೊತೆಗೆ ನಾನು ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇದು ನನ್ನ ಅದ್ಯ ಕರ್ತವ್ಯ. ಆ ಕಾಗೋಡಿನ ಪ್ರಪ್ರಥಮ ಚಳವಳಿಯಲ್ಲಿ ಯಾರು ಯಾರು ಪಾಲುಗೊಂಡಿದ್ದರೆಂದರೆ ನನ್ನ ಮತ್ತು ಶ್ರೀ ಕಾಗೋಡು ತಿಮ್ಮಪ್ಪನವರ ಗುರುಗಳಾದ ದಿವಂಗತ ಶಾಂತವೇರಿ ಗೋಪಾಲಗೌಡರು. ಇವರನ್ನು ನಾನು ತುಂಬು ಹೃದಯದಿಂದ ಸ್ಮರಿಸುತ್ತೇನೆ. ಅವರು ಈ ದಿನವನ್ನು ಇವ್ವಿದ್ದರೆ ಅವರ ಹೃದಯ ಎಷ್ಟು ಆನಂದದಿಂದ ತುಂಬಿ ನಲಿದಾಡುತ್ತಿತ್ತೊ ಕಾಣೆ. ಆ ದಿವಸ ಇನ್ನೂ ಯಾರು ಯಾರು ಆ ಹೋರಾಟದಲ್ಲಿ ಭಾಗವಹಿಸಿದ್ದರೆಂದರೆ—ಶ್ರೀಯುತರಾದ ಕೆ. ಜಿ. ಕೆ. ರೆಡ್ಡಿ, ಖಾದ್ರಿ ಶಾಮಣ್ಣನವರು, ರಾಜಗೋಪಾಲಾಚಾರ್ಯರು, ಮಲ್ಲಿಗೆ ಗೋವಿಂದ ರೆಡ್ಡಿಯವರು, ಮತ್ತೇ ಇಂದು ಮೈಲ್ಮನೆಯು ಸದಸ್ಯರಾಗಿರತಕ್ಕ ಶ್ರೀ ಕಣ್ಣನ್ ಅವರು, ವೈ ಆರ್. ಪರಮೇಶ್ವರಪ್ಪನವರು ಗರುಡಶರ್ಮರು ಮತ್ತು ಜಿ ಸದಾಶಿವರಾವ್ ಅವರು—ಇಷ್ಟು ಪ್ರಮುಖ ವ್ಯಕ್ತಿಗಳು ಆ ಕಾಗೋಡು ಗೇಣೀದಾರರ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಅಂದು ಏನು ಒಂದು ಈ ಮೂಕ ವೇದನೆಯು ಶೋಕ ತುಂಬಿದ ಕಾಗೋಡಿನ ಗೇಣೀದಾರರ ಬಗ್ಗೆ ಒಂದು ಹೋರಾಟವನ್ನು ಪ್ರಾರಂಭಿಸರಾಯಿತೋ ಅದರಲ್ಲಿ ಭಾಗವಹಿಸಿದ್ದವರು ಜೈಲುವಾಸವನ್ನು ಅನುಭವಿಸಿ, ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್ ಆಡಳಿತದ ದಬ್ಬಾಳಿಕೆ ದೌರ್ಜನ್ಯಗಳಿಗೆ ಎದೆಗುಂದದೆ ಒಂದು ದಿಟ್ಟ ನಿಲುವನ್ನು ತಾಳಿದ್ದರಿಂದ, ಇಂದು ಈ ಮನೆಯಾದ ಕಾನೂನು ಆ ಮೂಕ ಗೇಣೀದಾರರು ಒಂದು ಸಮಾಧಾನದ ಉಸಿರನ್ನು ಬಿಡುವಂಥ ಒಂದು ಸ್ಥಿತಿಯನ್ನು ತಂದಿದೆ. ಅದಕ್ಕೋಸ್ಕರವಾಗಿ ನಾನು ಮತ್ತೊಮ್ಮೆ ಈ ಸರ್ಕಾರವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅದರೆ ಇಲ್ಲಿ ಒಂದು ಮಾತನ್ನು ನಾನು ವಿಷ್ಟು ಮನಸ್ಸಿನಿಂದ ಹೇಳಬೇಕಾಗಿದೆ. ನಾನು ಗೇಣೀದಾರನೂ ಅಲ್ಲ. ರೈತನೂ ಅಲ್ಲ, ಇಕ್ಕ ಭೂ ಮಾಲೀಕನಂತೂ ಅಲ್ಲವೇ ಅಲ್ಲ. ನನ್ನ ಹಿರಿಯರೂ ಕೂಡ ಭೂಮಾಲೀಕರಲ್ಲ. ಅವರು ಬೇಸಾಯದ ಕೂಲಿಗಾರರಾಗಿದ್ದವರು. ಈ ದಿವಸ ಕೂಡ ನನ್ನ ತಾಯಿ ಜಮೀನ್ದಾರರ ಗದ್ದೆಯನ್ನು ಕೊಯ್ಯುವುದಕ್ಕೆ ಹೋಗುತ್ತಿದ್ದಾಳೆ. ನನ್ನ ತಂದೆಯವರು ಬಸ್ ಸ್ಟಾಂಡಿನಲ್ಲಿ ಕೂಲಿ ಮಾಡುತ್ತಿದ್ದಾರೆ. ಇಂಥ ನನಗೆ ಯಾರೋ ಒಂದು ಪರಿಪತ್ರವನ್ನು ಕಳುಹಿಸಿದ್ದಾರೆ, ಅದನ್ನು ನಾನು ಮಾನ್ಯ ಅಧ್ಯಕ್ಷರ ಕಡೆಗೆ ಸರ್ಕಾರಕ್ಕೆ ಕಳುಹಿಸಲು ಕೊಡುತ್ತೇನೆ. ಈ ಪತ್ರದಲ್ಲಿ ನನಗೆ ಬರೆದಿದ್ದಾರೆ, ಮೊದಲು ಕೋಣಂದೂರಲ್ಲಿ ನಿಮಗೆ ಇರತಕ್ಕ ಭೂಮಿಯ ೨ ಭೂರಹಿತರಿಗೆ ಹಂಚಿ ಎಂಬುವಾಗಿ. ನನಗೆ ಎಲ್ಲಿಯೂ ಯಾವ ಬಗೆಯ ಜಮೀನೂ ಇಲ್ಲ. ಜಮೀನ್ದಾರರ ತುಳಿತಕ್ಕೆ ಸಿಕ್ಕಿ ನರಳತಕ್ಕ ಕೂಲಿಗಾರರಲ್ಲಿ ನಾನೊಬ್ಬ. ನಾನು ನನ್ನ ಕಲೆಯ ಮೇರೆ ಗೊಬ್ಬರವನ್ನು ಹೊತ್ತು ಹಾಕಿದ್ದೇನೆ. ನನ್ನ ತಾಯಿ ಇಂದಿಗೂ ಬೇಸಾಯದ ಕೂಲಿಗಾರ—ಆಳು. ಈ ಶೋಷಣೆಯನ್ನು ತಪ್ಪಿಸುವುದಕ್ಕಾಗೇ ನಾನು ಉಳುವವನೇ ಹೊಲದೊಡೆಯನಾಗಬೇಕು. ಎಂದು ಹೇಳುತ್ತಿರುವುದು. ಅಂದು ಕಾಗೋಡಿನ ಹೋರಾಟದಲ್ಲಿ ನಮ್ಮ ಪೂಜ್ಯ ಗುರುಗಳಾದ ಡಾ॥ ಲೋಹಿಯಾರವರೂ ಕೂಡ ಭಾಗವಹಿಸಿದ್ದರು. ಆದರೆ ಅಂದಿನಿಂದ ಇಂದಿನವರೆಗೂ ಉಳುವವನು ಹೊಲದೊಡೆಯ ಆಗಬಾರದು ಎಂದು ಅದಕ್ಕೆ ಅಡ್ಡಗಾಲನ್ನು ಕೊಡತಕ್ಕ ಜನರೇನಿದ್ದಾರೆ ಅವರು ಇಂದೂ ಈ ಆಡಳಿತ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ; ಆ ಸಂತತಿ—ಆ ಒಂದು ಪರಂಪರೆ ಇನ್ನೂ ಇದ್ದೇ ಇದೆ. ಇಲ್ಲ ಇರತಕ್ಕ 165 ಜನ ಆಡಳಿತ ಕಾಂಗ್ರೆಸ್ಸಿಗರೇನಿದ್ದಾರೆ ಈ ಜನರು ಏನು ತಾವು ಆ ಇಂದಿರಾಗಾಂಧಿಯ ಪಕ್ಷದವರೆಂದು ಹೇಳಿಕೊಳ್ಳುತ್ತಿದ್ದಾರೆ—ಇವರಲ್ಲಿ ನನಗೆ ಹೆಸರನ್ನು ಹೇಳುವುದಕ್ಕೂ ಧೈರ್ಯವಿದೆ, ಈ ಗೇಣೀ ಮನೂದೆಗೆ ಅಡ್ಡಗಾಲನ್ನು ಕೊಡತಕ್ಕ ಜನ ರೂಲಿಂಗ್ ಪಾರ್ಟಿಯಲ್ಲಿದ್ದಾರೆ. ಆದಾಗ್ಯೂ ಕೆಲವು ಪ್ರಗತಿಶೀಲ ವ್ಯಕ್ತಿಗಳಲ್ಲಿ ಎಂದು ಹೇಳಲಾರೆ. ಪೊಟ್ಟಪೊದಲನೆಯವಾಗಿ ಈ ಗೇಣೀಶಾಸನಕ್ಕೆ ಜೀವದಾನ ಕೊಟ್ಟ ಶ್ರೀಮಾನ್ ಕಡಿದಾಳ್ ಮಂಜಪ್ಪನವರನ್ನು ನಾನು ತುಂಬು ಹೃದಯದಿಂದ ಸ್ಮರಿಸುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿರತಕ್ಕ ಲಕ್ಷ ಲಕ್ಷ ಗೇಣೀಜನರ ಹಿತವನ್ನು ಪೊಟಕುಮಾಡುತ್ತಿದ್ದಂಥ ಹಿಂದಿನ ಆಕ್ಟಿನಲ್ಲಿದ್ದ 14ನೇ ಸೆಕ್ಷನ್ ಏನಿತ್ತು—ಅದನ್ನು ಈ ಸಂಯುಕ್ತ ಪರಿಶೀಲನಾ ಸಮಿತಿ

ಸಂಪೂರ್ಣವಾಗಿ ಕಿತ್ತು ಹಾಕಿ, ಭೂಮಾಲೀಕರಿಗೆ ಗೇಣಿದಾರನಿಂದ ಜಮೀನನ್ನು ಕಿತ್ತು ಕೊಳ್ಳುವುದಕ್ಕೇನೊಂದು ಅವಕಾಶವಿತ್ತು ಅದನ್ನು ಇಂದು ಸಂಪೂರ್ಣವಾಗಿ ರದ್ದು ಮಾಡಿದ್ದಾರೆ. ಅದಕ್ಕಾಗಿ ನಾನು ರಾಜ್ಯದಲ್ಲಿರತಕ್ಕ ಲಕ್ಷಾಂತರ ಜನ ಗೇಣಿದಾರರ ಪರವಾಗಿ ಈ ಸಮಿತಿಯನ್ನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಈ ವಿಧೇಯಕ ನನ್ನ ಪೂಜ್ಯ ಗುರುಗಳಾದ ದಿವಂಗತ ಗೋಪಾಲಗೌಡರು ಇರಬೇಕಾಗಿತ್ತು. ಅವರ ಜೀವನದಲ್ಲಿ ಆಹರ್ನಿಶಿಯಾವುದಕ್ಕಾಗಿ ಅವರು ದುಡಿದು ಮಡಿದರೋ ಅಂಥ ಒಂದು ವ್ಯಕ್ತಿ ಇದಿದ್ದರೆ ಅವರಿಗಾಗುತ್ತಿದ್ದ ಆನಂದ ಅಷ್ಟಿಷ್ಟಲ್ಲ. ಆದುದರಿಂದ ನಾನು ಆ ನನ್ನ ಗುರುಗಳ ಬಗ್ಗೆ ಸರ್ಕಾರವನ್ನು ಈ ಕಾನೂನನ್ನು ತಂದುದಕ್ಕಾಗಿ ಅಭಿನಂದಿಸುತ್ತೇನೆ. ಇಷ್ಟನ್ನು ಹೇಳಿ ಇನ್ನು ವಾಲಭೂತವಾದ ಒಂದು ವಿಷಯಕ್ಕೆ ಬರುತ್ತೇನೆ. ಭೂಮಿಯು ಒಂದು ಉತ್ಪಾದನಾ ಸಾಮಗ್ರಿ. ಈ ಉತ್ಪಾದನಾ ಸಾಧನವೇನಿದೆ ಈ ಭೂಮಿಯನ್ನು ಪರಭಾರೆ ಮಾಡುವ ವಸ್ತುವಾಗಬಾರದು. ಈಗ ಭೂಮಾಲೀಕನ ಕೈಕೆಳಗೆ ಗೇಣಿದಾರ, ಅವನ ಕೈಕೆಳಗೆ ವ್ಯವಸಾಯದ ಕೂಲಿಗಾರ ಇದ್ದಾರೆ. ಗೇಣಿದಾರರು ಬೆವರು ಸುರಿಸಿ ಕಷ್ಟಪಟ್ಟು ದುಡಿದು ಬೆಳೆ ತೆಗೆಯುವರು, ಅದನ್ನು ಮಾಲೀಕರಿಗೆ ತಿನ್ನಲು ನೀಡುವರು. ಈ ಒಂದು ಪದ್ಧತಿ ನಡೆದು ಬಂದಿದೆ. ಇದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಅನೇಕ ಕಡೆಗಳಲ್ಲಿದೆ. ಇದನ್ನು ಕಡೆಗಾಣಿಸಬೇಕೆಂದು ಆ ಉದ್ದೇಶದಿಂದ ಹೋರಾಟಮಾಡಿದ ಜನರನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಬೇಕು. ಯಾವುದೇ ಕಾರಣದಿಂದಲೂ ಭೂಮಿಯನ್ನು ಪರಭಾರೆ ಮಾಡಬಾರದು, ಉತ್ಪತ್ತಿಯ ಸಾಧನ ಇದು. ಹೀಗೆ ಎಲ್ಲಾ ಉತ್ಪತ್ತಿ ಸಾಧನಗಳನ್ನೂ ಕೂಡ ಯಾರು ಉತ್ಪತ್ತಿ ಮಾಡುವರೋ ಅವರಿಗೆ ವಿನಿಯೋಗಿಸಬೇಕು. ಯಾರು ಉತ್ಪತ್ತಿ ಮಾಡುವುದಿಲ್ಲವೋ ಅವರಿಂದ ಸರಕಾರ ಭೂಮಿಯನ್ನು ವಶಪಡಿಸಿಕೊಂಡು ಉತ್ಪಾದನೆ ಮಾಡುವವರಿಗೆ ಅದನ್ನು ಕೊಡಬೇಕು, ಈ ಮೂಲಭೂತವಾದ ಸಿದ್ಧಾಂತದ ವಿಚಾರವನ್ನು ಸರಕಾರದ ಮುಂದೆ ನಿವೇದಿಸುತ್ತಾ ಒಂದು ಮಾತು ಹೇಳುವುದಾದರೆ ಇಂದು ಎಲ್ಲಾ ಕಡೆಗಳಲ್ಲೂ ಹರಿಜನ ಗಿರಿಜನರಿಗೆ ಭೂಮಿ ಕೊಟ್ಟಿದ್ದಾರೆ, ಆದರೆ ಇಂದು ಭೂಮಿ ಅವರ ಕೈಲಿಲ್ಲ. 15—20 ವರ್ಷಗಳವರೆಗೆ ಅದನ್ನು ಪರಭಾರೆ ಮಾಡುವ ಹಕ್ಕು ಅವರಿಗಿಲ್ಲವೆಂದು ತಿಳಿಸಿದ್ದರೂ ಕೂಡ 15—20 ವರ್ಷಗಳ ಮುಂದಿನ ತಾರೀಖನ್ನು ಹಾಕಿ ಭೂಮಿಯನ್ನು ಇತರರು ಬರೆಸಿಕೊಂಡಿರುವ ಘಟನೆಗಳು ಇಂದು ಜೀವಂತವಾಗಿವೆ. ಹರಿಜನರ ಹೆಸರಿನಲ್ಲಿ ಭೂಮಿಯನ್ನು ಮಂಜೂರುಮಾಡಿಸಿ ಇತರರು ಬರೆಸಿಕೊಂಡಿರುವ ಅನೇಕ ಉದಾಹರಣೆಗಳಿವೆ. ಯಾರು ನಿಜವಾಗಿ ದುಡಿಯುವರೋ ಅವರು ಮಾತ್ರ ಅನುಭವಿಸಬೇಕು. ಅದನ್ನು ಬಿಟ್ಟು ಒಬ್ಬರ ಸೆರೆನಲ್ಲಿರುವುದನ್ನು ಇನ್ನೊಬ್ಬರು ಅನುಭವಿಸಲು ಹೀಗೆ ಮೋಸ ಮಾಡಲು ಯಾರಿಗೂ ಅವಕಾಶವಿರಬಾರದು. ಈ ದಿವಸ ಹಳ್ಳಿಗಳಲ್ಲಿ ಯಾರೋ ನೆಲ ಹಡೆದು ಯಾರೋ ಅನುಭವಿಸುತ್ತಿರುವ ನಿದರ್ಶನಗಳಿವೆ ಕಡು ಬಡವರ ವಿಚಾರದಲ್ಲಿ ಈ ರೀತಿಯಾಗಿರುವ ಉದಾಹರಣಗಳಿವೆ. ದುಡಿಯುವವರಿಗೆ ಇದರಿಂದ ನಾಳೆ ಭೂಮಿಯಿಲ್ಲದಂತಾಗುವ ಸಂದರ್ಭವಿದೆ. ಶ್ರೀಮಂತರು ಹೀಗೆ ಬಡವರ ಜಮೀನುಗಳನ್ನು ಅಕ್ರಮಿಸಿಕೊಂಡಿದ್ದಾರೆ. ಅವರು ಬಡವರನ್ನು ದುಡಿಯುವವರನ್ನು ಶೋಷಣೆ ಮಾಡುತ್ತಿದ್ದಾರೆ. ಇಂದು ಹರಿಜನ ಗಿರಿಜನರಿಗೆ ಕೊಟ್ಟಿರುವ ಭೂಮಿಯನ್ನು ಬೇರೆಯವರು ಕಬಳಿಸಿದ್ದಾರೆ. ದುಡಿಸಿಕೊಂಡು ಶೋಷಣೆ ಮಾಡುವ ಭೂಮಾಲೀಕರಿಗೆ ಇತರರ ಭೂಮಿ ಸೇರಲು ಇತರರು ಪರಭಾರೆ ಮಾಡಲು, ಮಾಲೀಕರು ಮಣ್ಣಿನ ಮಕ್ಕಳಿಗೆ ಅನ್ಯಾಯವಾಡಲು ಅವಕಾಶವಿರಬಾರದು. ಇದು ಮೂಲಭೂತವಾದ ಸಿದ್ಧಾಂತ. ಇದಕ್ಕೆ ಕಾಯಿದೆ ಮಾಡಿದರೂ ಮಣ್ಣಿನ ಮಕ್ಕಳಿಗೆ ಪ್ರಯೋಜನವಾಗುತ್ತಿಲ್ಲ. ಇದರ ಬಗ್ಗೆ ಗಮನಕೊಟ್ಟು ತಕ್ಕ ಕ್ರಮ ತೆಗೆದುಕೊಳ್ಳಬೇಕು. ಪರಭಾರೆ ಮಾಡಲು ಸಾಧ್ಯವಾಗದಂತೆ ಕಾನೂನಿನಲ್ಲಿ ಅವಕಾಶ ಕಲ್ಪಿಸಬೇಕು. ಈ ಕ್ರಮವನ್ನು ವಿರೋಧ ಮಾಡಲು ಆಡಳಿತ ಪಕ್ಷದಲ್ಲೂ ಪಟ್ಟಭದ್ರ ಹಿತಗಳಿವೆ. ಈ ಪಟ್ಟಭದ್ರ ಹಿತಾಸಕ್ತಿಗೆ ಅವಕಾಶ ಇರಬಾರದು. ಶಾಮಣ್ಣನವರ ಭಾಷಣ ಕೇಳಿ ಇದನ್ನು ಹೇಳುವುದು. ಅವರು ಪಟ್ಟಭದ್ರ ಹಿತಾಸಕ್ತಿಗಳನ್ನು ರಕ್ಷಣೆಮಾಡುವರೆಂದು ನಾನು ಆರೋಪಮಾಡುತ್ತಿಲ್ಲ. ಆದರೆ ಅವರು ಹೇಳಿದ ಪ್ರಕಾರ ನ್ಯೂನತೆಯಿದೆ. ಇಂದು ವಿರೋಧ ಪಕ್ಷದಲ್ಲೂ ಕೆಲವರ ವಿರೋಧ ಇದರ ಬಗ್ಗೆ ಇರಬಹುದು. ಶಾಮಣ್ಣನವರ ಅಭಿಪ್ರಾಯ ನೋಡಿದರೆ ಇದಕ್ಕೆ ಅವರು ವಿರೋಧವಾಗಿರುವುದು ಕಂಡುಬರುವುದು. ಇದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಪ್ರಗತಿ ಎಂಬ ಪದದ ಅರ್ಥವೇನು ಎಂಬುದನ್ನು ನೋಡಬಹುದು. ವಿರೋಧ ಪಕ್ಷದಲ್ಲಿ ಬಹಳ ಪಕ್ಷಗಳಿವೆ, ಕೆಲವು ಪ್ರಗತಿಶೀಲ ಪಕ್ಷಗಳೆಂದು ಭ್ರಮೆ ಹುಟ್ಟಿಸಬಹುದು. ಇದು ವಿಪರ್ಯಾಸವಲ್ಲ. ಕಣ್ಣಿಗೆ ಮಣ್ಣೆರಚುವ ನೀತಿ ಅನುಸರಿಸುವ ಕೆಲವರಿದ್ದಾರೆ. ಆಡಳಿತ ಕಾಂಗ್ರೆಸ್ಸಿನಲ್ಲಿ ಕೂಡ ಪಟ್ಟಭದ್ರ ಹಿತ ಸಂರಕ್ಷಣೆಮಾಡಲು ಹೋರಾಟ ಮಾಡುವವರಿದ್ದಾರೆ. ಪ್ರಗತಿಪರವಾದ ಕಾನೂನನ್ನು ವಿರೋಧಿಸಿ ಅದಕ್ಕೆ ಅಡ್ಡಗಾಲು ಹಾಕುವುದಾದರೆ ಕಾಗೋಡು ಹೋರಾಟ ಮತ್ತೆ ಬರುವುದಿಲ್ಲ, ತೆಲಂಗಾಣದ ಹೋರಾಟ ಜ್ಞಾಪಕಮಾಡಿ

(ಶ್ರೀ ಕೋಣಂದೂರು ಲಿಂಗಪ್ಪ)

ಕೊಳ್ಳಬೇಕು. ಕಾಗೋಡು ಹೋರಾಟ ಅಹಿಂಸಾತ್ಮಕವಾದ ಹೋರಾಟವಾಗಿತ್ತು. ಗೇಣಿದಾರ ಮಾಲೀಕನಾಗುವುದಕ್ಕೆ ವಿರೋಧಿಸಿದರೆ ಹಿಂಸಾತ್ಮಕ ಕ್ರಾಂತಿಯಾಗುವುದು ನಾವು ಅಹಿಂಸಾತ್ಮಕ ವಾದಿಗಳು. ಅದುದರಿಂದ ಮಾಲೀಕರಿಗೆ ಮತ್ತು ಪ್ರಗತಿಪರವಾದ ಕಾಯಿದೆಯನ್ನು ವಿರೋಧಿಸು ವವರಿಗೆ ಒಂದು ಮಾತನ್ನು ಹೇಳುತ್ತೇನೆ. ಅವರು ಇದು ಇನ್ನು ಪ್ರಗತಿಶೀಲವಾದುದು ಆಗುವು ದಕ್ಕೆ, ಕ್ರಾಂತಿಕಾರಕ ಆಗುವುದಕ್ಕೆ ನಲಹೆ ಮತ್ತು ನೆರವು ಕೊಡಬೇಕು. ಅದನ್ನು ಬಿಟ್ಟು ಉತ್ಪಾದನೆಯ ಹೆಸರಿನಲ್ಲಿ ಆರ್ಥಿಕ ಸಮಾನತೆಯ ಹೆಸರಿನಲ್ಲಿ ಇಂಥ ಕಾಯಿದೆಯನ್ನು ವಿರೋಧ ಮಾಡುವುದಾದರೆ ಮುಂದೆ ಪರಿಣಾಮ ನೆಟ್ಟಗಿರುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಶಾಮಣ್ಣನವರು ವಿಧವೆಯರು, ಧರ್ಮಸಂಸ್ಥೆಗಳು ಮುಂತಾದುವು ಗಳಿಗೆ ಸಂಬಂಧಪಟ್ಟ ಹಾಗೆ ವಿನಾಯಿತಿ ಇರಬೇಕು ಎಂಬ ಕೆಲವು ಅಭಿಪ್ರಾಯಗಳನ್ನು ಸೂಚಿಸಿದರು ಇನ್ನೊಬ್ಬರು ಮಠಗಳಿಗೆ ವಿನಾಯಿತಿ ಕೊಡಬೇಕೆಂದು ಹೇಳಿದರು. ವಿದ್ಯಾಸಂಸ್ಥೆಗಳಿಗೆ ವಿನಾ ಯಿತಿ ಇರಬೇಕೆಂದು ಹೇಳಿದರು. ಸೆಂಟ್ರಲ್ ಜೈಲ್‌ನಲ್ಲಿರುವವರಿಗೆ, ಪೆರ್ಪೆಚುವಲ್ ಪೆನ್ಷನ್‌ನಲ್ಲಿರುವವರಿಗೆ ಸಹ ವಿನಾಯಿತಿ ಕೊಡಬೇಕಾಗುತ್ತದೆ. ವಿದ್ಯಾಸಂಸ್ಥೆಗಳು, ಮಠಗಳು ಮಾಡುವ ಕೆಲಸ ಸರಕಾರ ಮಾಡಬೇಕು. ಇದುವರೆಗೆ ಈ ರಾಜ್ಯದಲ್ಲಿ ಧರ್ಮದ ಹೆಸರಿನಲ್ಲಿ, ಮಠದ ಹೆಸರಿನಲ್ಲಿ ವಿದ್ಯಾ ಸಂಸ್ಥೆಗಳ ಹೆಸರಿನಲ್ಲಿ ನಮ್ಮ ಜನರನ್ನು ಶೋಷಣೆ ಮಾಡಿದ್ದು ಸಾಕು. ಕೆಲವರು ಒಳ್ಳೆಯವರೂ ಇರಬಹುದು. ಎಷ್ಟಾದರೂ ಕರ್ಮದಿಂದ ಕೆಲಸಮಾಡುವವರೂ ಇರಬಹುದು ಅವರನ್ನು ಕೃತಜ್ಞತೆ ಯಿಂದ ಸ್ಮರಿಸುತ್ತೇನೆ. ಆದರೆ ನಮ್ಮ ಭಾರತದ ಇತಿಹಾಸ ನೋಡಿದರೆ 5 ಸಾವಿರ ವರ್ಷಗಳಿಂದ ಧರ್ಮ, ಮಠ, ವಿದ್ಯಾ ಸಂಸ್ಥೆ ಇವುಗಳ ಹೆಸರಿನಲ್ಲಿ ನಮ್ಮ ಜನರನ್ನು ಶೋಷಣೆ ಮಾಡಿಕೊಂಡು ಬಂದಿರುವುದನ್ನು ನಾವು ನೋಡಿದ್ದೇವೆ.

Mr. DEPUTY SPEAKER.—How much more time does the hon. member require?

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನು ಅರ್ಧ ಗಂಟೆಯೊಳಗೆ ಮುಗಿಸುತ್ತೇನೆ.

Mr. DEPUTY SPEAKER.—The hon. member may take 15 minutes tomorrow.

The House now stands adjourned to meet tomorrow at 1-00 P. M.

The House adjourned at Six of the Clock to meet again at One of the Clock on Friday, the 11th May 1973.

WD 20344—GPB—550 - 20-8-1973